Editor: NITYANANDASWAMI Publisher: U. BASAVARAJ
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE


ಸಂಪುಟ 16 | ಸಂಚಿಕೆ 21 | ಮೇ 16–22, 2022 | ಪುಟ 16 | ರೂ.10/-
Volume: 16 Issue: 21 May 16-22, 2022 Pages: 16 Price: 10/-
https://janashakthi.wordpress.com e-mail : js_weekly@yahoo.com




ರಾಜದ್ರೋಹ ಐಪಿಸಿ ಕಲಮು ಕೊನೆಗಾಣಲಿ

ಮತಾಂತರ ನಿಷೇಧ ಕಾಯ್ದೆ ಸುಗ್ರೀವಾಜ್ಞೆಯ ತರಾತುರಿ ಏಕೆ?





ನಕಲಿ ಜಾತಿ ಪ್ರಮಾಣ ಪತ್ರ ವಂಚಕರನ್ನು ರಕ್ಷಿಸುತ್ತಿದೆಯೇ ಸರ್ಕಾರ!



ಫಿಲಿಪ್ಪೀನ್ಸ್ ಗೆ ಈಗ ಮರಿ ಸರ್ವಾಧಿಕಾರಿ



ವಿಠ್ಠಲ ಭಂಡಾರಿ ನೆನಪು ಸಹಯಾನ ಸಾಹಿತ್ಯೋತ್ಸವ

‘ರಾಜದ್ರೋಹ’ ಕಾನೂನನ್ನು ರದ್ದುಗೊಳಿಸಿ: ಸಿಪಿಐ(ಎಂ) ಆಗ್ರಹ

ದೇಶದ್ರೋಹದ ಕಾನೂನು ಈಗ ನ್ಯಾಯಾಂಗ ಪರಿಶೀಲನೆಗೆ ಒಳಪಟ್ಟಿರುವುದರಿಂದಾಗಿ, ಈ ಕಾನೂನಿನ ನಿಬಂಧನೆಯನ್ನು ಮರುಪರಿಶೀಲಿಸುವುದಾಗಿ ಮತ್ತು ಮರುಪರೀಕ್ಷಿಸುವುದಾಗಿ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಲೇ ಬೇಕಾಗಿ ಬಂದಿದೆ. ಐಪಿಸಿಯ ಸೆಕ್ಷನ್ 124 ಎ ಅನ್ನು ಸದ್ಯಕ್ಕೆ ಅಮಾನತಿನಲ್ಲಿಡುವಂತೆ ಸುಪ್ರಿಂ ಕೋರ್ಟ್ ಆದೇಶಿಸಿರುವುದು ಮತ್ತು ಎಲ್ಲಾ ಬಾಕಿ ಇರುವ ವಿಚಾರಣೆಗಳಿಗೆ ತಡೆ ಹಾಕಿರುವುದು ಹಾಗೂ ದೇಶದ್ರೋಹ ಕಾನೂನಿನಡಿಯಲ್ಲಿ ಹೊಸ ಪ್ರಕರಣಗಳನ್ನು ದಾಖಲಿಸದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿರುವುದು ಒಳ್ಳೆಯ ಸಂಗತಿ. ಸುಪ್ರಿಂ ಕೋರ್ಟ್ ಈ ಸರ್ಕಾರದ ಮರುಪರಿಶೀಲನೆಗೆ ಕಾಯದೆ ಜುಲೈ 2022 ರಲ್ಲಿ ವಿಚಾರಣೆಯನ್ನು ಪುನರಾರಂಭಿಸಿದಾಗ ಭಾರತೀಯ ದಂಡ ಸಂಹಿತೆಯ ಈ ಕಾಲಕ್ಕೆ ತಕ್ಕುದಲ್ಲದ ಸೆಕ್ಷನ್ 124 ಎ ಅನ್ನು ರದ್ದುಗೊಳಿಸಲು ಮುಂದಾಗಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಸಿಪಿಐ(ಎಂ)ನ 23ನೇ ಮಹಾಧಿವೇಶನದಲ್ಲಿ ಚುನಾಯಿತವಾದ ಪೊಲಿಟ್ ಬ್ಯುರೋದ ಮೊದಲ ಸಭೆ ಮೇ 9 ಮತ್ತು 10ರಂದು ನಡೆಯಿತು. ಈ ಸಭೆಯಲ್ಲಿ ದೇಶದ ಪ್ರಸಕ್ತ ಪರಿಸ್ಥಿತಿಯನ್ನು ವಿಶ್ಲೇಷಿಸಲಾಯಿತು. ಈ ಸಭೆಯ ನಂತರ ಪೊಲಿಟ್ ಬ್ಯುರೊ ಪ್ರಕಟಿಸಿರುವ ಪತ್ರಿಕಾ ಹೇಳಿಕೆ ಹೀಗಿದೆ:

ಬೆಲೆ ಏರಿಕೆಯ ನಾಗಾಲೋಟ ನಿಯಂತ್ರಿಸಬೇಕು

ಅವ್ಯಾಹತವಾಗಿ ನಾಗಾಲೋಟ ಹೂಡಿರುವ ಬೆಲೆ ಏರಿಕೆಯು ಜನರ ಮೇಲೆ ಹಿಂದೆಂದೂ ಕಾಣದ ಹೊರೆಯನ್ನು ಹೇರುತ್ತಿದೆ. ಕೋಟಿಗಟ್ಟಲೆ ಜನರು ಬಳಲುತ್ತಿದ್ದಾರೆ, ಬಡತನಕ್ಕೆ ತಳ್ಳಲ್ಪಟ್ಟಿದ್ದಾರೆ, ಅವರ ಹಸಿವಿನ ಸಂಕಟ ಹೆಚ್ಚುತ್ತಿದೆ. ಅಭೂತಪೂರ್ವ ಮಟ್ಟದ ನಿರುದ್ಯೋಗದ ಸಂಕಟದೊಂದಿಗೆ ಇದು ಜನರ ದುಃಖವನ್ನು ಹೆಚ್ಚಿಸುತ್ತಿದೆ.

ಕಳೆದೊಂದು ವರ್ಷದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಶೇ.70, ತರಕಾರಿ ಶೇ.20, ಅಡುಗೆ ಎಣ್ಣೆ ಶೇ.23 ಮತ್ತು ಬೇಳೆಕಾಳುಗಳ ಬೆಲೆಗಳು ಶೇ.8ರಷ್ಟು ಹೆಚ್ಚಾಗಿವೆ. ಕೋಟ್ಯಂತರ ಭಾರತೀಯರ ಪ್ರಧಾನ ಆಹಾರವಾಗಿರುವ ಗೋಧಿ ಬೆಲೆ ಕೆಜಿಗೆ ಸುಮಾರು ರೂ. 35/ಕೆಜಿ. ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಅಡುಗೆ ಅನಿಲ ಸಿಲಿಂಡರ್‌ಗಳ ಬೆಲೆಗಳ ನಿರಂತರ ಏರಿಕೆಯು ಈ ಒಟ್ಟಾರೆ ಹಣದುಬ್ಬರವನ್ನು ಮುಂದೊತ್ತುತ್ತಿವೆ.

ಕೇಂದ್ರ ಸರ್ಕಾರವು ಎಲ್ಲಾ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಎಲ್ಲಾ ಸೆಸ್/ಸರ್‌ಚಾರ್ಜ್‌ಗಳನ್ನು ತಕ್ಷಣವೇ ಹಿಂಪಡೆಯಬೇಕು. ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಡಿತರ) ಮೂಲಕ ಗೋಧಿ ಪೂರೈಕೆಯನ್ನು ಮತ್ತೆ ತರಬೇಕು. ಈ ಬೆಲೆ ಏರಿಕೆಯನ್ನು ತಡೆಯಲು ಪಡಿತರ ವ್ಯವಸ್ಥೆಯನ್ನು ಬಲಪಡಿಸಬೇಕು.

ಎಡಪಕ್ಷಗಳು ಬೆಲೆ ಏರಿಕೆ ವಿರುದ್ಧ ಒಂದು ರಾಷ್ಟ್ರವ್ಯಾಪಿ ಐಕ್ಯ ಮತ್ತು ಸಾಮೂಹಿಕ ಹೋರಾಟಕ್ಕೆವನ್ನು ಸಂಯೋಜಿಸುತ್ತವೆ.

ರಾಷ್ಟ್ರೀಯ ಸೊತ್ತುಗಳ ಲೂಟಿ

ರಾಷ್ಟ್ರೀಯ ನಗದೀಕರಣ ಪೈಪ್‌ಲೈನ್ (ಎನ್‌ಎಂಪಿ) ಅನ್ನು ಭಾರೀ ಜಿದ್ದಿನಿಂದ ಅನುಷ್ಠಾನಗೊಳಿಸುವ ಮೂಲಕ ಕೇಂದ್ರ ಸರ್ಕಾರವು ಭಾರತದ ರಾಷ್ಟ್ರೀಯ ಸೊತ್ತುಗಳ ಲೂಟಿಗೆ ಅನುಕೂಲ ಮಾಡಿಕೊಡುತ್ತಿದೆ.

ಜೀವ ವಿಮಾ ನಿಗಮದ (ಎಲ್‌ಐಸಿ) ಖಾಸಗೀಕರಣಕ್ಕೆ ಸಿಪಿಐ(ಎಂ)ನ ಸಂಪೂರ್ಣ ವಿರೋಧವನ್ನು ಪೊಲಿಟ್ ಬ್ಯೂರೋ ಪುನರುಚ್ಚರಿಸುತ್ತ, ಎಲ್‌ಐಸಿ ಐಪಿಒ ಆರಂಭಿಸಿರುವ ರೀತಿಯನ್ನು ಖಂಡಿಸಿದೆ. ಎಲ್‌ಐಸಿ ಬಹುತೇಕ 29 ಕೋಟಿ ಪಾಲಿಸಿದಾರರ ಒಡೆತನದಲ್ಲಿದೆ. ಅವರ ಹಿತಾಸಕ್ತಿಗಳನ್ನು ತುಳಿಯುತ್ತ ಸರ್ಕಾರವು ಅಂತರರಾಷ್ಟ್ರೀಯ ಹೂಡಿಕೆದಾರರನ್ನು ತುಷ್ಟೀಕರಿಸಲು ಮತ್ತು ಪಾಲಿಸಿದಾರರ ವೆಚ್ಚದಲ್ಲಿ ಭಾರಿ ಲಾಭವನ್ನು ಗಳಿಸಲು ಮಾರಾಟವಾಗುತ್ತಿರುವ ಷೇರುಗಳ ಮೌಲ್ಯವನ್ನು ತಗ್ಗಿಸಿ ಲೆಕ್ಕ ಹಾಕಿಸಿದೆ. ಎಲ್‌ಐಸಿ ಆಸ್ತಿಗಳ ಮೌಲ್ಯ ರೂ. 38 ಲಕ್ಷ ಕೋಟಿಗಳು, ಅದು ಒಂದು ಲಕ್ಷಕ್ಕೂ ಹೆಚ್ಚು ನಿಯಮಿತ ಉದ್ಯೋಗವನ್ನು ಒದಗಿಸುತ್ತಿದೆ ಮತ್ತು ದೇಶಾದ್ಯಂತ 14 ಲಕ್ಷ ಏಜೆಂಟರನ್ನು ಹೊಂದಿದೆ.

ಬೇಕಾಬಿಟ್ಟಿಯಾಗಿ ಎಲ್‌ಐಸಿ ಪುಟ 14 ಕ್ಕೆ

ಅಜಯ್ ಮಿಶ್ರ ಕೇಂದ್ರ ಸಂಪುಟದಲ್ಲಿ ಮುಂದುವರೆಯಲು ಯಾವ ಸಮರ್ಥನೆಯೂ ಉಳಿದಿಲ್ಲ–ಎಸ್‌ಕೆಎಂ

ಉತ್ತರಪ್ರದೇಶದ ಲಖಿಂಪುರ್ ಖೇರಿಯಲ್ಲಿ ನಾಲ್ವರು ರೈತರು ಮತ್ತು ಒಬ್ಬ ಸ್ಥಳೀಯ ಪತ್ರಕರ್ತರನ್ನು ತನ್ನ ಎಸ್‌ಯುವಿ ಚಕ್ರಗಳಡಿಯಲ್ಲಿ ಹೊಸಕಿ ಸಾಯಿಸಿದ ಆಶಿಷ್ ಮಿಶ್ರ ಗೆ ಕೊಟ್ಟಿದ ಜಾಮೀನನ್ನು ಸುಪ್ರಿಂ ಕೋರ್ಟ್ ರದ್ದು ಮಾಡಿದ ನಂತರ ಆತನ ನಾಲ್ವರು ಸಹಚರರ ಜಾಮೀನು ಅರ್ಜಿಯನ್ನು ಕೂಡ ಅಲಹಾಬಾದ್ ಹೈಕೋರ್ಟಿನ ಲಕ್ನೌ ಪೀಠ ತಿರಸ್ಕರಿಸಿದೆ.

ಈ ಸಂದರ್ಭದಲ್ಲಿ ನ್ಯಾಯಾಲಯದ ಟಿಪ್ಪಣಿಗಳು ನೋಡಿದ ನಂತರವಂತೂ ಕೇಂದ್ರ ಗೃಹ ರಾಜ್ಯಮಂತ್ರಿ ಅಜಯ್ ಮಿಶ್ರ ತೇನಿಗೆ ಸಂಪುಟದಲ್ಲಿ ಮುಂದುವರೆಯುವ ಯಾವ ನೈತಿಕ ಸಮರ್ಥನೆಯೂ ಉಳಿದಿಲ್ಲ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ. ಜಾಮೀನು ತಿರಸ್ಕರಿಸಿರುವ ಈ ಆದೇಶ ನ್ಯಾಯಚಕ್ರ ಸರಿಯಾದ ದಿಕ್ಕಿನಲ್ಲಿ ತಿರುಗಲಾರಂಭಿಸಿದೆ ಎಂಬ ಆಶಾಭಾವನೆಯನ್ನು ಮೂಡಿಸುತ್ತದೆ ಎಂದು ಅದು ಹೇಳಿದೆ.

ಕೇಂದ್ರ ಸಂಪುಟದಲ್ಲಿ ಮಂತ್ರಿಯಾಗಿರುವ ಮುಖ್ಯ ಆರೋಪಿಯ ತಂದೆ ಅಜಯ್ ಮಿಶ್ರರಂತವರು ಚಳುವಳಿ ಮಾಡುತ್ತಿರುವ ರೈತರ ಬಗ್ಗೆ ಟಿಪ್ಪಣಿ ಮಾಡುವಾಗ ಸಂಯಮದಿಂದ ಮಾತಾಡಬೇಕು ಎಂದು ಈ ನಾಲ್ವರು ಆರೋಪಿಗಳ ಜಾಮೀನು ಅರ್ಜಿಗಳ ವಿಚಾರಣೆ ನಡೆಸುವಾಗ ನ್ಯಾಯಮೂರ್ತಿ ದಿನೇಶ್ ಕುಮಾರ್ ಸಿಂಗ್ ಹೇಳಿರುವುದಾಗಿ ವರದಿಯಾಗಿದೆ.

“ಉನ್ನತ ಸ್ಥಾನಗಳಲ್ಲಿರುವ ರಾಜಕೀಯ ವ್ಯಕ್ತಿಗಳ ತಮ್ಮ ಸಾರ್ವಜನಿಕ ಮಾತುಗಳು ಸಮಾಜದ ಮೇಲೆ ಅವು ಮಾಡಬಹುದಾದ ಪರಿಣಾಮಗಳನ್ನು ಗಮನದಲ್ಲಿಟ್ಟಿಕೊಂಡು ಶಿಷ್ಟ ಭಾಷೆಯಲ್ಲಿರಬೇಕು. ತಮ್ಮ ಉನ್ನತ ಹುದ್ದೆಯ ಸ್ಥಾನಮಾನ ಮತ್ತು ಘನತೆಗೆ ತಕ್ಕುದಾಗಿ ವರ್ತಿಸಬೇಕಾಗುತ್ತದೆಯಾದ್ದರಿಂದ ಅವರುಗಳು ಬೇಜವಾಬ್ದಾರಿ ಹೇಳಿಕೆಗಳನ್ನು ಕೊಡಬಾರದು. ತನಿಖಾ ಸಂಸ್ಥೆಯ ಪರವಾಗಿ ಸಲ್ಲಿಸಿರುವ ಮಾಹಿತಿಗಳು ಮತ್ತು ಆರೋಪ ಪತ್ರದಲ್ಲಿ ಹೇಳಿರುವ ಪ್ರಕಾರ, ಕೇಂದ್ರ ಗೃಹರಾಜ್ಯಮಂತ್ರಿಗಳು ಅವರು ಹೇಳಿದರೆನ್ನಲಾದ ಮಾತುಗಳನ್ನು ಆಡದಿದ್ದಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲ. ಹಲವು ಅಮಾಯಕ ಬದುಕುಗಳು ಒಂದು ಅತ್ಯಂತ ಕ್ರೂರ, ದುಷ್ಟ, ಬರ್ಬರ, ಭೀಕರ ಮತ್ತು ಅಮಾನುಷ ರೀತಿಯಲ್ಲಿ ಕಳೆದು ಹೋಗುತ್ತಿರಲಿಲ್ಲ, ಅದೂ ಅವರ ಭರವಸೆ ಮೂಡಿಸುತ್ತಿದ್ದ ಮಗ ಮತ್ತು ಇತರ ಸಹ–ಆಪಾದಿತರಿಂದ” ಎಂದು ಮುಂದುವರೆದು ಅವರು ಹೇಳಿದ್ದಾರೆ.

ಅಂತಿಮವಾಗಿ, “ರೈತರು ಕಳವಳಗೊಂಡರು, ಮತ್ತು ಕೇಂದ್ರ ಗೃಹರಾಜ್ಯಮಂತ್ರಿಗಳ ಹೇಳಿಕೆಯ ವಿರುದ್ಧ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದರು, ರೈತರನ್ನು ಖೇರಿ ಜಿಲ್ಲೆಯಿಂದ ಹೊರಹಾಕಲಾಗುತ್ತದೆ ಮತ್ತು ಓಡಿಸಲಾಗುತ್ತದೆ ಎಂದು ಅವರು ಹೇಳಿರುವುದಾಗಿ ಆರೋಪಿಸಲಾಗಿದೆ” ಎಂದು ನ್ಯಾಯಮೂರ್ತಿಗಳು ಟಿಪ್ಪಣಿ ಮಾಡಿದರು ಎಂದು ವರದಿಯಾಗಿದೆ.

ಲಖಿಮ್‌ಪುರ್ ಖೇರಿಯ ಆಡಳಿತದ ವರ್ತನೆಯ ಬಗ್ಗೆಯೂ ನ್ಯಾಯಾಲಯ ಪ್ರಶ್ನೆಗಳನ್ನೆತ್ತಿದೆ. ಸೆಕ್ಷನ್ 144 ಜಾರಿಯಲ್ಲಿದ್ದರೂ ಆಗಿನ ಉಪಮುಖ್ಯಮಂತ್ರಿ ಮತ್ತು ಅಜಯ್ ಮಿಶ್ರ ಭಾಗವಹಿಸಿದ್ದ ಕುಸ್ತಿ ಸ್ಪರ್ಧೆಯನ್ನು ರದ್ದು ಮಾಡದಿರುವುದು ಕುತೂಹಲ ಕೆರಳಿಸುತ್ತದೆ ಎಂದೂ ಅದು ಹೇಳಿದೆ.

ಹೈಕೋರ್ಟ್ ಆರೋಪಿಗಳ ಪರವಾದ ಎಲ್ಲ ವಆದಗಳನ್ನೂ ತಿರಸ್ಕರಿಸುತ್ತ, ಆರೋಪಿಗಳ ರಾಜಕೀಯ ಪ್ರಭಾವದಿಂದಾಗಿಅವರಿಗೆ ಜಾಮೀನು ಸಿಕ್ಕರೆ ಸಾಕ್ಷ್ಯವನ್ನು ನಾಶಮಾಡುವ ಮತ್ತು ಸಾಕ್ಷಿಗಳ ಮೇಲೆ ಪ್ರಭಾವ ಹಾಕುವ ಸಾಧ್ಯತೆ ಇದೆ ಎಂದು ಒತ್ತಿ ಹೇಳಿದೆ ಎಂಬುದು ಗಮನಾರ್ಹ.

ಮಧ್ಯಪ್ರದೇಶದಲ್ಲಿ ಇಬ್ಬರು ಆದಿವಾಸಿಗಳ ಹತ್ಯೆ: ಎಐಕೆಎಸ್ ಖಂಡನೆ

“ಅಲ್ಪಸಂಖ್ಯಾತರ ನಂತರ ಈಗ ದಲಿತರು ಮತ್ತು ಆದಿವಾಸಿಗಳ ಮೇಲೆ ಹಿಂದುತ್ವ ಪಡೆಗಳ ಗುರಿ”

ಮಧ್ಯಪ್ರದೇಶದ ಸಿಯೋನಿ ಜಿಲ್ಲೆಯ ಸಿಮಾರಿಯಾ ಮತ್ತು ಸಾಗರ್ ಗ್ರಾಮಗಳಿಗೆ ಸೇರಿದ ಬುಡಕಟ್ಟು ಕುಟುಂಬಗಳ ಮೇಲೆ ನಡೆದ ಭೀಕರ ದಾಳಿ ಮತ್ತು ಇಬ್ಬರು ಆದಿವಾಸಿಗಳಾದ ಧನ್ಸಾಯಿ ಇನ್ವತಿ ಮತ್ತು ಸಂಪತ್‌ಲಾಲ್ ವಟ್ಟಿ ಅವರನ್ನು ಬರ್ಬರವಾಗಿ ಹತ್ಯೆಗೈದಿರುವುದನ್ನು ತೀವ್ರವಾಗಿ ಖಂಡಿಸುವುದಾಗಿ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಹೇಳಿದೆ. ಗೋಹತ್ಯೆಯ ಸುಳ್ಳು ಆರೋಪಗಳನ್ನು ಹೊರಿಸಿ ಕುಟುಂಬದ ಹೊಟ್ಟೆಹೊರೆಯಲು ಆಧಾರವಾಗಿದ್ದ ಯುವಕರನ್ನು ಬಜರಂಗದಳ ಮತ್ತು ಶ್ರೀರಾಮ ಸೇನೆಗೆ ಸಂಬಂಧಿಸಿದ ಗೂಂಡಾಗಳು ಬಡಿದು ಸಾಯಿಸಿದ್ದಾರೆ. ಈ ತಥಾಕಥಿತ ಗೋರಕ್ಷಕರು ಗ್ರಾಮಸ್ಥರ ಮೇಲೆ ಬಹಿರಂಗವಾಗಿ ಹಲ್ಲೆ ನಡೆಸಿರುವುದು ಆಘಾತಕಾರಿಯಾಗಿದೆ. ಮಧ್ಯಪ್ರದೇಶದ ಬಿಜೆಪಿ ಸರ್ಕಾರದ ಅಡಿಯಲ್ಲಿ ಗೋವುಗಳ ಹೆಸರಲ್ಲಿ ಕಾವಲುಕೋರತನವನ್ನು ಪ್ರದರ್ಶಿಸುವವರಿಗೆ ಆಡಳಿತದ ರಕ್ಷಣೆ ಇದೆ ಎಂಬುದನ್ನು ಈ ಘಟನೆ ಸ್ಪಷ್ಟವಾಗಿ ಸೂಚಿಸುತ್ತದೆ ಎಂದು ಎಐಕೆಎಸ್ ಹೇಳಿದೆ.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಗೋಹತ್ಯೆ ಹೆಸರಿನಲ್ಲಿ ಅಲ್ಪಸಂಖ್ಯಾತರು, ದಲಿತರು ಮತ್ತು ಆದಿವಾಸಿಗಳ ಮೇಲಿನ ಸರಣಿ ದಾಳಿಗಳು ತೀವ್ರವಾಗಿ ಹೆಚ್ಚಿವೆ. ಈ ಗೋರಕ್ಷಕರೆಂದು ಹೇಳಿಕೊಳ್ಳುವವರಿಗೆ ಯಾವುದೇ ಕಾನೂನು ಮತ್ತು ವ್ಯವಸ್ಥೆಯ ಭಯವಿಲ್ಲ. ಈ ಅಪರಾಧ ಚಟುವಟಿಕೆಗಳಲ್ಲಿ ಉಗ್ರ ಹಿಂದುತ್ವ ಗುಂಪುಗಳು ನೇರವಾಗಿ ಭಾಗಿಯಾಗಿವೆ ಎಂಬುದಕ್ಕೆ ಸ್ಪಷ್ಟ ಪುರಾವೆಗಳಿವೆ. ಈ ಘಟನೆಗಳಿಗೆ ಯಾವುದೇ ತಡೆ ಹಾಕುವ ಬದಲು ಅವು ತೀವ್ರಗೊಂಡಿದ್ದು, ಬಿಜೆಪಿ ಸರ್ಕಾರದ ದುಷ್ಟ ಉದ್ದೇಶದ ಬಗ್ಗೆ ಅನುಮಾನ ಮೂಡಿಸಿದೆ.

ಆರಂಭದಲ್ಲಿ ಅಲ್ಪಸಂಖ್ಯಾತರು ಈ ಗೂಂಡಾಗಳ ಗುರಿಯಾಗಿದ್ದರು, ನಂತರ ದಲಿತರು ಮತ್ತು ಆದಿವಾಸಿಗಳ ಮೇಲೆ ದಾಳಿಗಳು ಪ್ರಾರಂಭವಾದವು. ಈ ಗುಂಪು ಮೇಲ್ಜಾತಿ ಹಿಂದುತ್ವ ಸಿದ್ಧಾಂತಕ್ಕೆ ಸೇರಿದ್ದು ಮತ್ತು ಅವರಿಗೆ ಬಿಜೆಪಿ ಸರ್ಕಾರಗಳ ಆಶ್ರಯವಿದೆ ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ. ಅಂಚಿನಲ್ಲಿರುವ ವರ್ಗಗಳ ಮೇಲಿನ ಈ ದಾಳಿಗಳು ಜಾತ್ಯತೀತತೆ, ಸಾಮಾಜಿಕ ನ್ಯಾಯ ಮತ್ತು ದೇಶದ ಏಕತೆಗೆ ಗಂಭೀರ ಬೆದರಿಕೆಯಾಗಿದೆ.

ಈ ಹತ್ಯೆಯ ಘಟನೆಯಲ್ಲಿ ಭಜರಂಗದಳ ಮತ್ತು ಶ್ರೀರಾಮ ಸೇನೆಯ ತಪ್ಪಿತಸ್ಥರನ್ನು ತಕ್ಷಣವೇ ಬಂಧಿಸಿ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಹತ್ಯೆಗೀಡಾದ ಈ ಇಬ್ಬರು ಆದಿವಾಸಿಗಳ ಕುಟುಂಬಗಳಿಗೆ ಸಾಕಷ್ಟು ಪರಿಹಾರವನ್ನು ನೀಡಬೇಕು ಎಂದು ಎಐಕೆಎಸ್ ಒತ್ತಾಯಿಸ್ತಿದೆ. ಈ ಹತ್ಯೆಗಳ ವಿರುದ್ಧ ಪ್ರತಿಭಟಿಸುವಂತೆ ದೇಶದ ಎಲ್ಲಾ ಎಐಕೆಎಸ್ ಘಟಕಗಳಿಗೆ ಅದು ಕರೆ ನೀಡಿದೆ.

ಜಹಾಂಗೀರ್‌ಪುರಿ ಗಲಭೆ: ಪೊಲೀಸರ ವಿಫಲತೆಗೆ ನ್ಯಾಯಾಲಯದ ಛೀಮಾರಿ

ಜಹಾಂಗೀರ್ ಪುರಿಯಲ್ಲಿ ಹನುಮಾನ್ ಜಯಂತಿಯಂದು (ಏಪ್ರಿಲ್ 16) ಕೋಮು ಘರ್ಷಣೆ ನಡೆದಿತ್ತು. ಅದಕ್ಕೆ ಕಾರಣವಾದ ಮೆರವಣಿಗೆಗೆ ಅನುಮತಿ ಇರಲಿಲ್ಲ. ಆದರೂ ಮೆರವಣಿಗೆ ಮಾಡಲಾಯಿತು. ಇದಕ್ಕೆ ಪೊಲೀಸರು ಕೂಡಾ ಸಾಕ್ಷಿಯಾಗಿದ್ದರು. ಆದ್ದರಿಂದ ಪೊಲೀಸರ ವೈಫಲ್ಯವೇ ಈ ಗಲಭೆಗೆ ಕಾರಣವೆಂದು ನ್ಯಾಯಾಲಯ ತರಾಟೆಗೆ ತೆಗೆದುಕೊಂಡಿದೆ.

ಜಹಾಂಗೀರ್ ಪುರಿಯ ಗಲಭೆಗೆ ಸಂಬಂಧಿಸಿದಂತೆ ಬಂಧಿತರಾದ ಎಂಟು ಮಂದಿ ಆಪಾದಿತರಿಗೆ ಜಾಮೀನು ವಿಚಾರಣೆಯಲ್ಲಿ ಸೆಷನ್ಸ್ ನ್ಯಾಯಲಯದ ನ್ಯಾಯಧೀಶ ಗಗನ್ ದೀಪ್ ಸಿಂಗ್ ಪೊಲೀಸರಿಂದಾಗಿರುವ ತಪ್ಪುಗಳನ್ನು ತೊಡಕುಗಳಿದ್ದರೆ ಅವನ್ನು ತನಿಖೆ ಮಾಡುವ ಅಗತ್ಯವಿದೆ ಎಂದರು.

ಏಪ್ರಿಲ್ 16 ರಂದು ನಡೆದ ಮೂರನೇ/ಕೊನೆಯ ಮೆರವಣಿಗೆಗೆ ಅನುಮತಿ ಇರಲಿಲ್ಲ, ಅದು ಕಾನೂನುಬಾಹಿರವಾಗಿತ್ತು, ಆದರೂ ಈ ಕಾನೂನುಬಾಹಿರ ಮೆರವಣಿಗೆಯನ್ನು ತಡೆಯುವ ಬದಲು ಜಹಾಂಗೀರ್ ಪುರಿ ಪೋಲೀಸ್ ಠಾಣೆಯ ಸ್ಥಳೀಯ ಸಿಬ್ಬಂದಿ, ಇನ್ಸ್‌ಪೆಕ್ಟರ್ ರಾಜೀವ್ ರಂಜನ್ ಮತ್ತು ಡಿಸಿಪಿ ಮೀಸಲಿನ ಇತರ ಅಧಿಕಾರಿಗಳ ನೇತೃತ್ವದಲ್ಲಿ ಮೆರವಣಿಗೆಯ ಜತೆಗೆ ನಡೆದರು ಎಂದು ಸ್ವತಃ ಎಫ್‌ಐಆರ್ ನಲ್ಲೇ ಹೇಳಿರುವುದನ್ನು ಗಮನಿಸಿದ ನ್ಯಾಯಾಲಯ, “ಸ್ಥಳೀಯ ಪೊಲೀಸರು ಆರಂಭದಲ್ಲೇ ಕಾನುನುಬಾಹಿರ ಮೆರವಣಿಗೆಯನ್ನು ನಿಲ್ಲಿಸುವ ಮತ್ತು ಜನಜಂಗುಳಿಯನ್ನು ಚದುರಿಸುವ ತನ್ನ ಕರ್ತವ್ಯ ನಿಭಾಯಿಸುವ ಬದಲು ಮೆರವಣಿಗೆಯುದ್ದಕ್ಕೂ ಅದರೊಂದಿಗೆ ಸಾಗಿದಂತೆ ಕಾಣುತ್ತದೆ. ಇದು ನಂತರ ಎರಡು ಸಮುದಾಯಗಳ ನಡುವೆ ಗಲಭೆಗಳಿಗೆ ಕಾರಣವಾಯಿತು” ಎಂದು ಹೇಳುತ್ತ ಸಮಸ್ಯೆಯನ್ನು ಹಿರಿಯ ಅಧಿಕಾರಿಗಳು ಸರಳವಾಗಿ ತಳ್ಳಿಹಾಕಿದಂತಿದೆ, ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಯುವಲ್ಲಿ ಪೊಲೀಸರು ಸುಮ್ಮನೆ ಕೂಡುವುದು ಸರಿಯಾದ ವಿಧಾನವಲ್ಲ ಎಂದು ಟಿಪ್ಪಣಿ ಮಾಡಿದೆ. ಭವಿಷ್ಯದಲ್ಲಿ ಇಂತಹ ಘಟನೆ ನಡೆಯದಂತೆ ಸಂಬಂಧಪಟ್ಟ ಅಧಿಕಾರಿಗಳ ಹೊಣೆಗಾರಿಕೆಯನ್ನು ನಿಗದಿ ಮಾಡಬೇಕು. ಶಾಮೀಲಿನ ಅಂಶಗಳೇನಾದರೂ ಇದ್ದರೆ, ಅದರ ಬಗ್ಗೆಯೂ ತನಿಖೆ ನಡೆಸಬೇಕು ಎಂದು ನ್ಯಾಯಾಲಯದ ಆದೇಶದಲ್ಲಿ ತಿಳಿಸಲಾಗಿದೆ.

ಇದನ್ನು ದಿಲ್ಲಿಯ ಪೊಲೀಸ್ ಕಮಿಷನರ್ ಗಮನಕ್ಕೆ ತಂದಿರುವ ಸಿಪಿಐ(ಎಂ)ನ ದಿಲ್ಲಿ ರಾಜ್ಯ ಕಾರ್ಯದರ್ಶಿ ಕೆ.ಎಂ.ತಿವಾರಿ ಇನ್ಸ್‌ಪೆಕ್ಟರ್ ರಾಜೀವ ರಂಜನ್ ಮತ್ತು ಇತರರನ್ನು ತಕ್ಷಣವೇ ತನಿಖೆಗೊಳಪಡಿಸಿ ಅಮಾನತಿನಲ್ಲಿಡಬೇಕು ಎಂದು ಆಗ್ರಹಿಸಿದ್ದಾರೆ.

ಸಂಪಾದಕೀಯ

ಮತಾಂತರ ನಿಷೇಧ ಕಾಯ್ದೆ ಸುಗ್ರೀವಾಜ್ಞೆಯ ತರಾತುರಿ ಏಕೆ?

ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ (ಮತಾಂತರ ನಿಷೇಧ) ಮಸೂದೆಯನ್ನು ಸುಗ್ರೀವಾಜ್ಞೆಯ ಮೂಲಕ ಜಾರಿಗೊಳಿಸಲು ನಿರ್ಧರಿಸಿದೆ. ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಸಂಚಕಾರ ತರುವ ಈ ಮಸೂದೆ ಸಂವಿಧಾನ ವಿರೋಧಿಯೂ ಆಗಿದೆ. ಇಂತಹ ಮಸೂದೆಯನ್ನು ಅಂಗೀಕರಿಸ ಬಾರದೆಂದು ವಿವಿಧ ರಾಜಕೀಯ ಪಕ್ಷಗಳು, ಸಾಮಾಜಿಕ ಸಂಘಟನೆಗಳು, ಪ್ರಮುಖ ಚಿಂತಕರು ತೀವ್ರವಾಗಿ ವಿರೋದಿಸಿದ್ದನ್ನು ಸರಕಾರ ಪರಿಗಣಿಸಿಯೇ ಇಲ್ಲ. ಮೇಲಾಗಿ ಶಾಸನ ಸಭೆಯಲ್ಲಿ ಅಂಗೀಕಾರಕ್ಕಿಡದೇ ಸುಗ್ರೀವಾಜ್ಞೆಯ ಮೂಲಕ ಜಾರಿಗೊಳಿಸಲು ತರಾತುರಿಯಲ್ಲಿ ಹೊರಡುವಂತಹ ತುರ್ತಾದರೂ ಏನಿತ್ತು? ಎನ್ನುವುದು ಪ್ರಶ್ನಾರ್ಹ.

ಸ್ವತಂತ್ರ ಭಾರತದ ಸಂವಿಧಾನದ 25 ನೇ ಅನುಚ್ಛೇದವು ದೇಶದ ಪ್ರತಿಯೊಬ್ಬ ಪ್ರಜೆಗೂ ಧಾರ್ಮಿಕ ಸ್ವಾತಂತ್ರ್ಯವನ್ನು ಖಾತ್ರಿ ಪಡಿಸುತ್ತದೆ. ಧಾರ್ಮಿಕ ಸ್ವಾತಂತ್ರ್ಯ ಎಂದರೆ ದೇಶದ ಯಾವುದೇ ಪ್ರಜೆಯು ತನಗೆ ಇಷ್ಟ ಬಂದ ಮತಧರ್ಮವನ್ನು ಅನುಸರಿಸಬಹುದು, ಯಾವುದೇ ಧರ್ಮದ ವಿಚಾರಗಳನ್ನು ಪ್ರಚಾರ ಮಾಡಬಹುದು. ಹಾಗೆಯೇ ಯಾವುದೇ ವ್ಯಕ್ತಿಗೆ ಯಾವುದೇ ಮತಧರ್ಮವನ್ನು ಅನುಸರಿಸುವ, ಇಲ್ಲವೆ ಅನುಸರಿಸದೇ ಇರುವ ಸ್ವಾತಂತ್ರ್ಯ ಸಹ ಇರುತ್ತದೆ. ಇದು ಧಾರ್ಮಿಕ ಸ್ವಾತಂತ್ರ್ಯವಾಗಿದ್ದು ಈ ಧಾರ್ಮಿಕ ಹಕ್ಕು ದೇಶದ ಪ್ರತಿಪ್ರಜೆಯ ಮೂಲಭೂತ ಹಕ್ಕಾಗಿದೆ.

ಆದರೆ ಕರ್ನಾಟಕ ಸರಕಾರ ತಂದಿರುವ ಕಾಯ್ದೆಯು ಜನರ ಸಂವಿಧಾನಬದ್ಧ ಹಕ್ಕನ್ನು ಕಿತ್ತುಕೊಳ್ಳುವ ಒಂದು ದೌರ್ಜನ್ಯಕಾರಿ, ಸರ್ವಾಧಿಕಾರದ ಕ್ರಮವಾಗಿದೆ. ಬಲವಂತ, ಅನುಚಿತ ಪ್ರಭಾವ, ಒತ್ತಾಯ, ಆಮಿಷಗಳ ಮೂಲಕ ಅಥವಾ ಯಾವುದೇ ವಂಚನೆಯ ವಿಧಾನಗಳ ಮೂಲಕ ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮತಾಂತರ ಆಗುವುದನ್ನು ತಡೆಯುವ ಉದ್ದೇಶದಿಂದ ಈ ಕಾಯ್ದೆಯನ್ನು ತರಲಾಗಿದೆ ಎಂದು ಸರಕಾರವೇನೋ ಹೇಳಿಕೊಂಡಿದೆ. ಆದರೆ ಈಗಾಗಲೇ ಸಂವಿಧಾನದಲ್ಲಿ ಬಲವಂತದ ಮತಾಂತರವನ್ನು ತಡೆಯುವ ಮತ್ತು ಶಿಕ್ಷಿಸುವ ಅವಕಾಶ ಇರುವಾಗ ಮತ್ತೊಂದು ಕಾಯ್ದೆಯನ್ನು ತರುವುದರ ಔಚಿತ್ಯವಾದರೂ ಏನಿದೆ?

ಭಾರತ ಸಮಾನತೆ–ಸಾಮಾಜಿಕ ನ್ಯಾಯಗಳೆಂಬ ಉದಾತ್ತ ಮಾನವೀಯ ತತ್ವಗಳ ಆಧಾರದಲ್ಲಿ ಒಂದು ಪ್ರಜಾಸತ್ತಾತ್ಮಕ–ಧರ್ಮನಿರಪೇಕ್ಷ ರಾಷ್ಟ್ರವಾಗಿದೆ ಎಂದು ಘೋಷಿಸಿಕೊಂಡಿದೆ. ಇಂತಹ ದೇಶವನ್ನು ಜಾತಿ ತಾರತಮ್ಯ ಮತ್ತು ಅಸಮಾನತೆಯ ಆಧಾರದ ಮನುವಾದಿ ಹಿಂದೂ ರಾಷ್ಟ್ರವನ್ನಾಗಿ ಪರಿವರ್ತಿಸಲು ಕೆಲಸ ಮಾಡುತ್ತಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನಿಯಂತ್ರಣದಲ್ಲಿರುವ ಬಿಜೆಪಿ ಪಕ್ಷವು ಇಂತಹ ಪ್ರಗತಿ ವಿರೋಧಿ ಕಾಯ್ದೆಯೊಂದನ್ನು ತಂದಿರುವುದನ್ನು ಒಪ್ಪಲು ಸಾಧ್ಯವಿಲ್ಲ.

ಬಲಾತ್ಕಾರ ಮತ್ತು ಆಮಿಷದ ಮತಾಂತರವನ್ನು ತಡೆಯುವ ಉದ್ದೇಶದ್ದು ಎಂದು ಹೇಳಲಾದ ಈ ಕಾಯ್ದೆಯು ಹಲವು ಕರಾಳ ಸ್ವರೂಪದ ಅಘಾತಕಾರಿ ಕಟ್ಟಳೆಗಳನ್ನು ನಿಯಮಗಳನ್ನು ಒಳಗೊಂಡಿದೆ. ಅದು ನಮ್ಮ ಸಮಾಜದ ಧಾರ್ಮಿಕ ಅಲ್ಪಸಂಖ್ಯಾತರನ್ನು ಗುರಿ ಮಾಡಿಕೊಂಡಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಯಾವುದೇ ಧಾರ್ಮಿಕ ಸಂಸ್ಥೆಯು ನಡೆಸುವ ಶಾಲೆ ಅಥವಾ ಕಾಲೇಜಿನಲ್ಲಿ ಉಚಿತ ಶಿಕ್ಷಣ, ಉದ್ಯೋಗ ನೀಡುವುದನ್ನು ಸಹ ಮತಾಂತರದ ಉದ್ದೇಶದ ಆಮಿಷಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಶತ ಶತಮಾನಗಳ ಕಾಲ ಅಸ್ಪೃಶ್ಯರು ಮತ್ತು ಶೂದ್ರರಿಗೆ ಅಕ್ಷರ ಜ್ಞಾನವನ್ನು ವಂಚಿಸಿದ ಭಾರತದಲ್ಲಿ ಮಹಿಳೆಯರು ಸೇರಿದಂತೆ ಈ ಶೋಷಿತ ಸಮುದಾಯಗಳಿಗೆ ಭಾರತದ ಬಹಳಷ್ಟು ಭಾಗಗಳಲ್ಲಿ ಅಕ್ಷರದ ಬೆಳಕು ಸಿಕ್ಕಿದ್ದೇ ಧಾರ್ಮಿಕ ಅಲ್ಪಸಂಖ್ಯಾತ ಸಂಸ್ಥೆಗಳ ಶಾಲಾ ಕಾಲೇಜುಗಳ ಮೂಲಕ. ಈಗಲೂ ಧಾರ್ಮಿಕ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಸಾಮಾಜಿಕ ನ್ಯಾಯದ ತತ್ವದ ಆಧಾರದಲ್ಲಿ ಈ ಶಿಕ್ಷಣ ಸೇವೆಯನ್ನು ಮುಂದುವರಿಸಿವೆ ಎಂಬ ಅಂಶವನ್ನು ಈ ಕಾಯ್ದೆ ಸಂಪೂರ್ಣವಾಗಿ ಮರೆಮಾಚಿದೆ.

ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡದ ಸಮುದಾಯದವರನ್ನು ಮತಾಂತರ ಮಾಡುವವರಿಗೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಶಿಕ್ಷೆ ಮತ್ತು ದಂಡಗಳಂತಹ ಕರಾಳ ಶಿಕ್ಷೆಯನ್ನು ಕಾಯ್ದೆಯಲ್ಲಿ ನಿಗದಿ ಮಾಡಲಾಗಿದೆ. ದೇಶವು ಸ್ವಾತಂತ್ರ್ಯ ಪಡೆದ ಮುಕ್ಕಾಲು ಶತಮಾನದ ನಂತರವೂ ಭಾರತದಲ್ಲಿ ದಲಿತರಿಗೆ ಅಸ್ಪೃಶ್ಯತೆ ಮತ್ತು ಅಪಮಾನಗಳಿಂದ ಇನ್ನೂ ಮುಕ್ತಿ ಸಿಕ್ಕಿಲ್ಲ. ಜಾತಿ ದೌರ್ಜನ್ಯಗಳಿಗೆ ತಡೆ ಬಿದ್ದಿಲ್ಲ. ಮಹಿಳೆಯರು ಮತ್ತು ಶೋಷಿತ ಸಮುದಾಯಗಳಿಗೆ ಘನತೆಯ ಬದುಕಿನ ಅವಕಾಶ ದೊರೆತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಘನತೆಯ ಬದುಕನ್ನು ಬಯಸಿ ಮತ್ತೊಂದು ಮತ ಧರ್ಮವನ್ನು ಅಪ್ಪಿಕೊಳ್ಳಲು ಬಯಸುವ ಜನರನ್ನು ಇರುವ ಧರ್ಮದಲ್ಲೇ ಕಟ್ಟಿ ಹಾಕಬೇಕೆನ್ನುವ ಕಾಯ್ದೆಯು ಮತಾಂಧ ಸರ್ವಾಧಿಕಾರಿ ಧೋರಣೆಯನ್ನು ಕಾನೂನು ಬದ್ಧಗೊಳಿಸುವಂತಿದೆ. ಜೊತೆಗೆ ಮತಾಂತರ ನಡೆಸಲಾಗುತ್ತಿದೆ ಎಂಬ ಹೆಸರಿನಲ್ಲಿ ಸಮಾಜದಲ್ಲಿ ಗೂಂಡಾಗಿರಿ ನಡೆಸುತ್ತಿರುವ ಸಂಘ ಪರಿವಾರದ ಕಾರ್ಯಕರ್ತರ ಪುಂಡಾಟಿಕೆಗಳಿಗೆ ಇನ್ನಷ್ಟು ಕುಮ್ಮಕ್ಕು ಕೊಡುವಂತಿದೆ.

ಯಾವುದೇ ವ್ಯಕ್ತಿಯು ಮದುವೆಯ ನಂತರ ಮತ್ತು ಮದುವೆಯ ಮುಂಚೆ ಸಹ ಮದುವೆಯ ಕಾರಣಕ್ಕಾಗಿ ಮತಾಂತರ ಆಗುವುದನ್ನು ಸಹ ಈ ಕಾಯ್ದೆಯು ನಿರ್ಬಂಧಿಸುತ್ತದೆ. ಮದುವೆ ಮತ್ತು ಮತಧರ್ಮ ಪಾಲನೆಯು ಯಾವುದೇ ವ್ಯಕ್ತಿಯ ವೈಯುಕ್ತಿಕ ಹಕ್ಕಾಗಿದ್ದು ಆಳುವ ಸರಕಾರಗಳಿಗೆ ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಲು ಅವಕಾಶ ಕೊಡುವುದು ಎಂದರೆ ಸಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಮೂಲತತ್ವಗಳನ್ನು ಮಣ್ಣುಪಾಲು ಮಾಡುವುದು ಎಂದೇ ಆಗುತ್ತದೆ. ವಯಸ್ಕ ಯುವಕ–ಯುವತಿಯರು ತಮ್ಮ ಆಯ್ಕೆಯಂತೆ ಮದುವೆ ಆಗುವುದನ್ನು ಮತ್ತು ಅಂತರ್ ಧರ್ಮೀಯ ಪ್ರೇಮ ವಿವಾಹಗಳಾಗುವುದನ್ನು ತಡೆಯುವ ದುರುದ್ದೇಶ ಈ ಕಾಯ್ದೆಯಲ್ಲಿ ಅಡಗಿದೆ. ಇದಲ್ಲದೇ ಮತಾಂತರದ ನೆಪದಲ್ಲಿ ಈ ವಿಷಯಕ್ಕೆ ಸಂಬಂಧವಿಲ್ಲದ ವ್ಯಕ್ತಿಗಳು ಸಹ ಮತ್ತೊಬ್ಬರ ಖಾಸಗಿ ವಿಷಯಗಳಲ್ಲಿ ತಲೆಹಾಕಲು ಮತ್ತು ದೂರುಕೊಡಲು ಈ ಕಾಯ್ದೆಯು ಅವಕಾಶ ಮಾಡಿಕೊಡುತ್ತದೆ. ಮತಾಂತರದ ಆರೋಪ ಹೊರಿಸಿ ಶಿಕ್ಷಣ ಸಂಸ್ಥೆಗಳು ಸೇರಿದಂತೆ, ಯಾವುದೇ ಅಲ್ಪಸಂಖ್ಯಾತ ಸಂಘ–ಸಂಸ್ಥೆಗಳಿಗೆ ಕಿರುಕುಳ ನೀಡಲು ಮತ್ತು ಸರಕಾರದ ಅನುದಾನವನ್ನು ತಡೆಹಿಡಿಯಲು ಬೇಕಾದಂತೆ ಕಾಯ್ದೆಯಲ್ಲಿ ಅವಕಾಶವನ್ನು ಸೃಷ್ಟಿಸಿಕೊಳ್ಳಲಾಗಿದೆ.

ಪುಟ 4 ಕ್ಕೆ

ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರುವ ಹಗರಣಗಳ ಸರಮಾಲೆಗೆ ಕೊನೆಯಿಲ್ಲ ಎನಿಸುತ್ತದೆ. ಒಂದರ ನಂತರ ಮತ್ತೊಂದು ಹಗರಣಗಳು ಹೊರಬರುತ್ತಲೇ ಇವೆ. ಪಿ.ಎಸ್.ಐ. ಪರೀಕ್ಷಾ ಹಗರಣದ ತನಿಖೆ ಸಾಗುತ್ತಿರುವಂತೆ ಊಹೆಗೂ ಮೀರಿ ಅನೇಕ ಒಳಸುಳಿಗಳು ತೆರೆದುಕೊಳ್ಳುತ್ತಿವೆ. ಇದರ ಸೂತ್ರಧಾರಿಗಳು ಬಿಜೆಪಿಯ ಪ್ರಮುಖ ನಾಯಕರು ಮತ್ತು ಇತರೆ ಪಕ್ಷಗಳ ಹಲವರು, ಉನ್ನತ ಅಧಿಕಾರಿ ವಲಯ ಬಿಟ್ಟು ಬಿಡದಂತೆ ಬೆಸೆದುಕೊಂಡಿರುವುದು ಇಲ್ಲಿಯವರೆಗಿನ ತನಿಖೆಯಲ್ಲಿ ಕಂಡು ಬರುತ್ತಿದೆ. ಸಿಐಡಿ ತನಿಖೆಯೇನೋ ನಡೆಯುತ್ತಿದೆ. ಆದರೆ ಈ ಬಹುದೊಡ್ಡ ಹಗರಣದಲ್ಲಿ ತೊಡಗಿರುವವರ ಕೃತ್ಯಗಳು ಒಂದೊಂದಾಗಿ ಬಯಲಾಗುತ್ತಿರುವಂತೆ ಬೆಚ್ಚಿಬೀಳಿಸುವ ವಿವರಗಳು ಹೊರಬರುತ್ತಿವೆ. ಇಂತಹ ಬಾರಿ ಹಗರಣದ ತನಿಖೆಯನ್ನು ವಸ್ತುನಿಷ್ಠವಾಗಿ ನಡೆಸಲು ಈ ಸರ್ಕಾರ ಮುಂದಾಗುವುದೇ? ನಿಷ್ಠುರ ಕ್ರಮಗಳನ್ನು ಕೈಗೊಳ್ಳುವ ಇಚ್ಛಾಶಕ್ತಿ, ಕಾನೂನು, ಸತ್ಯನಿಷ್ಠತೆ ಇದೆಯೇ ಎನ್ನುವ ಅನುಮಾನದ ಪ್ರಶ್ನೆ ಸಹಜವಾಗಿಯೇ ಮೂಡಿ ಬರುತ್ತಿದೆ.

ಈ ವಾರ

ಈ ವಾರ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಡಾ.ರವೀಂದ್ರನಾಥ್ ಅವರು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿ ಸರ್ಕಾರಕ್ಕೆ ಪತ್ರವನ್ನು ಕಳಿಸಿರುವುದು ವಂಚನೆಯ ಹಗರಣದ ಪ್ರಕರಣದಲ್ಲಿ ಭಾರಿ ಕುಳಗಳು ಭಾಗಿಯಾಗಿರುವ ಗಂಭೀರ ಶಂಕೆಯಯನ್ನು ಸಾರ್ವಜನಿಕರೆದುರು ತಂದಿದೆ. ಕರ್ನಾಟಕದಲ್ಲಿ ನಡೆದಿರುವ ನಕಲಿ ಜಾತಿ ಪ್ರಮಾಣ ಪತ್ರದ ಪ್ರಕರಣದ ತನಿಖೆ ತೀವ್ರಗೊಳ್ಳುತ್ತಿರುವಂತೆ ಈ ಅಧಿಕಾರಿಯನ್ನು ಸರ್ಕಾರ ಇದ್ದಕ್ಕಿದ್ದಂತೆ ವರ್ಗಾವಣೆ ಆದೇಶ ಹೊರಡಿಸಿದುದರ ಗುಟ್ಟೇನು? ಇದು ರವೀಂದ್ರನಾಥ್ ರವರು ರಾಜೀನಾಮೆ ಸಲ್ಲಿಸುತ್ತಿರುವುದಕ್ಕೆ ಮುಖ್ಯ ಕಾರಣವೆನ್ನಲಾಗಿದೆ. ಸಿದ್ದರಾಮಯ್ಯನವರ ಸರ್ಕಾರದಲ್ಲಿ ಗೃಹ ಇಲಾಖೆಯ ಸಲಹೆಗಾರರೂ ಮತ್ತು ಪೊಲೀಸ್ ಇಲಾಖೆಯಲ್ಲಿ ವಿವಿಧ ಹಂತಗಳ ಉನ್ನತ ಹುದ್ದೆಗಳನ್ನು


ನಕಲಿ ಜಾತಿ ಪ್ರಮಾಣ ಪತ್ರಗಳ ವಂಚಕರನ್ನು ರಕ್ಷಿಸುತ್ತಿದೆಯೆ ಸರ್ಕಾರ

ಎಸ್.ವೈ.ಗುರುಶಾಂತ್

ನಿರ್ವಹಿಸಿದ 'ಕೆಂಪಯ್ಯ ಐ.ಪಿ.ಎಸ್' ನವರು ನಕಲಿ ಜಾತಿ ಪ್ರಮಾಣ ಪತ್ರ ಸಲ್ಲಿಸಿ ಐಪಿಎಸ್ ಹುದ್ದೆಗೆ ಏರಿದ್ದಾರೆಂಬ ಆರೋಪದ ತನಿಖೆಗೆ ಸಂಬಂಧಿಸಿ ನೋಟಿಸ್ ಜಾರಿಯಾದ ಕೂಡಲೇ ಸೂಕ್ತ ಕಾರಣವಿಲ್ಲದೇ ರವೀಂದ್ರನಾಥ್ ರವರನ್ನು ವರ್ಗಾವಣೆ ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಅವರನ್ನು ಕರ್ನಾಟಕ ಪೊಲೀಸ್ ತರಬೇತಿ ಕೇಂದ್ರಕ್ಕೆ ವರ್ಗಾವಣೆ ಮಾಡಲಾಗಿದೆ. ಸರ್ಕಾರದ ಈ ಕ್ರಮ ಸಹಜವಾಗಿ ಹಲವು ಅನುಮಾನಗಳಿಗೆ ಎಡೆ ಮಾಡಿಕೊಡುವಂತಹದ್ದು.

1097 ಮಂದಿ ವಿರುದ್ಧ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ–ಎಸ್.ಟಿ. ನಕಲಿ ಜಾತಿ ಪ್ರಮಾಣ ಪತ್ರವನ್ನು ಅಕ್ರಮವಾಗಿ ಪಡೆದಿರುವುದರ ಆರೋಪದಲ್ಲಿ ಪ್ರಕರಣ ದಾಖಲಿಸಿ ಎಫ್.ಐ.ಆರ್. ಹಾಕಿ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಕ್ರಮ ಕೈಗೊಂಡಿದೆ. ರಾಜ್ಯವ್ಯಾಪಿ ಇಂತಹ ನಕಲಿ ಪ್ರಮಾಣಪತ್ರಗಳನ್ನು ಸೃಷ್ಟಿಸಿ ನೀಡಿದ ಕೃತ್ಯಗಳು ವಿವಿಧ ಇಲಾಖೆಗಳಲ್ಲಿ ನಡೆದಿದೆ. ಇಂತಹ ಸುಳ್ಳು ಪ್ರಮಾಣಪತ್ರ ನೀಡಿದ 111 ತಹಸೀಲ್ದಾರರು, 108 ಕಂದಾಯ ನಿರೀಕ್ಷಕರು, 107 ಗ್ರಾಮ ಪಂಚಾಯಿತಿ ಲೆಕ್ಕಾಧಿಕಾರಿಗಳ ಮೇಲೆ ಎಫ್.ಐ.ಆರ್. ದಾಖಲಾಗಿದೆ. 165 ಪ್ರಕರಣಗಳಲ್ಲಿ ಶಿಸ್ತು ಕ್ರಮ ಕೈಗೊಳ್ಳಲು ಸೂಚನೆ ಹೋಗಿದೆ.

ವಿಶೇಷವೆಂದರೆ ಸದಾಕಾಲ ಧರ್ಮ, ಸಂಸ್ಕೃತಿ, ಸಂಘಪರಿವಾರದ ದೇಶಭಕ್ತಿಯ ಬಗ್ಗೆ ಕೊಂಡಾಡಿ ತನ್ನನ್ನು ಟೀಕಿಸಿದ ಎಲ್ಲರ ಮೇಲೂ ಹರಿಹಾಯುವ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ, ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಮೇಲೂ ನಕಲಿ ಜಾತಿ ಪ್ರಮಾಣಪತ್ರ ಪಡೆದಿರುವ ಆರೋಪ ಬಂದಿದೆ. ರೇಣುಕಾಚಾರ್ಯ ಅವರ ಮಗಳು ವೀರಶೈವ ಲಿಂಗಾಯತ ಆಗಿದ್ದು 'ಬೇಡ ಜಂಗಮ' ಎನ್ನುವ ನಕಲಿ ಜಾತಿ ಸರ್ಟಿಫಿಕೇಟನ್ನು ಪಡೆದ ಬಗ್ಗೆ ಮೊಕದ್ದಮೆ ದಾಖಲಾಗಿದೆ. 2012 ನವೆಂಬರ್ 17ಕ್ಕೆ ಬೆಂಗಳೂರು ಉತ್ತರ ಜಿಲ್ಲೆಯ ತಹಸಿಲ್ದಾರ್ ಈ ಜಾತಿ ಪ್ರಮಾಣ ಪತ್ರವನ್ನು ನೀಡಿದ್ದಾರೆ. ಇವರ ಮೇಲೆಯೂ ಕಾನೂನು ಪ್ರಕ್ರಿಯೆ ನಡೆದಿದೆ. ಈ ಹಗರಣ ಹೊರಬರುತ್ತಿದ್ದಂತೆ ರೇಣುಕಾಚಾರ್ಯ ಅವರು ತನಗೂ ಇದಕ್ಕೂ ಸಂಬಂಧವಿಲ್ಲ, ಅದೇನಿದ್ದರೂ ತಮ್ಮ ಸಹೋದರ ಇದನ್ನು ಕೊಡಿಸಿದ್ದಾರೆ. ತನಗೂ ಆತನಿಗೂ ಈಗ ಸಂಬಂಧಗಳಿಲ್ಲ ಎಂದು ಕೈತೊಳೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆದರೆ ತಮ್ಮದೇ ಮಗಳು ನಕಲಿ ಜಾತಿ ಪ್ರಮಾಣ ಪತ್ರ ಪಡೆದಿರುವುದರಿಂದ ನುಣುಚಿ ಕೊಳ್ಳುವುದು ಹೇಗೆ ಸಾಧ್ಯ? 'ನನ್ನ ಬಗ್ಗೆ ಬೇಕಾದರೆ ಮಾತನಾಡಲಿ. ಆದರೆ ಮಗಳ ಬಗ್ಗೆ ಯಾರಾದರೂ ಮಾತನಾಡಿದರೆ ತಾನು ಸಹಿಸುವುದಿಲ್ಲ' ಎಂದು ಗರ್ಜಿಸುವ ರೇಣುಕಾಚಾರ್ಯ ತನ್ನ ಮಗಳ ಈ ಪ್ರಮಾಣ ಪತ್ರ ಮತ್ತು ಸರ್ಕಾರಿ ಸೌಲಭ್ಯಗಳ ಪಡೆದಿರುವುದು ತಮ್ಮ ಗಮನಕ್ಕೆ ಬರದೇ ಹೋಗಿದೆ ಎನ್ನುವುದು ಯಾರಾದರೂ ನಂಬಲು ಸಾಧ್ಯವಿದೆಯೇ? ಇದೇ ಖೊಟ್ಟಿ ಪ್ರಮಾಣಪತ್ರ ಹಿಡಿದೇ ಪಡೆದಿರುವ ಉನ್ನತ ಶಿಕ್ಷಣದ ಸರ್ಕಾರದ ಸೌಲಭ್ಯಗಳನ್ನು ಲಪಟಾಯಿಸಿರುವುದರ ಬಗ್ಗೆ ಏನೆನ್ನುತ್ತಾರೆ? ಈ ಜಾತಿ ಪ್ರಮಾಣಪತ್ರ ಎಲ್ಲದಕ್ಕೂ ಬಳಕೆಯಾಗಿರುವುದು ರೇಣುಕಾಚಾರ್ಯರ ವಂಚನೆಯ ಕೃತ್ಯವನ್ನು ಬಯಲಾಗಿಸಿದೆ.



ಈ ನಕಲಿ ಜಾತಿ ಪ್ರಮಾಣ ಪತ್ರವನ್ನು ಪಡೆಯುತ್ತಿರುವ ಮತ್ತು ನೀಡುತ್ತಿರುವ ಜಾಲ ಬಹುದೊಡ್ಡದಾಗಿದೆ. ನಿಜಕ್ಕೂ ಅತ್ಯಂತ ಶೋಷಿತ, ದಮನಿತ ವಿಭಾಗಗಳಾದ ಎಸ್.ಸಿ. ಮತ್ತು ಎಸ್.ಟಿ. ವಿಭಾಗಗಳ ಅಭಿವೃದ್ಧಿಗೆ ರೂಪಿಸಲಾದ ಕನಿಷ್ಠ ಯೋಜನೆಗಳು ಆ ವಿಭಾಗಕ್ಕೆ ಸಿಕ್ಕದಂತೆ ಬಾಚಿಕೊಳ್ಳುವ ವಂಚಕತನ ಖಂಡನೀಯ. ಇದು ಅಧಿಕಾರಸ್ಥ ರಾಜಕಾರಣಿಗಳು ಮತ್ತು ಉನ್ನತ ಅಧಿಕಾರಿ ವಲಯದ ಶಾಮೀಲು ಇಲ್ಲದೆ ನಡೆಯಲು ಅಸಾಧ್ಯ ಜೊತೆಗೆ ಇಂತಹ ನಕಲಿ ಪ್ರಮಾಣಪತ್ರಗಳನ್ನು ಪಡೆಯಲು ವ್ಯಾಪಕವಾಗಿ ಹಣದ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ಇದ್ದೇ ಇರುತ್ತದೆ. ಶೋಷಿತ ಸಮುದಾಯಗಳ ವಿರುದ್ಧದ ಅಸಹನೆ ಮತ್ತು ಜಾತಿ ತಾರತಮ್ಯದ ದ್ವೇಷದ ಮನೋಭಾವವೂ ಇಲ್ಲಿ ಎದ್ದು ಕಾಣುತ್ತದೆ. ಈಗಲೂ ಕರ್ನಾಟಕದಲ್ಲಿ ಅನೇಕ ಕಡೆಗಳಲ್ಲಿ ಇಂತಹ ವಿವಿಧ ವಂಚನೆಯ ಪ್ರಕರಣಗಳು ನಡೆಯುತ್ತಿವೆ. ಬೀದರ್ ಮತ್ತು ಗುಲ್ಬರ್ಗ ಪ್ರದೇಶದಲ್ಲಿ ಇತ್ತೀಚಿನ ಕೆಲವು ವರ್ಷಗಳಲ್ಲಿ ಗೊಂಡ ಹೆಸರಿನ ಎಸ್.ಟಿ. ಜಾತಿ ಪ್ರಮಾಣ ಪತ್ರ ಗಳು ವಿತರಣೆಯಾಗುತ್ತಿರುವುದು ಇದ್ದಕ್ಕಿದ್ದಂತೆ ಲಕ್ಷಾಂತರ ಸಂಖ್ಯೆಯಲ್ಲಿ ಹೆಚ್ಚಿರುವುದು ನಿಜಕ್ಕೂ ಬೆಚ್ಚಿಬೀಳಿಸುವ ಒಂದು ಸಂಗತಿಯಾಗಿದೆ. ಇಂತಹ ಪ್ರಕರಣ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿಯೇ ಹೆಚ್ಚಿದೆ ಎನ್ನುವುದು ಕೂಡ ಗಮನಾರ್ಹ. ಒಂದಿಷ್ಟು ಆರ್ಥಿಕವಾಗಿ ಸಾಮಾಜಿಕ ಮತ್ತು

ಪುಟ 4 ಕ್ಕೆ

ಮಂಗಳೂರು ಪಾಲಿಕೆ ಮುಂದೆ ಡಿಎಚ್‌ಎಸ್ ಪ್ರತಿಭಟನೆ



ವರದಿ: ವಾ.ಉ.

ಮಂಗಳೂರು ಮಹಾನಗರ ಪಾಲಿಕೆಯು ದಲಿತ ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಯ ಬಗ್ಗೆ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುವಲ್ಲಿ ವಿಫಲವಾಗಿದೆ. ಕಾನೂನಿನನ್ವಯ ದಲಿತ ಮೀಸಲು ನಿಧಿಯನ್ನು ಉಪಯೋಗಿಸುತ್ತಿಲ್ಲ. ಇತ್ತೀಚೆಗೆ ಜಾರಿಗೊಳಿಸಿರುವ ಕಠಿಣ ನಿಯಮಗಳಿಂದ ಬಡ ದಲಿತರು ಸ್ವಂತ ಮನೆ ಹೊಂದುವ ಕನಸಿಗೆ ಎಳ್ಳು ನೀರು ಬಿಟ್ಟಂತಾಗಿದೆ ಎಂಬುದಾಗಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹಸಂಚಾಲಕ ಡಾ.ಕೃಷ್ಣಪ್ಪ ಕೊಂಚಾಡಿ ಟೀಕಿಸಿದರು.

ಅವರು ಮೇ 9 ರಂದು ಮಂಗಳೂರು ಪಾಲಿಕೆ ಎದುರು ದಲಿತ ಹಕ್ಕುಗಳ ಮಂಗಳೂರು ನಗರ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಕೆ. ಯಾದವ ಶೆಟ್ಟಿ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಜಿಲ್ಲಾ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್, ಜೆಎಂಎಸ್ ಜಿಲ್ಲಾ ಕಾರ್ಯದರ್ಶಿ ಭಾರತಿ ಬೋಳಾರ್, ನ್ಯಾಯವಾದಿಗಳ ಸಂಘದ ಯಶವಂತ ಮರೋಳಿ, ಖ್ಯಾತ ವಿಚಾರವಾದಿ ಪ್ರೊ.ನರೇಂದ್ರ ನಾಯಕ್, ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ್, ಸಾಹಿತಿ ಪ್ರಾಧ್ಯಾಪಕ ಪ್ರೊ.ಹರಿಯಪ್ಪ ತೇಜಾವರ, ಡಿಎಚ್‌ಎಸ್ ಜಿಲ್ಲಾಧ್ಯಕ್ಷರಾದ ತಿಮ್ಮಯ್ಯ ಕೊಂಚಾಡಿ, ಕಟ್ಟಡ ಕಾರ್ಮಿಕ ಸಂಘಟನೆಯ ರವಿಚಂದ್ರ ಕೊಂಚಾಡಿ ಮಾತನಾಡಿದರು.

ಡಿಎಚ್‌ಎಸ್ ನಗರ ಸಮಿತಿ ಅಧ್ಯಕ್ಷ ರಾಧಕೃಷ್ಣ, ಕಾರ್ಯದರ್ಶಿ ಕೃಷ್ಣ ತಣ್ಣೀರುಬಾವಿ, ಮುಖಂಡ ರಘುವೀರ್, ಡಿಎಚ್‌ಎಸ್ ಮಾರ್ಗದರ್ಶಕರಾದ ಯೋಗೀಶ್ ಜಪ್ಪಿನಮೊಗರು ನೇತೃತ್ವ ವಹಿಸಿದ್ದರು.

ದೌರ್ಜನ್ಯದ ದೇವದಾಸಿ ಪದ್ಧತಿ ನಿರ್ಮೂಲನೆಗೆ ಒತ್ತಾಯ, ದೇವದಾಸಿ ಮಹಿಳೆಯರ ಸಬಲೀಕರಣಕ್ಕೆ ಆಗ್ರಹ, ಜಿಲ್ಲಾ ಮಟ್ಟದ ದೇವದಾಸಿ ಮಹಿಳೆಯರ ಸಮಾವೇಶ

ಅನಾಗರಿಕ ಪದ್ಧತಿ ನಿರ್ಮೂಲನೆಗೆ ಕ್ರಮ ಕೈಗೊಳ್ಳದ ಸರ್ಕಾರ

ಸಮಾಜದ ಏಳಿಗೆಯ ನೆಪದಲ್ಲಿ ದಲಿತ ಕುಟುಂಬಗಳನ್ನು ಬಲವಂತವಾಗಿ ದೇವದಾಸಿ ಪದ್ಧತಿಗೆ ದೂಡುವ ಅನಾಗರೀಕ ಪದ್ಧತಿಯ ನಡವಳಿಕೆಯಲ್ಲಿ ತೊಡಗಿದವರನ್ನು ಶಿಕ್ಷಿಸುವ ಕ್ರಮಗಳಿಗೆ ಸರ್ಕಾರ ಮಂದಾಗದೆರುವುದು ನಾಗರೀಕ ಸಮಾಜ ತಲೆ ತಗ್ಗಿಸುವಂತಾಗಿದೆ ಎಂದು ರಾಜ್ಯ ಗೌರವಾಧ್ಯಕ್ಷ ಯು. ಬಸವರಾಜು ತಿಳಿಸಿದರು.

ನಗರದ ನಗರಸಭೆ ಉದ್ಯಾನವನದಲ್ಲಿ ನಡೆದ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಹಾಗೂ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ಮಕ್ಕಳ ಹೋರಾಟ ಸಮಿತಿಗಳು ಜಂಟಿಯಾಗಿ ಆಯೋಜಿಸಿದ ಜಿಲ್ಲಾ ಮಟ್ಟದ ದೇವದಾಸಿ ಮಹಿಳೆಯರ ಬೃಹತ್ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ದೇವದಾಸಿ ಮಹಿಳೆಯರು ದೇವದಾಸಿಯರಾಗಿ, ಮಹಿಳೆಯರಾಗಿ, ದಲಿತರಾಗಿ ಮತ್ತು ಕೂಲಿಕಾರರು ಹಾಗೂ ಬಡರೈತರಾಗಿ ವ್ಯಾಪಕವಾಗಿ ಸಾಮಾಜಿಕ ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ಇವರ ತಲಾ ಆದಾಯ ಪ್ರತಿ ದಿನಕ್ಕೆ 20 ರೂಗಳಿಗಿಂತಲೂ ಕಡಿಮೆ ಇರುವುದನ್ನು ಸರಕಾರ ಒಪ್ಪಿಕೊಳ್ಳುತ್ತಿದೆ. ಇವರ ಕುಟುಂಬದ ಸದ್ಯಸ್ಯರು ಸಾಮಾಜಿಕ ಅಪಮಾನದಿಂದ ನಲುಗುತ್ತಿದ್ದಾರೆ.

ಸರಕಾರಗಳು ದೌರ್ಜನ್ಯದ ದೇವದಾಸಿ ಪದ್ಧತಿಯ ನಿವಾರಣೆಗಾಗಿ ಗಂಭೀರ ಕ್ರಮಗಳನ್ನು ವಹಿಸದೇ ಮೇಲ್ಜಾತಿ ಹಾಗೂ ಮೇಲ್ವರ್ಗಗಳಿಗೆ ಪೂರಕವಾಗಿ ನಡೆದುಕೊಳ್ಳುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇಂತಹ ಅನಾಗರಿಕ ಪದ್ಧತಿಯನ್ನು ಸರ್ಕಾರ ನಿರ್ಮೂಲನೆ ಮಾಡಿ ದೇವದಾಸಿ ಮಹಿಳೆಯರ ಸಬಲೀಕರಣಕ್ಕೆ ಮುಂದಾಗುವಂತೆ ಆಗ್ರಹಿಸಿದರು.

ರಾಜ್ಯ ಕಾರ್ಯದರ್ಶಿ ಬಿ. ಮಾಳಮ್ಮ ಹಾಗೂ ರಾಜ್ಯ ಉಪಾಧ್ಯಕ್ಷರಾದ ಜಿ. ನಾಗರಾಜ ಮಾತನಾಡಿ ಸಮರ್ಪಕ ಪುನರ್ವಸತಿ ಕ್ರಮಗಳಿಗೆ ಮುಂದಾಗುತ್ತಿಲ್ಲ. ಮತ್ತು ದೌರ್ಜನ್ಯದ ದೇವದಾಸಿ ಪದ್ಧತಿಯ ಫಲಾನುಭವಿಗಳಿಗೆ ದೇವದಾಸಿ ಮಹಿಳೆಯರು ಮತ್ತು ಅವರ ಮಕ್ಕಳ ಹೊಣೆಗಾರಿಕೆಯನ್ನು ನಿಗದಿಸಿ ಜಾರಿಗೊಳಿಸಲು ಕ್ರಮವಹಿಸುತ್ತಿಲ್ಲ. ಬದಲಿಗೆ ದೇವದಾಸಿ ಮಹಿಳೆಯರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡುವ ನೀತಿಗಳನ್ನೇ ಸರಕಾರಗಳು ಅನುಸರಿಸುತ್ತಿವೆ. ಆದ್ದರಿಂದ ಇಂತಹ ವ್ಯವಸ್ಥೆಯ ವಿರುದ್ಧ ಸಂಘಟಿತರಾಗಿ ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡಬೇಕಿದೆ ಎಂದರು.

ಬಾಲು ರಾಠೋಡ ಮಾತನಾಡಿ, ದೇವದಾಸಿ ಮಹಿಳೆಯರಿಗೆ ನೀಡಲಾಗುವ ಮಾಸಿಕ ಸಹಾಯಧನವನ್ನು ಕನಿಷ್ಟ 3 ಸಾವಿರ ರೂಗಳಿಗೆ ಹೆಚ್ಚಿಸಬೇಕು. ದೇವದಾಸಿ ಮಹಿಳೆಯರ ಮಕ್ಕಳ ಮತ್ತು ಕುಟುಂಬದ ಸದಸ್ಯರನ್ನು ತಕ್ಷಣವೇ ಗಣತಿ ಮಾಡಿ ಅವರಿಗೂ ಪುನರ್ವಸತಿ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಉಪಾಧ್ಯಕ್ಷರಾದ ಜಿ. ನಾಗರಾಜ, ಪೀರು ರಾಠೋಡ. ಮಾರುತಿ ಚಿಟಗಿ, ದೇವಕ್ಕ ಜೋಗಣ್ಣವರ, ಲಕ್ಷ್ಮಣ ಹಳ್ಳಿಕೆರಿ, ದುರಗವ್ವ ಹರಿಜನ, ಹುಲಿಗೇಮ್ಮ ಮಾತಿನವರ, ಮಾಳಮ್ಮ ಅರಳಿಗಿಡದ, ಮುದಕವ್ವ ತಳ್ಳಿಹಾಳ, ಯಲ್ಲವ್ವ ಸೋನ್ನದ, ಯಮನವ್ವ ವಡಗೇರಿ, ದುರಗವ್ವ ಸೇರಿದಂತೆ 500ಕ್ಕೂ ಹೆಚ್ಚು ಮಹಿಳೆಯರು ಸಮಾವೇಶದಲ್ಲಿ ಭಾಗವಹಿಸಿದ್ದರು.



ಮತಾಂತರ ನಿಷೇಧ ಕಾಯ್ದೆ......

ಪುಟ 3 ರಿಂದ

ದುರುದ್ದೇಶಪೂರಿತ ಮತಾಂತರ ಮಾಡಲಾಗಿದೆ ಎಂದು ಯಾರ ಮೇಲಾದರೂ ಆರೋಪಿಸಿದರೆ ಅದನ್ನು ಸಾಬೀತು ಮಾಡುವುದು ಆರೋಪ ಮಾಡಿದವರ ಮತ್ತು ಸರಕಾರದ ಹೊಣೆಯಾಗಬೇಕು. ಇದು ಸಹಜ ನ್ಯಾಯ. ಆದರೆ ಈ ಕಾಯ್ದೆಯು ಆರೋಪಕ್ಕೆ ಗುರಿಯಾದವರು ತಾವು ದುರುದ್ದೇಶದ ಮತಾಂತರ ಮಾಡಿಲ್ಲ ಎಂದು ಸಾಬೀತು ಪಡಿಸಬೇಕು ಎಂದು ಈ ಕಾಯ್ದೆ ಹೇಳುತ್ತಿದೆ. ಅಲ್ಲದೇ ಜಿಲ್ಲಾಧಿಕಾರಿಗಳ ಪರವಾನಗಿ ಪಡೆಯಬೇಕು ಎನ್ನುವುದೂ ಅಸಂಬದ್ಧ, ಅಸಮರ್ಥನೀಯ.

ರಾಜ್ಯ ಮತ್ತು ಕೇಂದ್ರ ಸರಕಾರಗಳು ಜನರ ಗಮನವನ್ನು ಆಳುವ ಸರಕಾರಗಳ ವೈಫಲ್ಯಗಳ ಕಡೆಯಿಂದ ಬೇರೆಡೆಗೆ ಸೆಳೆದು ದಿಕ್ಕು ತಪ್ಪಿಸಲು ಪ್ರಯತ್ನಿಸುತ್ತಿವೆ. ಇಂತಹ ಪಿತೂರಿಗಳ ಭಾಗವಾಗಿ 'ಮತಾಂತರ', 'ಲವ್ ಜಿಹಾದ್' ಮುಂತಾದ ಹೆಸರಿನಲ್ಲಿ ಜನರ ಒಗ್ಗಟ್ಟನ್ನು ಮುರಿಯುವಂತಹ ಉದ್ದೇಶದಿಂದಲೇ ಬಲವಂತದ ಮತಾಂತರ ನಿಷೇಧದ ಹೆಸರಿನ ಈ ಕಾಯ್ದೆಯನ್ನು ತರಲಾಗಿದೆ ಎಂಬುದು ನಿಚ್ಚಳ.

ಹುಟ್ಟಿನಿಂದ ಬರುವ ಮತಧರ್ಮವು ಯಾವುದೇ ವ್ಯಕ್ತಿಯ ಸ್ವಂತ ಆಯ್ಕೆಯಲ್ಲ. ವ್ಯಕ್ತಿಗಳು ಬೆಳೆದು ವಯಸ್ಕರರಾದಾಗ ತಮಗೆ ಸರಿ ಕಂಡ ಮತಧರ್ಮವನ್ನು ಆರಿಸಿಕೊಳ್ಳುವ ಹಕ್ಕು ಅಥವಾ ಯಾವುದೇ ಮತಧರ್ಮವನ್ನು ಅನುಸರಿಸದಿರುವ ಹಕ್ಕು ಯಾವುದೇ ವ್ಯಕ್ತಿಗೆ ಇದ್ದೇ ಇದೆ. ಎಲ್ಲ ಆಧುನಿಕ ಪ್ರಜಾಪ್ರಭುತ್ವ ರಾಷ್ಟ್ರಗಳೂ ಮೂಲಭೂತ ಈ ಮಾನವ ಹಕ್ಕನ್ನು ಮಾನ್ಯ ಮಾಡಿವೆ ಮತ್ತು ಮಾನ್ಯ ಮಾಡಬೇಕಾಗುತ್ತದೆ. ಅಲ್ಲದೇ ಯಾವುದೇ ಒಂದು ಧರ್ಮದಿಂದ ಜನರು ಮತ್ತೊಂದು ಧರ್ಮಕ್ಕೆ ಬದಲಾಗುತ್ತಾರೆ ಎಂದಾದರೆ ಆ ಧರ್ಮದ ಧಾರ್ಮಿಕ ಮುಖಂಡರು ಮತ್ತು ಧಾರ್ಮಿಕ ಪ್ರತಿಪಾದಕರು ತಮ್ಮ ಮತ ಧರ್ಮದಲ್ಲಿರುವ ದೋಷ, ಸಮಸ್ಯೆಗಳ ಕಡೆಗೆ ಗಮನ ನೀಡಿ ಅವುಗಳನ್ನು ನಿವಾರಿಸಬೇಕು. ಧಾರ್ಮಿಕ ಸುಧಾರಣೆಗಳನ್ನು ತಂದು ಜನರ ವಿಶ್ವಾಸವನ್ನು ಗಳಿಸಿಕೊಳ್ಳಬೇಕೆ ಹೊರತು ಸರ್ವಾಧಿಕಾರಿ ಕಾನೂನುಗಳ ಮೂಲಕ ಅದನ್ನು ತರುವುದು ನ್ಯಾಯವಲ್ಲ.

ಆದ್ದರಿಂದ ಸರಕಾರ ಈ ಮಸೂದೆಯನ್ನು ರದ್ದುಗೊಳಿಸಬೇಕು. ಸಂವಿಧಾನ ವಿರೋಧಿ ಮಸೂದೆಗೆ ರಾಜ್ಯಪಾಲರು ಅಂಗೀಕಾರ ನೀಡದೇ ತಿರಸ್ಕರಿಸಬೇಕು. ರಾಜ್ಯದಲ್ಲಿ ಮತೀಯ ದ್ವೇಷದ ದಳ್ಳುರಿ ಹಚ್ಚಿರುವ ಸರಕಾರ ಮತ್ತು ಸಂಘ ಪರಿವಾರ ಈ ಕಾಯ್ದೆ ಮೂಲಕ ಶಾಂತಿ, ಸಾಮರಸ್ಯವನ್ನು ಕದಡುವ ಸಾಧನವಾಗಬಾರದು.

ಈ ಕಾಯ್ದೆ ವಿಧಾನಪರಿಷತ್ ನಲ್ಲಿ ಅನುಮೋದನೆ ಪಡೆಯಬೇಕಿತ್ತು. ಜೆಡಿಎಸ್ ಕಾಯ್ದೆಯನ್ನು ವಿರೋಧಿಸಿದ್ದರಿಂದ ಬಹುಮತ ಸಿಗದೇ ಹೋಗುವ ಅನುಮಾನ ಸರ್ಕಾರಕ್ಕೆ ಇತ್ತು. ಈ ಹಿನ್ನೆಲೆಯಲ್ಲಿಯೂ ಸರ್ಕಾರದ ಕ್ರಮ ಅನೈತಿಕ ಅಡ್ಡಹಾದಿ ಹಿಡಿದದ್ದೇ ಆಗಿದೆ.

ನಕಲಿ ಜಾತಿ ಪ್ರಮಾಣ ಪತ್ರ......

ಪುಟ 3 ರಿಂದ

ರಾಜಕೀಯವಾಗಿ ಮುಂದುವರೆದಿರುವ ಕೆಲವು ಶಕ್ತಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ದಮನಿತರ ಅನ್ನಕ್ಕೆ, ಕಲಿಯುವ, ದುಡಿಯುವ ಅವಕಾಶಗಳಿಗೆ ಕೈಹಾಕಿ ಬಾಚಿ ಕೊಳ್ಳುತ್ತಿರುವುದು ಸಮುದಾಯಗಳಿಗೆ ಬಗೆಯುವ ದ್ರೋಹವಾಗಿದೆ. ವಿಚಿತ್ರವೆಂದರೆ ಇಂತಹ ವಂಚಕ ಪ್ರಕರಣಗಳನ್ನು ಆಳವಾದ ತನಿಖೆಗೆ ಒಳಪಡಿಸಿ ನಿಷ್ಠುರ ಕ್ರಮ ಜರುಗಿಸಿ ಶೋಷಿತ ಸಮುದಾಯಗಳಿಗೆ ನ್ಯಾಯ ದೊರಕಿಸಬೇಕಾದ ಸರ್ಕಾರವೇ ಇದೀಗ ಅಂತಹ ವಂಚನೆಯ ಜಾಲವನ್ನು ಹೊರಗೆಳೆದ ಉನ್ನತ ಅಧಿಕಾರಿಗಳ ಮೇಲೆ ಸೇಡಿನ ಕ್ರಮವನ್ನು ಕೈಗೊಳ್ಳುತ್ತಿದೆ. ಹೀಗೆ ಈ ಸರ್ಕಾರದ ಪ್ರತಿ ಕ್ರಮಗಳು ಅದು ಯಾರ ಪರ ಎನ್ನುವುದನ್ನು ಸಾರಿ ಹೇಳುತ್ತಿದೆ. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ಪರವೆಂದು ಪೋಸ್ ಕೊಡುವ ಮುಖ್ಯಮಂತ್ರಿಗಳು, ಬಿಜೆಪಿಯ ನಾಯಕರು, ಈ ಸಮುದಾಯಗಳಿಂದ ಹೆಚ್ಚಿನ ಶಾಸಕರನ್ನು ಪಡೆದಿರುವ ಬಿಜೆಪಿ ವಾಸ್ತವದಲ್ಲಿ ಈ ಸಮುದಾಯಗಳಿಗೆ ಏನು ಮಾಡುತ್ತಿದೆ? ಈ ವಿಭಾಗಗಳ ಶಾಸಕರು ಸಚಿವರು ಏನು ಮಾಡುತ್ತಿದ್ದಾರೆ ಅಧಿಕಾರದ ಎಂಜಲಿಗೆ ಹಪಾಹಪಿಸುವ ಇಂತಹವರು ತಾವು ಪ್ರತಿನಿಧಿಸುವ ಸಮುದಾಯಗಳಿಗೆ ಏನು ಮಾಡುತ್ತಿದ್ದಾರೆ? ಹೇಳಿ ಕೇಳಿ ಚಾತುರ್ವರ್ಣದ ಜಾತಿವ್ಯವಸ್ಥೆಯನ್ನು ಪ್ರತಿಪಾದಿಸುವ ಬಿಜೆಪಿ ಕಾರ್ಯಾಚರಣೆಯಲ್ಲಿಯೂ ಅದನ್ನೇ ಜಾರಿಗೊಳಿಸುತ್ತಿರುವುದು ಪ್ರತಿಹಂತದಲ್ಲೂ ನಿಚ್ಚಳವಾಗಿ ಕಾಣುತ್ತಿದೆ.

ಮುಖ್ಯಮಂತ್ರಿಗಳು ನಕಲಿ ಜಾತಿ ಪ್ರಮಾಣ ಪತ್ರ ನೀಡಿಕೆಯ ಈ ವಂಚಕ ಎಲ್ಲ ಪ್ರಕರಣಗಳನ್ನು ಆಳವಾದ ತನಿಖೆಗೆ ಒಳಪಡಿಸಬೇಕು. ತಪ್ಪಿತಸ್ಥರ ಮೇಲೆ ನಿಷ್ಠುರವಾದ ಕಠಿಣ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು. ತನಿಖೆ ನಡೆಸುತ್ತಿರುವ ಅಧಿಕಾರಿಯನ್ನು ದಿಢೀರನೇ ವರ್ಗಾವಣೆ ಮಾಡಿರುವುದನ್ನು ರದ್ದುಗೊಳಿಸಬೇಕು. ಮತ್ತು ಈ ಪ್ರಕರಣ ತನಿಖೆ ಮುಂದುವರಿಸುವಂತೆ ನೋಡಿಕೊಳ್ಳಬೇಕು. ಇಲ್ಲವಾದಲ್ಲಿ ಎಲ್ಲಾ ಹಗರಣಗಳ ಕಪ್ಪು ಮಸಿ ಬಸವರಾಜ ಬೊಮ್ಮಾಯಿ ಅವರನ್ನು ಮೆತ್ತಿಕೊಳ್ಳುತ್ತದೆ ಎನ್ನುವುದನ್ನು ಮರೆಯಬಾರದು.

ಜಾತಿ ದೌರ್ಜನ್ಯ ಮುನ್ನಡೆಸಲು ನೆರವಾಗುವ ಹಾಗೂ ಮತಾಂತರದ ಹಕ್ಕುಗಳನ್ನು ನಿಷೇಧಿಸುವ ಕರಾಳ ಸುಗ್ರೀವಾಜ್ಞೆಗೆ ಸಿಪಿಐ(ಎಂ) ವಿರೋಧ

ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ (ಮತಾಂತರ ನಿಷೇಧ) ಮಸೂದೆಯನ್ನು ಈ ದಿನ ಕರ್ನಾಟಕ ಸರಕಾರ ಸುಗ್ರೀವಾಜ್ಞೆಯ ಮೂಲಕ ಜಾರಿಗೊಳಿಸಲು ಹೊರಟಿರುವುದನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬಲವಾಗಿ ಖಂಡಿಸಿದೆ.

ಇದೊಂದು ಭಾರತದ ಸಂವಿಧಾನ ವಿರೋಧಿಯಾದ ಹಾಗೂ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ತೀವ್ರವಾಗಿ ಉಲ್ಲಂಘನೆ ಮಾಡಲು ಕುಮ್ಮಕ್ಕು ನೀಡುವ ಮತ್ತು ರಾಜ್ಯದಲ್ಲಿ ಮತೀಯ ದ್ವೇಷವನ್ನು ಉಲ್ಬಣಗೊಳಿಸಿ ರಾಜ್ಯದ ಶಾಂತಿಯನ್ನು ಕದಡುವ ಜನವಿರೋಧಿ ಹಾಗೂ ರಾಜ್ಯದ ಅಭಿವೃದ್ಧಿ ವಿರೋಧಿಯಾದ, ಲೂಟಿಕೋರ ನೀತಿಗಳಿಗೆ ನೆರವಾಗುವ ಸರ್ವಾಧಿಕಾರಿ ನಡೆಯಾಗಿದೆ. ಆದ್ದರಿಂದ ರಾಜ್ಯ ಸರಕಾರ ಇಂತಹ ಕರಾಳ ಸುಗ್ರೀವಾಜ್ಞೆ ಜಾರಿಗೊಳಿಸುವ ಯೋಜನೆಯನ್ನು ತಕ್ಷಣವೇ ಕೈ ಬಿಡುವಂತೆ ಸಿಪಿಐ(ಎಂ) ಒತ್ತಾಯಿಸಿದೆ.

ಭಾರತದ ಸಂವಿಧಾನವು ಈ ದೇಶದ ಪ್ರಜೆಗಳಿಗೆ ಕೊಡಮಾಡಿದ, ಯಾವುದೇ ಮತ ದರ್ಮವನ್ನು ಅನುಸರಿಸುವ ಮತ್ತು ಬದಲಾಯಿಸುವ ಹಾಗೂ ಮತದರ್ಮಗಳಲ್ಲಿ ನಂಬಿಕೆ ಇಡದಿರುವ ಪ್ರಜಾಸತ್ತಾತ್ಮಕ ಹಕ್ಕನ್ನು ನಿರಾಕರಿಸುತ್ತದೆ. ಆ ರೀತಿಯಲ್ಲಿ ಮತಾಂತರ ಹೊಂದ ಬೇಕಾದರೇ ಸರಕಾರದ ಪರವಾನಿಗಿ ಪಡೆಯಬೇಕೆಂದು ನಿರ್ಬಂಧಿಸುತ್ತದೆ.

ಮಾತ್ರವಲ್ಲಾ, ಆ ರೀತಿ ಮತಾಂತರ ಹೊಂದಿದ ವ್ಯಕ್ತಿಯ ಕುಟುಂಬದ ಸದಸ್ಯರು, ಬಂಧುಗಳು ಮತ್ತು ಗೆಳೆಯ/ ಗೆಳತಿಯರು ಯಾರು ಬೇಕಾದರೂ ದೂರು ಸಲ್ಲಿಸಲು ಅವಕಾಶ ನೀಡುವ ಮೂಲಕ ಮತಾಂಧ ಸಂಘಗಳು ಮತ್ತು ಶಕ್ತಿಗಳಿಗೆ ಮತೀಯ ಗಲಭೆಗಳನ್ನು ಸೃಷ್ಟಿಸಲು ಕುಮ್ಮಕ್ಕು ನೀಡುತ್ತದೆ.

ಅದು ಮಾತ್ರವಲ್ಲಾ, ಈಗಾಗಲೇ ಮತಾಂತರ ಹೊಂದಿ ಶಾಂತಿ ನೆಮ್ಮದಿಯಿಂದ ಜೀವಿಸುವವರ ಮತ್ತು ವ್ಯಕ್ತಿಗಳ ಕೋರಿಕೆಯ ಮತ್ತು ಒಪ್ಪಿಗೆಯ ಮೇರೆಗೆ ಮತಾಂತರಕ್ಕೆ ಕ್ರಮವಹಿಸಿದ ವ್ಯಕ್ತಿಗಳು ಮತ್ತು ಸಂಸ್ಥೆಗಳ ಮೇಲೆ ಕ್ರಮವಹಿಸಲು ಅವಕಾಶ ನೀಡುತ್ತದೆ.

ಮಾತ್ರವಲ್ಲಾ, ಧಾರ್ಮಿಕ ಹಕ್ಕುಗಳ ರಕ್ಷಣೆಯ ಹೆಸರಿನಲ್ಲಿ ಅಮಾನವೀಯವಾದ ಜಾತಿ ತಾರತಮ್ಯದ ಪದ್ಧತಿ ಹಾಗೂ ಅಸ್ಪೃಶ್ಯಾಚರಣೆಯನ್ನು ಬಲಗೊಳಿಸುವ ಮತ್ತು ಅಪ್ರತ್ಯಕ್ಷವಾಗಿ ಅಂತರ್ಜಾತೀಯ ವಿವಾಹಗಳನ್ನು ಬೆದರಿಸುವ ದುರುದ್ದೇಶವನ್ನು ಹೊಂದಿದೆ ಎಂದು ಸಿಪಿಐ(ಎಂ) ವಿವರಿಸಿದೆ.

ದೇಶ ದ್ರೋಹದ ಕಾನೂನಿಗೆ ಸುಪ್ರಿಂ ಕೋರ್ಟ ತಡೆ ಸ್ವಾಗತಾರ್ಹ ಸಿಪಿಐ(ಎಂ)

ಭಾರತೀಯ ದಂಡ ಸಂಹಿತೆಯ ದೇಶ ದ್ರೋಹಕ್ಕೆ ಸಂಬಂದಿಸಿದ ಸೆಕ್ಷನ್ 124 ಎ ಗೆ ನೆನ್ನೆ ದೇಶದ ಅತ್ಯುನ್ನತ ನ್ಯಾಯಾಲಯ ತಡೆ ನೀಡಿರುವುದನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಸ್ವಾಗತಿಸಿದೆ.

ಒಕ್ಕೂಟ ಹಾಗೂ ಹಲವಾರು ರಾಜ್ಯಗಳಲ್ಲಿ ಬಿಜೆಪಿ ನೇತೃತ್ವದ ಸರಕಾರಗಳು ಅಧಿಕಾರಕ್ಕೆ ಬಂದ ಮೇಲೆ ಸರಕಾರಗಳ ಜನ ವಿರೋಧಿ ನೀತಿಗಳು ಮತ್ತು ಶಾಂತಿ ಸೌಹಾರ್ಧತೆಯನ್ನು ಕದಡುವ ಮತಾಂಧತೆಯ ಕ್ರಮಗಳನ್ನು ವಿರೋಧಿಸುವವರ ಮೇಲೆ ಈ ಸೆಕ್ಷನ್ ದುರ್ಬಳಕೆ ಮಾಡಿ ವಿಚಾರಣೆಯಿಲ್ಲದೆ ಹಲವಾರು ವರ್ಷಗಳ ಕಾಲ ಜೈಲಿಗೆ ತಳ್ಳಿ ಬಾಯಿ ಮುಚ್ಚಿಸುವ ನೀತಿಯನ್ನು ಅನುಸರಿಸುತ್ತಿತ್ತು. ಇದರ ವಿರುದ್ಧ ಸಿಪಿಐ(ಎಂ) ಪ್ರತಿಭಟನೆ ನಡೆಸಿತ್ತು ಮತ್ತು ಅಂತಹ ಸೆಕ್ಷನ್ ದುರುಪಯೋಗವನ್ನು ತಡೆಯಲು ಒತ್ತಾಯಿಸಿತು. ಮಾತ್ರವಲ್ಲಾ ಅಕ್ರಮವಾಗಿ ಬಂಧಿಸಿರುವವರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿತು.

ರೋಹಿತ್ ಚಕ್ರತೀರ್ಥ ಪೂರ್ವಗ್ರಹ ಪೀಡಿತ: ಇತಿಹಾಸಕಾರರು, ಶಿಕ್ಷಣ ತಜ್ಞರ ಆಕ್ರೋಶ

'ಅಕಾಡೆಮಿಕ್ ನೆಲೆಯಲ್ಲಿ ಅಧ್ಯಯನ ನಡೆಸದ ಮತ್ತು ಇತಿಹಾಸದ ವೈಧಾನಿಕತೆಯ ಅರಿವು ಇರದ ರೋಹಿತ್ ಚಕ್ರತೀರ್ಥ ಪೂರ್ವಗ್ರಹ ಪೀಡಿತರು. ತಮ್ಮ ಅಪ್ರಬುದ್ಧ ಹೇಳಿಕೆಗಳ ಮೂಲಕ ಸಾರ್ವಜನಿಕರ ದಿಕ್ಕು ತಪ್ಪಿಸುತ್ತಿದ್ದಾರೆ' ಎಂದು ಇತಿಹಾಸಕಾರರು, ಶಿಕ್ಷಣ ತಜ್ಞರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಜಂಟಿ ಹೇಳಿಕೆ ಬಿಡುಗಡೆ ಮಾಡಿರುವ ತುಮಕೂರು ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಪ್ರೊ. ಓ. ಅನಂತರಾಮಯ್ಯ, ಕಲಬುರ್ಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ನಿವೃತ್ತ ಸಮ ಕುಲಾಧಿಪತಿ ಪ್ರೊ.ಎಸ್. ಚಂದ್ರಶೇಖರ್, ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಪ್ರೊ. ಅಶ್ವತ್ಥ ನಾರಾಯಣ, ಇತಿಹಾಸ ದರ್ಪಣದ ಸಂಪಾದಕ ಡಾ. ಹಂ.ಗು. ರಾಜೇಶ್ ಹಾಗೂ ಇತಿಹಾಸಕಾರ ಡಾ.ಎಚ್.ಎಸ್. ಗೋಪಾಲರಾವ್ ಮತ್ತು ಇತಿಹಾಸ ಸಂಶೋಧಕ ಡಾ. ಕೆ.ಪ್ರಕಾಶ್ ಅವರು, 'ಮರುಪರಿಷ್ಕರಣೆ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಿದ ನಂತರ ರೋಹಿತ್ ಚಕ್ರತೀರ್ಥ ನೀಡಿರುವ ಹೇಳಿಕೆಗಳನ್ನು ಗಮನಿಸಿದಾಗ ಇತಿಹಾಸ ಪಠ್ಯ ಪುಸ್ತಕಗಳಲ್ಲಿನ ವಿಷಯವನ್ನು ತಿರುಚುವ ಹುನ್ನಾರ ನಡೆಸಿದಂತೆ ತೋರುತ್ತದೆ' ಎಂದಿದ್ದಾರೆ.

'ಪಠ್ಯ ಮರುಪರಿಷ್ಕರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಮೇಲೆ ಅಧ್ಯಕ್ಷರ ಜವಾಬ್ದಾರಿ ಮುಗಿಯುತ್ತದೆ. ಒಪ್ಪುವುದು ಬಿಡುವುದು ಸರ್ಕಾರದ ವಿವೇಚನೆ. ಆದರೆ, ಶಿಷ್ಟಾಚಾರ ಮರೆತು ಹಿಂದಿನ ಅಧ್ಯಕ್ಷರನ್ನು ದೂಷಿಸುವುದು ಮತ್ತು ಅಕಾಡೆಮಿಕ್ ವಲಯದಲ್ಲಿ ನಡೆಯಬೇಕಾದ ಚರ್ಚೆಯನ್ನು ಸಂತೆಯಲ್ಲಿ ನಿಂತು ಮಾತನಾಡುವುದು ಸರ್ಕಾರದ ನಿಯಮಗಳಿಗೂ ವಿರುದ್ಧವಾದುದು. ಆದ್ದರಿಂದ ರೋಹಿತ್ ಚಕ್ರತೀರ್ಥ ಅವರ ವರ್ತನೆಯನ್ನು ಸರ್ಕಾರ ನಿಯಂತ್ರಿಸಬೇಕು' ಎಂದು ಒತ್ತಾಯಿಸಿದ್ದಾರೆ.

'2017ರಲ್ಲಿ ಜಾರಿಯಾದ ಪರಿಷ್ಕೃತ ಪಠ್ಯಪುಸ್ತಕಗಳು ಬರಗೂರು ರಾಮಚಂದ್ರಪ್ಪ ಅವರ ಸರ್ವಾಧ್ಯಕ್ಷತೆಯಲ್ಲಿ ವಿವಿಧ ವಿಷಯಗಳ 27 ತಜ್ಞರ ಸಮಿತಿಗಳಿಂದ ರೂಪುಗೊಂಡಿದ್ದವು. ಐದು ವರ್ಷಗಳ ನಂತರ ಪರಿಷ್ಕರಣೆಗೆ ಆಕ್ಷೇಪ ವ್ಯಕ್ತಪಡಿಸಲಾಯಿತು. ಆಗ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಸಮಿತಿ ಮರುಪರಿಷ್ಕರಣೆ ನಡೆಸಿರುವುದೇ ಸಂಶಯಗಳಿಗೆ ಎಡೆಮಾಡಿಕೊಟ್ಟಿದೆ' ಎಂದು ದೂರಿದ್ದಾರೆ.

ಚಕ್ರತೀರ್ಥ ಅವರು ವಿಡಿಯೊವೊಂದರಲ್ಲಿ 'ತುಪ್ಪ ಇಲ್ಲದೆ ಜನ ಒದ್ದಾಡಬೇಕಾಯಿತು; ಹಸಿವಿನಿಂದ ಮಕ್ಕಳು ಸಾಯಬೇಕಾಯಿತು' ಎಂದು ಪಠ್ಯ ಪುಸ್ತಕದಲ್ಲಿ ಇರುವುದಾಗಿ ಹಸಿ ಸುಳ್ಳು ಹೇಳಿದ್ದಾರೆ. ಯಾವ ತರಗತಿಯ ಇತಿಹಾಸ ಪಠ್ಯದಲ್ಲಿ ಹೀಗೆ ಬರೆದಿದೆ ಎಂಬುದನ್ನು ಅವರೇ ತೋರಿಸಬೇಕು ಎಂದು ಹೇಳಿದ್ದಾರೆ.

'ವೇದಗಳ ಕಾಲದಲ್ಲಿ ಮಹಿಳೆಯರಿಗೆ ಸ್ಥಾನಮಾನಗಳಿರಲಿಲ್ಲ. ಅವರನ್ನು ಗೌರವದಿಂದ ನೋಡಿಕೊಳ್ಳುತ್ತಿರಲಿಲ್ಲ' ಎಂಬುದಾಗಿ ಪಠ್ಯ ಪುಸ್ತಕಗಳಲ್ಲಿ ಬರೆದಿದ್ದಾರೆಂದು ಆರೋಪಿಸುತ್ತಾರೆ. ಬಹುಶಃ ಚಕ್ರತೀರ್ಥ ಅವರು ಪಠ್ಯ ಪುಸ್ತಕವನ್ನು ಸರಿಯಾಗಿ ಓದಿಕೊಂಡಿರುವಂತೆ ಕಾಣುವುದಿಲ್ಲ. ಏಕೆಂದರೆ, 6ನೇ ತರಗತಿ ಸಮಾಜ ವಿಜ್ಞಾನ ಪಠ್ಯ ಪುಸ್ತಕ ಭಾಗ–1 ರ 'ವೇದಕಾಲದ ಸಂಸ್ಕೃತಿ' ಪಾಠದಲ್ಲಿ (ಪುಟ: 74ರಲ್ಲಿ) 'ಸ್ತ್ರೀಯರ ಸ್ಥಾನಮಾನ' ಎಂಬ ಉಪಶೀರ್ಷಿಕೆ ಅಡಿಯಲ್ಲಿ ಋಗ್ವೇದ ಕಾಲದಲ್ಲಿ ಸ್ತ್ರೀಯರಿಗಿದ್ದ ಉನ್ನತ ಸ್ಥಾನಮಾನಗಳಿದ್ದವೆಂದು ಬರೆಯಲಾಗಿದೆ. ಆ ಕಾಲದ ಪ್ರಮುಖ ಮಹಿಳಾ ವಿದ್ವನ್ಮಣಿಗಳನ್ನೂ ಹೆಸರಿಸಲಾಗಿದೆ. ಋಗ್ವೇದ ಕಾಲದಲ್ಲಿದ್ದ ಮಹಿಳೆಯರ ಸ್ಥಾನಮಾನಗಳು ನಂತರದ ವೇದಗಳ ಕಾಲದ ಸಮಾಜದಲ್ಲಿ ಕುಸಿಯುತ್ತವೆ. ಇದು ಕೂಡ ಸ್ಪಷ್ಟವಾಗಿದೆ. ಹೀಗೆ ಕಣ್ಮುಂದೆ ಇರುವ ಪಠ್ಯಪುಸ್ತಕಗಳನ್ನೇ ಇಟ್ಟುಕೊಂಡು, ಸರ್ಕಾರ ನೀಡಿರುವ ಜವಾಬ್ದಾರಿಯುತ ಸ್ಥಾನದಲ್ಲಿರುವ ವ್ಯಕ್ತಿ ಈ ಪರಿಯಲ್ಲಿ ಸುಳ್ಳುಗಳನ್ನು ಹೇಳುತ್ತಿರುವುದು ದುರದೃಷ್ಟಕರ ಎಂದಿದ್ದಾರೆ.


ಹರಪ್ಪ ನಾಗರಿಕತೆಯನ್ನು ಸಿಂಧೂ–ಸರಸ್ವತಿ ನಾಗರಿಕತೆ ಎಂದು ಕರೆಯುವುದು; ಸಿಂಧೂ–ಸರಸ್ವತಿ ನಾಗರಿಕತೆಯು ವೇದಗಳ ನಂತರ ಕಾಲದ್ದೆಂದು ಪ್ರತಿಪಾದಿಸಲು ಹೊರಟಿರುವುದು, ಇದೆಲ್ಲ ಅವರ ತಿಳಿವಳಿಕೆಯ ಕೊರತೆಯನ್ನು ತೋರ್ಪಡಿಸುತ್ತವೆ ಎಂದಿದ್ದಾರೆ.

1921ರಲ್ಲಿ ಸಿಂಧೂ ಕಣಿವೆಯ ಹರಪ್ಪಾ ಎಂಬಲ್ಲಿ ನಾಗರಿಕತೆಯ ಮೊದಲ ನೆಲೆಯು ಬೆಳಕಿಗೆ ಬಂದಿತು. ತದನಂತರದ ವರ್ಷಗಳಲ್ಲಿ ಈ ನಾಗರಿಕತೆಯ ನೆಲೆಗಳು ಸಿಂಧೂ ಕಣಿವೆಯ ಆಚೆಗೂ ಅಂದರೆ, ಯಮುನಾ, ತಪತಿ, ನರ್ಮದಾ ಕಣಿವೆಗಳಲ್ಲಿಯೂ ಬೆಳಕಿಗೆ ಬಂದಿದ್ದರಿಂದ ನದಿ ಕಣಿವೆಯ ಹೆಸರಿನಿಂದ ಈ ನಾಗರಿಕತೆಯನ್ನು ಗುರುತಿಸಲು ಅಸಾಧ್ಯವಾಯಿತು. ಆದ್ದರಿಂದ ಅದರ ಮೊದಲ ನೆಲೆಯಾದ 'ಹರಪ್ಪಾ' ಹೆಸರಿನಿಂದ ಈ ನಾಗರಿಕತೆಯನ್ನು ಇತಿಹಾಸಕಾರರು ಗುರುತಿಸುತ್ತಾ ಬರುತ್ತಿದ್ದಾರೆ. ಪುರಾತತ್ವ ಸಂಶೋಧನಾ ಶಾಸ್ತ್ರದ ವೈಧಾನಿಕತೆಯಲ್ಲಿ ನೆಲೆಗಳ ಹೆಸರಿನಿಂದಲೇ ಸಂಸ್ಕೃತಿಗಳನ್ನು ಗುರುತಿಸುವುದು ಇಲ್ಲಿವರೆಗೂ ನಡೆದು ಬಂದಿರುವ ಮಾದರಿ.

ಸಿಂಧೂ ನಾಗರಿಕತೆಯು ವೇದಗಳ ನಂತರ ಕಾಲದ್ದು ಎಂದು ಚಕ್ರತೀರ್ಥ ಅವರು ಸುಳ್ಳು ಪ್ರತಿಪಾದನೆಗೆ ಮುಂದಾಗಿದ್ದಾರೆ. ಪ್ರಸಿದ್ಧ ಇತಿಹಾಸಕಾರ ಆರ್.ಸಿ. ಮಜುಂದಾರ್ ಅವರೇ ಸಿಂಧೂ ನಾಗರಿಕತೆಯು ವೇದ ಕಾಲಕ್ಕೂ ಮೊದಲಿನದೆಂದು ಸ್ಪಷ್ಟವಾಗಿ ತೋರಿಸಿ ಕೊಟ್ಟಿದ್ದಾರೆ. ಅವರು ತಮ್ಮ `An Advanced History of India' ಎಂಬ ಕೃತಿಯಲ್ಲಿ (ಪುಟ: 22–23) ಸಿಂಧೂ ನಾಗರಿಕತೆ ಮತ್ತು ವೇದಗಳ ಸಂಸ್ಕೃತಿ ಹೇಗೆ ಬೇರೆ ಬೇರೆ, ಹಾಗೂ ಸಿಂಧೂ ನಾಗರಿಕತೆ ವೇದಗಳ ನಾಗರಿಕತೆಗಿಂತ ಹೇಗೆ ಪ್ರಾಚೀನ ಎಂಬುದನ್ನು ತರ್ಕಬದ್ಧವಾಗಿ ನಿರೂಪಿಸಿದ್ದಾರೆ. ಚಕ್ರತೀರ್ಥ ಅವರು ಇಷ್ಟಾದರೂ ಕೂಡ ಬರಗೂರರೇ ಎಡಪಂಥಿಯರ ಸಿದ್ಧಾಂತವನ್ನು ಪಠ್ಯದಲ್ಲಿ ತಂದಿದ್ದಾರೆ ಎಂದು ಆರೋಪಿಸುವ ಮೂಲಕ ತಮ್ಮ ಅಜ್ಞಾನವನ್ನು ಜಗಜ್ಜಾಹೀರು ಮಾಡಿಕೊಂಡಿದ್ದಾರೆ. ತಮ್ಮ ವಿಚಾರಧಾರೆಗೆ ಒಪ್ಪದ ಭಿನ್ನ ನೋಟಗಳನ್ನು ಎಡಪಂಥಿಯ ವಿಚಾರಧಾರೆ ಎಂದೇ ಆರೋಪಿಸುವ ಮೂಲಕ ಚರಿತ್ರೆಯನ್ನು ಅರ್ಥೈಸುವ ಬಹುಮಾದರಿಗಳನ್ನು ನಿರಾಕರಿಸುತ್ತಾರೆ ಎಂದು ದೂರಿದ್ದಾರೆ.

ಚಕ್ರತೀರ್ಥ ಅವರು ಟಿಪ್ಪುವನ್ನು 'ಮೈಸೂರು ಹುಲಿ'ಎಂದು ಕರೆದವರು ಯಾರು? ಅವನಿಗೆ 'ಸುಲ್ತಾನ' ಎಂಬ ಬಿರುದು ಕೊಟ್ಟವರು ಯಾರು? ಎಂದು ಪ್ರಶ್ನಿಸಿರುವುದಲ್ಲದೆ, ಪಠ್ಯ ಪುಸ್ತಕದಲ್ಲಿ ಪ್ರಸ್ತಾಪಿಸಿರುವ ಟಿಪ್ಪುವಿನ ಪ್ರಗತಿಪರ ಕಾರ್ಯಗಳಾದ ರಾಕೆಟ್ ತಂತ್ರಜ್ಞಾನ ಅಭಿವೃದ್ಧಿ, ಮರಾಠರಿಂದ ಲೂಟಿಗೊಳಗಾದ ಶೃಂಗೇರಿ ಮಠಕ್ಕೆ ದೇಣಿಗೆ ನೀಡಿದ್ದು, ರೇಷ್ಮೆ ಅಭಿವೃದ್ಧಿ ಕೈಗೊಂಡ ವಿಚಾರಗಳನ್ನು ವೈಭವೀಕರಣಗೊಂಡಿವೆ ಎಂಬ ನೆಪದಲ್ಲಿ ಪಠ್ಯದಿಂದ ಕೈಬಿಟ್ಟಿರುವ ಅಂಶಗಳು ಮಾಧ್ಯಮಗಳಿಂದ ಬೆಳಕಿಗೆ ಬಂದಿವೆ. ಬ್ರಿಟಿಷ್ ಅಧಿಕಾರಿ ಮೆಡೋಸ್ ಟೇಲರ್ ಅವರು ಜನರು ಟಿಪ್ಪುವನ್ನು 'ಮೈಸೂರು ಹುಲಿ' ಎಂದು ಕರೆಯುತ್ತಿದ್ದರೆಂದು ದಾಖಲಿಸಿದ್ದಾರೆ. ಅವರ ಮಾತುಗಳನ್ನು ಜನಪದ ಲಾವಣಿಗಳು ಕೂಡ ಪುಷ್ಟೀಕರಿಸಿದ್ದು, ಲಾವಣಿಗಳು ಟಿಪ್ಪುವನ್ನು 'ಮೈಸೂರು ಹುಲಿ'ಎಂದು ಹಾಡಿ ಹೊಗಳಿವೆ. ಟಿಪ್ಪು ರಾಕೆಟ್ ತಂತ್ರಜ್ಞಾನವನ್ನು ಅಭಿವೃದ್ಧಿ ಮಾಡಿದ ಬಗ್ಗೆ ಖ್ಯಾತ ವಿಜ್ಞಾನಿಗಳಾದ ರೊದ್ದಂ ನರಸಿಂಹ ಮತ್ತು ಎ.ಪಿ.ಜೆ. ಅಬ್ದುಲ್ ಕಲಾಂ ಅವರೇ ಉಲ್ಲೇಖಿಸಿದ್ದಾರೆ. ರೇಷ್ಮೆ ಅಭಿವೃದ್ಧಿಪಡಿಸಿದ ಕುರಿತು ಖ್ಯಾತ ಇತಿಹಾಸಕಾರರಾದ ಡಾ. ಸೂರ್ಯನಾಥ ಕಾಮತ್, ಪ್ರೊ. ಷೇಕ್ ಅಲಿ ಮೊದಲಾದವರು ದಾಖಲಿಸಿದ್ದಾರೆ. ಅಲ್ಲದೆ, ಶೃಂಗೇರಿ ಮಠದ ಸಚ್ಚಿದಾನಂದ ಭಾರತಿ ಸ್ವಾಮೀಜಿಗಳೊಂದಿಗೆ ಟಿಪ್ಪು 23 ಪತ್ರ ವ್ಯವಹಾರಗಳನ್ನು ನಡೆಸಿರುವ ದಾಖಲೆಗಳು ಎ.ಕೆ. ಶಾಸ್ತ್ರಿ ಅವರು ಸಂಪಾದಿಸಿರುವ 'ಶೃಂಗೇರಿಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು'ಕೃತಿಯಲ್ಲಿ (ಪುಟ: 242–272) ಪ್ರಕಟವಾಗಿವೆ. ಇವುಗಳಲ್ಲಿ ಮಠಕ್ಕೆ ಟಿಪ್ಪು ನೀಡಿರುವ ಅಪಾರ ಪ್ರಮಾಣದ ದಾನ ದತ್ತಿಯನ್ನು ಯಾರೂ ಕೂಡ ಅಲ್ಲಗಳೆಯಲಾರರು. ಈ ಎಲ್ಲಾ ಕಾರಣಗಳಿಂದಾಗಿಯೇ ಇತಿಹಾಸಕಾರ ತಿ.ತಾ. ಶರ್ಮ ಅವರು 'ಅನಾಮಧೇಯ ಮೈಸೂರಿಗೆ ಅಭಿಮಾನಧನ ಟಿಪ್ಪು ಸುಲ್ತಾನ ಅಂತಾರಾಷ್ಟ್ರೀಯ ಸ್ಥಾನಗಳಿಸಿಕೊಟ್ಟ' ಎಂದು ಪ್ರಶಂಸಿಸಿದ್ದಾರೆ. ಟಿಪ್ಪುವನ್ನು ಕೇವಲ ಮುಸ್ಲಿಮನಾಗಿ ನೋಡದೆ 18ನೇ ಶತಮಾನದ ರಾಜಕೀಯ ಸಂಘರ್ಷಗಳ ಹಿನ್ನೆಲೆಯಲ್ಲಿ ಗ್ರಹಿಸುವುದು ಇತಿಹಾಸವು ಅಪೇಕ್ಷಿಸುವ ವಿಧಾನ ಎಂದು ವಿವರಿಸಿದ್ದಾರೆ.





ಸಾರ್ವಜನಿಕ ಶಿಕ್ಷಣದ ಮೇಲಿನ ವೆಚ್ಚ ಮತ್ತು ಪ್ರಭುತ್ವ

ಬಿ. ಶ್ರೀಪಾದ ಭಟ್

1964–66ರ ಕೊಠಾರಿ ಆಯೋಗ ಸೇರಿದಂತೆ ಹಲವು ಶಿಕ್ಷಣ ತಜ್ಞರ ಆಯೋಗಗಳು ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನದ (ಜಿ.ಡಿ.ಪಿ.) ಶೇ. 6 ರಷ್ಟನ್ನು ಶಿಕ್ಷಣಕ್ಕೆ ನೀಡಬೇಕು ಎಂದು ಶಿಫಾರಸ್ಸು ಮಾಡಿವೆ ಮತ್ತು ರಾಜ್ಯಗಳ ವಾರ್ಷಿಕ ಬಜೆಟ್ ವೆಚ್ಚದ ಶೇ. 26–30 ಪ್ರಮಾಣದಲ್ಲಿ ಶಿಕ್ಷಣಕ್ಕೆ ಮೀಸಲಿಡಬೇಕೆಂದು ಶಿಕ್ಷಣ ತಜ್ಞರು ಹೇಳುತ್ತಾರೆ. ಕಸ್ತೂರಿ ರಂಗನ್ ಅದ್ಯಕ್ಷತೆಯ ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) 2019ರ ಸಮಿತಿ ಮಂಡಿಸಿದ 484 ಪುಟಗಳ ಕರಡು ದಾಖಲೆಯಲ್ಲಿ "ಶಿಕ್ಷಣದ ಮೇಲಿನ ಸಾರ್ವಜನಿಕ ಹೂಡಿಕೆಯು ಗಮನಾರ್ಹ ಏರಿಕೆಯನ್ನು ಮಾಡುವ ದೃಷ್ಟಿಕೋನ ಹೊಂದಿದ್ದು, ಮುಂದಿನ ಹತ್ತು ವರ್ಷಗಳ ಅವಧಿಯಲ್ಲಿ ಈಗಿರುವ ಶೇ. 10 ರಿಂದ ಶೇ. 20ಕ್ಕೆ ಏರಲಿದೆ" (ಪುಟ 403 A1.2.2.)...., 'ಕೇಂದ್ರ ಮತ್ತು ರಾಜ್ಯ ಸರಕಾರಗಳು ಒಟ್ಟುಗೂಡಿಸಿದರೆ ಶೇ. 20ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಹಣ ಮೀಸಲಿಡಬೇಕು, ಪ್ರತಿ ವರ್ಷ ಶೇ. 1ರಷ್ಟು ಏರಿಕೆ ಮಾಡುತ್ತಾ ಬಂದರೂ ಸಹ ಮುಂದಿನ 10 ವರ್ಷಗಳಲ್ಲಿ ಶೇ. 20ರ ಪ್ರಮಾಣಕ್ಕೆ ತಲಪುತ್ತದೆ" (ಪುಟ 406 A1.3.1.) ಎಂದು ಹೇಳಿದೆ. ಖಾಸಗಿ ವಲಯಗಳ ಫಿಲಾಂಥ್ರಫಿಯ ಮೂಲಕವೂ ಹಣಕಾಸಿನ ನೆರವು ಪಡೆಯಬಹುದು. ಸಾರ್ವಜನಿಕ ವೆಚ್ಚವೆಂದರೆ ಕೇವಲ ಶಿಕ್ಷಣ ಇಲಾಖೆಯಲ್ಲ, ಜೊತೆಗೆ ಸಾರ್ವಜನಿಕ ಉದ್ದಿಮೆಗಳ ಸಿಎಸ್‌ಆರ್ ಫಂಡ್‌ನಿಂದ ಶೇ.1 ಪ್ರಮಾಣದ ಮೊತ್ತವನ್ನು ಶಿಕ್ಷಣಕ್ಕೆ ಬಳಸಿಕೊಳ್ಳಬಹುದು(ಪುಟ 407, A 1.3.1.2) ಎಂದಿದೆ.

ಆದರೆ ಕೇಂದ್ರದಲ್ಲಿ ಆಡಳಿತ ನಡೆಸಿದ ಯಾವುದೇ ಸರಕಾರಗಳೂ ಸಾರ್ವಜನಿಕ ವೆಚ್ಚದ ಕುರಿತು ಕಾಳಜಿ ತೋರಿಸಿಲ್ಲ. ರಾಜಕೀಯ ಇಚ್ಚಾಶಕ್ತಿ ಪ್ರದರ್ಶನ ಮಾಡಲಿಲ್ಲ. 1968 ಮತ್ತು 1986 ಶಿಕ್ಷಣ ನೀತಿಗಳು ಪ್ರತಿಪಾದಿಸಿದಂತೆ ಮತ್ತು 1992ರ ಕ್ರಿಯಾ ಯೋಜನೆ ಪುನರುಚ್ಚರಿಸಿದಂತೆ ಶಿಕ್ಷಣಕ್ಕೆ ಜಿ.ಡಿ.ಪಿ. ಶೇ.6 ರಷ್ಟು ಎಂದಿಗೂ ಸಿಗಲಿಲ್ಲ ಎನ್ನುವುದು ವಾಸ್ತವ ಸಂಗತಿ. ಶಿಕ್ಷಣ ಆಯೋಗಗಳ ಶಿಫಾರಸ್ಸುಗಳು ಕೇವಲ ಬಾಯಿ ಮಾತಿನ ಔಪಚಾರಿಕ ಪದಗಳಾಗಿವೆ. ಶಿಕ್ಷಣ ನೀತಿಯನ್ನು ಜಾರಿಗೊಳಿಸುವ ಹುಮ್ಮಸ್ಸಿನಲ್ಲಿರುವ ಸರಕಾರಗಳು ಅದಕ್ಕಾಗಿ ಸಾರ್ವಜನಿಕ ವೆಚ್ಚದ ಕುರಿತು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಹಂತಹಂತವಾಗಿ ಸಾರ್ವಜನಿಕ ಹೂಡಿಕೆಯಿಂದ ಹಿಂದೆ ಸರಿಯುತ್ತಿದೆ.

ಆದರೆ ಮತ್ತೊಂದೆಡೆ ಸರಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ, ಶಿಕ್ಷಕರ ಕೊರತೆ, ಕಂಪ್ಯೂಟರ್‌ಗಳ ಕೊರತೆಯನ್ನು ನೀಗಿಸಲು ಸರಕಾರವು ಯಾವುದೇ ಬಗೆಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ. ಜೊತೆಗೆ ಗಾಯದ ಮೇಲೆ ಬರೆ ಇಟ್ಟಂತೆ ಶಿಕ್ಷಣಕ್ಕಾಗಿ ಬಜೆಟ್‌ನಲ್ಲಿ ಮೊತ್ತವನ್ನು ಸಹ ಕಡಿತಗೊಳಿಸುತ್ತಿದೆ.

ಕಳೆದ ಒಂಬತ್ತು ವರ್ಷಗಳಲ್ಲಿ (2014–22) ಕೇಂದ್ರ ಸರಕಾರವು ತನ್ನ ಬಜೆಟ್ ವೆಚ್ಚದ ಶೇ. 3.30, ಜಿಡಿಪಿಯ ಸರಾಸರಿ ಶೇ.0.45 ಮೊತ್ತವನ್ನು ಶಿಕ್ಷಣಕ್ಕಾಗಿ ಮೀಸಲಿಟ್ಟಿದೆ.

ವರ್ಷ	ಬಜೆಟ್‌ನ ಪ್ರಮಾಣ(%)	ಜಿಡಿಪಿಯ ಪ್ರಮಾಣ(%)
2014	ಶೇ. 4.41	ಶೇ. 0.53
2015	ಶೇ. 3.75	ಶೇ. 0.5
2016	ಶೇ. 3.65	ಶೇ. 0.47
2017	ಶೇ. 3.74	ಶೇ. 0.48
2018	ಶೇ. 3.40	ಶೇ. 0.44
2019	ಶೇ. 3.40	ಶೇ. 0.45
2020	ಶೇ. 2.7	ಶೇ. 0.45
2021	ಶೇ. 2.1	ಶೇ. 0.42
2022	ಶೇ. 2.6	ಶೇ. 0.42
ಸರಾಸರಿ	**ಶೇ. 3.30**	**ಶೇ. 0.45**

ಕಳೆದ ಏಳು ವರ್ಷಗಳಲ್ಲಿ (2016–22) ಕರ್ನಾಟಕ ಸರಕಾರವು ತನ್ನ ಬಜೆಟ್ ವೆಚ್ಚದ ಸರಾಸರಿ ಶೇ 11.77, ಜಿಡಿಪಿಯ ಸರಾಸರಿ ಶೇ. 1.85 ಮೊತ್ತವನ್ನು ಶಿಕ್ಷಣಕ್ಕಾಗಿ ಮೀಸಲಿಟ್ಟಿದೆ.

ವರ್ಷ	ಬಜೆಟ್‌ನ ಪ್ರಮಾಣ(%)	ಜಿಡಿಪಿಯ ಪ್ರಮಾಣ(%)	ಬಜೆಟ್‌ನ ವೆಚ್ಚ (ಲಕ್ಷ ಕೋಟಿ ರೂ)	ಶಿಕ್ಷಣಕ್ಕೆ (ಸಾವಿರ ಕೋಟಿ ರೂ.)
2016	ಶೇ. 13.4	ಶೇ. 2.2	1.63	22000
2017	ಶೇ. 10.75	ಶೇ. 1.66	1.86	20000
2018	ಶೇ. 11.92	ಶೇ. 2	2.18	26000
2019	ಶೇ. 11.11	ಶೇ. 1.85	2.34	26580
2020	ಶೇ. 11.81	ಶೇ. 1.75	2.37	28967
2021	ಶೇ. 11.78	ಶೇ. 1.81	2.46	29000
2022	ಶೇ. 11.65	ಶೇ. 1.72	2.66	31980
ಸರಾಸರಿ	**ಶೇ. 11.77**	**ಶೇ. 1.85**	**2.21**	**26361**

ಮೇಲಿನ ಅಂಕಿ ಸಂಖ್ಯೆಗಳನ್ನು ವಿಶ್ಲೇಷಣೆ ಮಾಡಿದಾಗ ಕಳೆದ ಏಳು ವರ್ಷಗಳಲ್ಲಿ ಶಿಕ್ಷಣಕ್ಕೆ ಮೀಸಲಿಡುವ ಹಣದ ಮೊತ್ತ ಕಡಿಮೆಯಾಗುತ್ತಾ ಬಂದಿರುವುದು ನಿಚ್ಚಳವಾಗಿದೆ. 2014 ರಲ್ಲಿ ಕೇಂದ್ರದ ಬಜೆಟ್‌ನ ಶೇ. 4.14 ರಷ್ಟು ಮತ್ತು ಜಿಡಿಪಿಯ 0.53 ರಷ್ಟು ಶಿಕ್ಷಣಕ್ಕೆ ಹಂಚಿಕೆ ಮಾಡಲಾಗಿದೆ. ಒಂಬತ್ತು ವರ್ಷಗಳ ನಂತರ 2022 ರಲ್ಲಿ ಕೇಂದ್ರದ ಬಜೆಟ್‌ನ ಶೇ. 2.6 ರಷ್ಟು ಮತ್ತು ಜಿಡಿಪಿಯ 0.45 ರಷ್ಟು ಶಿಕ್ಷಣಕ್ಕೆ ಹಂಚಿಕೆ ಮಾಡಲಾಗಿದೆ. ಅಂದರೆ ಕ್ರಮವಾಗಿ ಶೇ.2 ಮತ್ತು ಶೇ.0.1 ರಷ್ಟು ಕಡಿತಗೊಳಿಸಲಾಗಿದೆ. ಅದೇ ರೀತಿಯಲ್ಲಿ 2016 ರಲ್ಲಿ ಕರ್ನಾಟಕದ ಬಜೆಟ್‌ನ ಶೇ. 13.4 ರಷ್ಟು ಮತ್ತು ಜಿಡಿಪಿಯ 2.2 ರಷ್ಟು ಶಿಕ್ಷಣಕ್ಕೆ ಹಂಚಿಕೆ ಮಾಡಲಾಗಿದೆ. ಏಳು ವರ್ಷಗಳ ನಂತರ 2022 ರಲ್ಲಿ ಕರ್ನಾಟಕದ ಬಜೆಟ್‌ನ ಶೇ.11.65 ರಷ್ಟು ಮತ್ತು ಜಿಡಿಪಿಯ 1.72 ರಷ್ಟು ಶಿಕ್ಷಣಕ್ಕೆ ಹಂಚಿಕೆ ಮಾಡಲಾಗಿದೆ. ಅಂದರೆ ಕ್ರಮವಾಗಿ ಶೇ. 1.75 ಮತ್ತು ಶೇ. 0.48 ರಷ್ಟು ಕಡಿತಗೊಳಿಸಲಾಗಿದೆ. ಇದು ಪ್ರಭುತ್ವವು ಸಾರ್ವಜನಿಕ ಶಿಕ್ಷಣದಿಂದ ತನ್ನ ಜವಾಬ್ದಾರಿಯನ್ನು ಕಳಚಿಕೊಳ್ಳುತ್ತಿರುವುದು ಸ್ಪಷ್ಟವಾಗಿ ಸೂಚಿಸುತ್ತದೆ.

ನಿಜದಲ್ಲಿ ರಾಜ್ಯ ಬಜೆಟ್‌ನ ಶೇ. 26 ರಷ್ಟು ಮತ್ತು ಜಿಡಿಪಿಯ ಶೇ. 6 ರಷ್ಟು ಹಣ ಹಂಚಿಕೆ ಮಾಡಬೇಕಾಗಿತ್ತು. ಆದರೆ ರಾಜ್ಯ ಸರಕಾರವು ಕ್ರಮವಾಗಿ ಶೇ. 14.23 ಮತ್ತು ಶೇ. 4.15 ರಷ್ಟು ಕಡಿಮೆ ಮೊತ್ತವನ್ನು ಶಿಕ್ಷಣಕ್ಕೆ ಹಂಚಿಕೆ ಮಾಡಿದೆ. ಕೇಂದ್ರ ಬಜೆಟ್‌ನ ಶೇ. 15 ರಷ್ಟು ಮತ್ತು ಜಿಡಿಪಿಯ ಶೇ. 6 ರಷ್ಟು ಹಣ ಹಂಚಿಕೆ ಮಾಡಬೇಕಾಗಿತ್ತು. ಆದರೆ ಕೇಂದ್ರ ಸರಕಾರವು ಕ್ರಮವಾಗಿ ಶೇ. 11.6 ಮತ್ತು ಶೇ. 5.55 ರಷ್ಟು ಕಡಿಮೆ ಮೊತ್ತವನ್ನು ಶಿಕ್ಷಣಕ್ಕೆ ಹಂಚಿಕೆ ಮಾಡಿದೆ. ಮುಖ್ಯವಾಗಿ ಕಳೆದ ಏಳು ವರ್ಷಗಳಲ್ಲಿ ದಿನ ಬಳಕೆಯ ವಸ್ತುಗಳ ಬೆಲೆ ಹತ್ತು ಪಟ್ಟು ದುಬಾರಿಯಾಗಿದೆ. ವಿದ್ಯುತ್, ನೀರಿನ ವೆಚ್ಚವೂ ದುಬಾರಿಯಾಗಿದೆ. ಹಣದುಬ್ಬರವೂ ಹೆಚ್ಚಾಗಿದೆ. ಆದರೆ ಶಿಕ್ಷಣಕ್ಕಾಗಿ ಸರಕಾರದ ವೆಚ್ಚ ಮಾತ್ರ ಅರ್ಧದಷ್ಟು ಕಡಿಮೆಯಾಗಿದೆ.

ಕೇಂದ್ರ ಸರಕಾರವು 2022–23ರ ಬಜೆಟ್‌ನಲ್ಲಿ ಶಿಕ್ಷಣಕ್ಕೆ 1,04,278 ಕೋಟಿ ಮೊತ್ತವನ್ನು ಹಂಚಿಕೆ ಮಾಡಿದೆ. ಇದರಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ 63,449 ಕೋಟಿ (2021–22ರಲ್ಲಿ 54,873 ಕೋಟಿ) ಹಂಚಿಕೆ ಮಾಡಿದೆ. ಉನ್ನತ ಶಿಕ್ಷಣಕ್ಕೆ 40,810 ಕೋಟಿ (2021–22ರಲ್ಲಿ 38,350 ಕೋಟಿ ಹಂಚಿಕೆ ಮಾಡಿತ್ತು. ನಂತರ ಅದನ್ನು ಪರಿಷ್ಕರಿಸಿ 36,031 ಕೋಟಿಗೆ ಕಡಿತಗೊಳಿಸಿತ್ತು) ಹಂಚಿಕೆ ಮಾಡಿದೆ.

ಪ್ರಾಥಮಿಕ ಶಿಕ್ಷಣದಲ್ಲಿ ಸಮಗ್ರ ಶಿಕ್ಷಣ ಅಭಿಯಾನ್ ಗೆ 2022ರಲ್ಲಿ 37,383 ಕೋಟಿ ಹಂಚಿಕೆ ಮಾಡಿದ್ದಾರೆ. 2021ರಲ್ಲಿ 31,050 ಕೋಟಿ, 2020ರಲ್ಲಿ 38,750 ಕೋಟಿ ಹಂಚಿಕೆ ಮಾಡಿದ್ದರು. ಅಂದರೆ ಎರಡು ವರ್ಷಗಳಲ್ಲಿ 1367 ಕೋಟಿ ಕಡಿತಗೊಳಿಸಿದ್ದಾರೆ.

2022ರಲ್ಲಿ ಸ್ಕಾಲರ್ಶಿಪ್‌ಗೆ 350 ಕೋಟಿ ಹಂಚಿಕೆ ಮಾಡಿದ್ದಾರೆ. 2021ರಲ್ಲಿ 350 ಕೋಟಿ, 2020ರಲ್ಲಿ 375 ಕೋಟಿ ಹಂಚಿಕೆ ಮಾಡಿದ್ದರು. ಅಂದರೆ ಎರಡು ವರ್ಷಗಳಲ್ಲಿ 25 ಕೋಟಿ ಕಡಿತಗೊಳಿಸಿದ್ದಾರೆ.

2022ರಲ್ಲಿ ಪರಿಶಿಷ್ಟ ಪಂಗಡದ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ ಮೊತ್ತವನ್ನು ಕೊಟ್ಟಿಲ್ಲ. 2021ರಲ್ಲಿ 1 ಕೋಟಿ, 2020ರಲ್ಲಿ 110 ಕೋಟಿ ಹಂಚಿಕೆ ಮಾಡಿದ್ದರು. ಅಂದರೆ ಎರಡು ವರ್ಷಗಳಲ್ಲಿ 110 ಕೋಟಿ ಕಡಿತಗೊಳಿಸಿದ್ದಾರೆ.

2022ರಲ್ಲಿ ಮದ್ಯಾಹ್ನದ ಬಿಸಿಯೂಟಕ್ಕೆ (ಪಿಎಮ್ ಪೋಷಣ್) 10,233 ಕೋಟಿ ಹಂಚಿಕೆ ಮಾಡಿದ್ದಾರೆ. 2021ರಲ್ಲಿ 11500 ಕೋಟಿ, 2020ರಲ್ಲಿ 11000 ಕೋಟಿ ಹಂಚಿಕೆ ಮಾಡಿದ್ದರು. ಅಂದರೆ ಒಂದು ವರ್ಷದಲ್ಲಿ 767 ಕೋಟಿ ಕಡಿತಗೊಳಿಸಿದ್ದಾರೆ.

2020ರಲ್ಲಿ ಕೇಂದ್ರ ಸರಕಾರವು ಶಿಕ್ಷಣಕ್ಕೆ 99,311 ಕೋಟಿ ಮೊತ್ತವನ್ನು ಮೀಸಲಿಟ್ಟಿತು. ಆದರೆ ಕೋವಿಡ್ ನೆಪದಲ್ಲಿ ಅದನ್ನು ಪರಿಷ್ಕರಿಸಿ 85,089 ಕೋಟಿಗೆ ಕಡಿತಗೊಳಿಸಿತು. ಅಂದರೆ ಶಿಕ್ಷಣಕ್ಕೆ ಬಜೆಟ್ ಹಂಚಿಕೆಯಿಂದ 14,222 ಕೋಟಿಯನ್ನು ಕಡಿಮೆ ಮಾಡಿದೆ.

2021ರ ಬಜೆಟ್‌ನಲ್ಲಿ ಶಾಲಾ ಶಿಕ್ಷಣಕ್ಕೆ 54,873 ಕೋಟಿ ಹಂಚಿಕೆ ಮಾಡಿದ್ದರು. 2020ರಲ್ಲಿ 59,845 ಕೋಟಿ ಕೊಟ್ಟಿದ್ದರು. ಅಂದರೆ ಒಂದು ವರ್ಷದಲ್ಲಿ 4971 ಕೋಟಿ ಕಡಿತಗೊಳಿಸಿದ್ದಾರೆ. ಈ ಭಾರಿ ಹಿನ್ನಡೆಯನ್ನು ಸರಿಪಡಿಸಲು ಅತಿ ಹೆಚ್ಚಿನ ಪ್ರಮಾಣದ ಸಾರ್ವಜನಿಕ ವೆಚ್ಚದ ಅವಶ್ಯಕತೆಯಿದೆ. ಒಂದೆಡೆ ಸರಕಾರಿ ಶಾಲೆಗಳು ಪ್ರಭುತ್ವದಿಂದ ಹಣಕಾಸಿನ ನೆರವಿಲ್ಲದೆ ದುರ್ಬಲಗೊಳ್ಳುತ್ತಿವೆ. ಆದರೆ ಪ್ರಭುತ್ವವು ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳುತ್ತಿದೆ. ಬದಲಿಗೆ ಶಿಕ್ಷಣವನ್ನು ಖಾಸಗೀಕರಣಗೊಳಿಸುವತ್ತ ತನ್ನ ಎಲ್ಲಾ ಶ್ರಮವನ್ನು ವ್ಯಯಿಸುತ್ತಿದೆ.

ಕೇಂದ್ರ ಸರಕಾರದ ಬಜೆಟ್‌ನ ಶೇ.33ರಷ್ಟು ಸಮಗ್ರ ಶಿಕ್ಷಣ ಅಭಿಯಾನಕ್ಕೆ, ಸ್ವಾಯತ್ತತ ಸಂಸ್ಥೆಗಳಿಗೆ ಶೇ.12 ರಷ್ಟು, ಮದ್ಯಾಹ್ನದ ಬಿಸಿಯೂಟಕ್ಕೆ ಶೇ.12ರಷ್ಟು, ಕೇಂದ್ರೀಯ ವಿವಿಗಳಿಗೆ ಅನುದಾನ ಶೇ.8ರಷ್ಟು, ಐಐಟಿಗಳಿಗೆ ಶೇ.8ರಷ್ಟು, ಯುಜಿಸಿ & ಎಐಸಿಟಿಇಗೆ ಶೇ. 5ರಷ್ಟು ವೆಚ್ಚವಾಗುತ್ತದೆ. ರಾಜ್ಯ ಸರಕಾರಗಳ ಬಜೆಟ್‌ನ ಶೇ.72 ಪ್ರಮಾಣದ ಮೊತ್ತವು ಶಿಕ್ಷಕರ ವೇತನಕ್ಕೆ ಖರ್ಚಾಗುತ್ತದೆ. ಕರ್ನಾಟಕದಲ್ಲಿ 30000 ಶಿಕ್ಷಕರ ಹುದ್ದೆಗಳು ಖಾಲಿಯಿದೆ (1:30 ಅನುಪಾತದ ಆಧಾರದಲ್ಲಿ). ದೇಶದಾದ್ಯಂತ ಶೇ.10ರಷ್ಟು ಏಕೋಪಾದ್ಯಾಯ ಶಾಲೆಗಳಿವೆ. ಆದರೆ ಸರಕಾರವು ಶಿಕ್ಷಕರನ್ನು ನೇಮಿಸಿಕೊಳ್ಳುತ್ತಿಲ್ಲ. ಆದರೆ ಅತ್ಯಂತ ಕಡಿಮೆ ಸಂಬಳದಲ್ಲಿ ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡು ಅವರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಶೇ.3ರಷ್ಟು ಮೊತ್ತ ಆಡಳಿತದ ವೆಚ್ಚ, ಶೇ.10ರಷ್ಟು ಶಾಲೆಯ ಮೂಲಭೂತ ಸೌಕರ್ಯ, ಗುಣಮಟ್ಟ ಮತ್ತು ಶಿಕ್ಷಕರ ತರಬೇತಿ ಶೇ.1ರಷ್ಟು ವೆಚ್ಚವಾಗುತ್ತಿದೆ. ಅಂದರೆ ಗುಣಮಟ್ಟ ಶಿಕ್ಷಣ, ಶಿಕ್ಷಕರ ತರಬೇತಿ, ಮೂಲಭೂತ ಸೌಕರ್ಯಗಳಿಗೆ ಶೇ. 30ಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಹಣಕಾಸು ನೆರವು ದೊರಕಬೇಕಿತ್ತು. ಆದರೆ ಕೇವಲ ಶೇ.11ರಷ್ಟು ಮಾತ್ರ ಕೊಡುತ್ತಿದ್ದಾರೆ. ಇದು ಮಕ್ಕಳ ವ್ಯಾಸಂಗಕ್ರಮದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಉದಾಹರಣೆಗೆ 2018ರ ಸಮೀಕ್ಷೆಯ ಪ್ರಕಾರ ಎರಡನೇ ತರಗತಿಯಲ್ಲಿ ಪಠ್ಯವನ್ನು ಓದುವ ಸಾಮರ್ಥ್ಯದ ಪ್ರಮಾಣ ಸರಾಸರಿ 9.3ರಷ್ಟಿತ್ತು, 3ನೆ ತರಗತಿಯಲ್ಲಿ 20.9, 4ನೇ ತರಗತಿಯಲ್ಲಿ 34.2, 5ನೇ ತರಗತಿಯಲ್ಲಿ 44.2ರಷ್ಟಿದೆ. ಆದರೆ ಇದನ್ನು ಉತ್ತಮಗೊಳಿಸಲು ಶಿಕ್ಷಕರ ತರಬೇತಿಗೆ ಮತ್ತು ಕಲಿಕಾ ಉಪಕರಣಗಳಿಗೆ ಸರಕಾರವು ಹಣ ಕೊಡುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸರಕಾರಿ ಶಾಲೆಗಳು ಉಳಿಯುವ ಸಾದ್ಯತೆಗಳೇ ಇಲ್ಲ. ಶೇ.66ರಷ್ಟಿರುವ ಬಡ ಕುಟುಂಬದ ಮಕ್ಕಳು ಗಣಮಟ್ಟದ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

ಈ ಎಲ್ಲಾ ಹೆಳವಂಡಗಳು ಸಾರ್ವಜನಿಕ ಶಿಕ್ಷಣವನ್ನು ದುರ್ಬಲಗೊಳಿಸುತ್ತಿವೆ. ಜೊತೆಗೆ ಪ್ರತಿ ಬಜೆಟ್ ಮಂಡನೆಯ ಸಂದರ್ಭದಲ್ಲಿ ಹಣಕಾಸು ಸಚಿವರು ಶಿಕ್ಷಣದ ಡಿಜಟಲೀಕರಣದ ಕುರಿತು ಉತ್ಸಾಹದಿಂದ ಪ್ರಸ್ತಾಪಿಸುತ್ತಾರೆ. ಶಿಕ್ಷಣ ಸಚಿವರೂ ಸಹ ಭವಿಷ್ಯದಲ್ಲಿ ಶೇ.40 ಪ್ರಮಾಣದಲ್ಲಿ ಆನ್‌ಲೈನ್ ಕಲಿಕೆ ಅನಿವಾರ್ಯ ಎಂದು ಪದೇ ಪದೇ ಹೇಳುತ್ತಿರುತ್ತಾರೆ. ಆದರೆ ಶಿಕ್ಷಣಕ್ಕೆ ಅತಿ ಕಡಿಮೆ ಮೊತ್ತವನ್ನು ಮೀಸಲಿಡುತ್ತಾರೆ ಮತ್ತು ಡಿಜಿಟಲೀಕರಣಕ್ಕೆ ನಯಾಪೈಸೆಯೂ ಉಳಿಯುವುದಿಲ್ಲ. ಹಾಗಿದ್ದ ಪಕ್ಷದಲ್ಲಿ ಶೇ.40ರಷ್ಟು ಆನ್‌ಲೈನ್ ಹೇಗೆ ಸಾದ್ಯ ಎನ್ನುವ ಪ್ರಶ್ನೆಗೆ ಅದನ್ನು ಸಂಪೂರ್ಣವಾಗಿ ಖಾಸಗಿಯವರಿಗೆ ಹೊರಗುತ್ತಿಗೆ ಕೊಡಲಾಗುತ್ತದೆ ಎಂಬುದೇ ಉತ್ತರ. ಈಗಾಗಲೇ ಶಿಕ್ಷಕರ ತರಬೇತಿಯನ್ನು ಶೇ. 90ರಷ್ಟು ಖಾಸಗಿ ಸಂಸ್ಥೆಗಳಿಂದ ದೊರಕುತ್ತಿದೆ. ಒಮ್ಮೆ ಆನ್‌ಲೈನ್ ಶಿಕ್ಷಣದ ಜವಬ್ದಾರಿಯನ್ನು ಖಾಸಗಿಯವರಿಗೆ ಹಸ್ತಾಂತರ ಮಾಡಿದ ನಂತರ ಸರಕಾರಿ ಶಾಲೆಗಳ ಆಸ್ತಿತ್ವವೂ ಸಹ ಪರಿಗಣನೆಗೆ ಬರುವುದಿಲ್ಲ.

ಕೇಂದ್ರ ಸರಕಾರವು ಶಾಲಾ ಶಿಕ್ಷಣಕ್ಕೆ ಬಜೆಟ್‌ನಲ್ಲಿ ಪ್ರಸ್ತಾಪಿಸಿದ ಮೊತ್ತ ಮತ್ತು ನಂತರದ ವಾಸ್ತವದ ಹಂಚಿಕೆ

ವರ್ಷ	ಬಜೆಟ್ ಪ್ರಸ್ತಾಪ (ಕೋಟಿ ರೂ.)	ವಾಸ್ತವ ಹಂಚಿಕೆ (ಕೋಟಿ ರೂ.)	ಪ್ರಸ್ತಾಪದಲ್ಲಿ ಕಡಿತ / ಬಳಸಿಕೊಂಡಿಲ್ಲ (ಕೋಟಿ ರೂ.)
2010	33214	36433	
2011	41451	40641	810
2012	48781	45631	3150
2013	51701	46856	5845
2014	55115	45722	9393
2015	42220	41800	420
2016	43554	42989	565

ಪುಟ 10 ಕ್ಕೆ

ಶ್ರೀಲಂಕಾ ಬಿಕ್ಕಟ್ಟು: ಜನರ ಪ್ರತಿರೋಧ



ಆರ್ಥಿಕ ಕುಸಿತ ಆರಂಭವಾದಾಗಿನಿಂದ ಆಹಾರ, ಇಂಧನ ಮತ್ತು ಔಷಧಿಗಳ ಕೊರತೆ ಹಾಗೂ ಗಗನಕ್ಕೇರಿದ ಬೆಲೆಗಳಿಂದಾಗಿ ಜನರು ಪಡಬಾರದ ಕಷ್ಟ ಅನುಭವಿಸಿದರು. ಅಸಹನೀಯ ಪರಿಸ್ಥಿತಿಯಿಂದಾಗಿ ಸಹನೆಯ ಕಟ್ಟೆಯೊಡೆದು ಪ್ರತಿಭಟನೆ ನಡೆಸಲು ಜನರು ಬೀದಿಗಿಳಿದರು. ಮಾರ್ಚ್ 31 ರಿಂದ ಪ್ರತಿಭಟನೆಕಾರರು ಕೇಂದ್ರ ಕೊಲಂಬೊದ ಗಾಲೆ ಫೇಸ್ ಗ್ರೀನ್ ಮತ್ತು ಪ್ರಧಾನಿ ನಿವಾಸದ ಹೊರಗಡೆ ಬೀಡು ಬಿಟ್ಟು ಚಳವಳಿ ಆರಂಭಿಸಿದರು.

ಪ್ರಕಾಶ್ ಕಾರತ್

ದ್ವೀಪ ರಾಷ್ಟ್ರ ಶ್ರೀಲಂಕಾದಲ್ಲಿ ಮೇ 9 ರಂದು ನಡೆದ ಹಿಂಸಾತ್ಮಕ ಘಟನೆಗಳು ದೇಶದ ಆರ್ಥಿಕ ಬಿಕ್ಕಟ್ಟಿನಿಂದ ಉದ್ಭವಿಸಿರುವ ಪರಿಸ್ಥಿತಿ ಬಿಗಡಾಯಿಸಿರುವುದನ್ನು ಸೂಚಿಸುತ್ತದೆ. ಆರ್ಥಿಕ ಬಿಕ್ಕಟ್ಟು ಈಗ ರಾಜಕೀಯ ಕ್ಷೇತ್ರ ಹಾಗೂ ಇಡೀ ಸಮಾಜವನ್ನೂ ಆವರಿಸಿದೆ.

ಈ ಸುಂಟರಗಾಳಿಯ ಕೇಂದ್ರದಲ್ಲಿರುವುದು ರಾಜಪಕ್ಸ ಕುಟುಂಬದ ಆಡಳಿತ. ಅಲುಗಾಡುತ್ತಿರುವ ಅಧಿಕಾರವನ್ನು ಉಳಿಸಿಕೊಳ್ಳುವ ಉದ್ದೇಶದಿಂದ, ಅಪಾರ ಅಧಿಕಾರ ಬಲ ಹೊಂದಿರುವ ಅಧ್ಯಕ್ಷ ಗೋತಬಯ ರಾಜಪಕ್ಸ, ತನ್ನ ಅಣ್ಣ ಮಹಿಂದ ರಾಜಪಕ್ಸ ಪ್ರಧಾನಿ ಹುದ್ದೆಗೆ ರಾಜಿನಾಮೆ ನೀಡುವಂತೆ ಒತ್ತಡ ಹೇರಿದ್ದರು. ಅದಕ್ಕೂ ಮುನ್ನ ಇಡೀ ಸಚಿವ ಸಂಪುಟ ರಾಜಿನಾಮೆ ನೀಡಿದ್ದು ಮಹಿಂದ ನೇತೃತ್ವದಲ್ಲಿ ಹೊಸ ಸಂಪುಟವನ್ನು ನೇಮಿಸಲಾಗಿತ್ತು.

ಆರ್ಥಿಕ ಬಿಕ್ಕಟ್ಟಿಗೆ ಕೊಡುಗೆ ಕೊಟ್ಟ ವಿನಾಶಕಾರಿ ನಿರ್ಧಾರಗಳಿಗೆ ರಾಜಪಕ್ಸ ಆಡಳಿತ ಹೊಣೆಯಾಗಿದೆ. ತೆರಿಗೆ ಕಡಿತ, ಕೃಷಿಯಲ್ಲಿ ಬಳಸುವ ರಸಗೊಬ್ಬರಗಳ ಆಮದು ಸ್ಥಗಿತ, ಹಾಗೂ ಕೆಲವು ಐಷಾರಾಮಿ ಯೋಜನೆಗಳಲ್ಲಿ ಬೃಹತ್ ಪ್ರಮಾಣದ ಹೂಡಿಕೆ ಮುಂತಾದ ನಿರ್ಧಾರಗಳನ್ನು ಸರ್ವಾಧಿಕಾರದ ದರ್ಪದಿಂದ ಕೈಗೊಳ್ಳಲಾಗಿತ್ತು. ಇದರಿಂದಾಗಿ ಆದಾಯ ಕುಸಿದು ಕೃಷಿ ಉತ್ಪಾದನೆ ಅಸ್ತವ್ಯಸ್ತಗೊಂಡಿತು. ಹೆಚ್ಚುತ್ತಿರುವ ಸಾಲದ ಹೊರೆ ಮೇಲೆ ಇನ್ನಷ್ಟು ಸಂಕಟ ಸೇರಿಕೊಂಡಿತು.

ಕೋವಿಡ್ ಸಾಂಕ್ರಾಮಿಕತೆಯು ದೇಶದ ಮೇಲೆ ತೂಗುತ್ತಿದ್ದ ಬಿಕ್ಕಟ್ಟನ್ನು ಬಿಗಡಾಯಿಸಿತು. ಪ್ರವಾಸೋದ್ಯಮ ನಿಂತಿದ್ದರಿಂದ ವಿದೇಶಿ ವಿನಿಮಯ ಆದಾಯ ಖೋತಾಗೊಂಡಿತು. ವಿದೇಶಗಳಲ್ಲಿರುವ ಶ್ರೀಲಂಕಾದ ಕಾರ್ಮಿಕರು ದೇಶಕ್ಕೆ ಹಣ ಕಳಿಸುವುದು ನಿಂತಿತ್ತು. ಇವೆಲ್ಲವೂ ಸಮಸ್ಯೆ ಬಿಗಡಾಯಿಸಲು ಕಾರಣವಾಯಿತು.

ಆರ್ಥಿಕ ಕುಸಿತ ಆರಂಭವಾದಾಗಿನಿಂದ ಆಹಾರ, ಇಂಧನ ಮತ್ತು ಔಷಧಿಗಳ ಕೊರತೆ ಹಾಗೂ ಗಗನಕ್ಕೇರಿದ ಬೆಲೆಗಳಿಂದಾಗಿ ಜನರು ಪಡಬಾರದ ಕಷ್ಟ ಅನುಭವಿಸಿದರು. ಅಸಹನೀಯ ಪರಿಸ್ಥಿತಿಯಿಂದಾಗಿ ಸಹನೆಯ ಕಟ್ಟೆಯೊಡೆದು ಪ್ರತಿಭಟನೆ ನಡೆಸಲು ಜನರು ಬೀದಿಗಿಳಿದರು. ಮಾರ್ಚ್ 31 ರಿಂದ ಪ್ರತಿಭಟನೆಕಾರರು ಕೇಂದ್ರ ಕೊಲಂಬೊದ ಗಾಲೆ ಫೇಸ್ ಗ್ರೀನ್ ಮತ್ತು ಪ್ರಧಾನಿ ನಿವಾಸದ ಹೊರಗಡೆ ಬೀಡು ಬಿಟ್ಟು ಚಳವಳಿ ಆರಂಭಿಸಿದರು. ಈ ಶಾಂತಿಯುತ ಪ್ರತಿಭಟನೆಗಳಲ್ಲಿ ಸಾವಿರಾರು ಜನರು ಭಾಗವಹಿಸಿದರು. ಶಿಕ್ಷಕರು, ವಿದ್ಯಾರ್ಥಿಗಳು, ನೌಕರರು ಮತ್ತು ಟ್ರೇಡ್ ಯೂನಿಯನ್ ಸದಸ್ಯರು ಪಾಲ್ಗೊಂಡರು.

ದುಡಿಯುವ ವರ್ಗದ ಪಾತ್ರ

ಲಂಕಾದಲ್ಲಿ ಈಗ ನಡೆಯುತಿರುವ ಜನಾಂದೋಲನದಲ್ಲಿ ದುಡಿಯುವ ವರ್ಗ ಪ್ರಮುಖ ಪಾತ್ರ ವಹಿಸುತ್ತಿದೆ. ಏಪ್ರಿಲ್ 28 ರಂದು ಸಾರ್ವತ್ರಿಕ ಮುಷ್ಕರ ನಡೆಸಲು ಟ್ರೇಡ್ ಯೂನಿಯನ್‌ಗಳ ಸಮನ್ವಯ ಸಮಿತಿ ನೀಡಿದ್ದ ಕರೆಗೆ ಅಭೂತಪೂರ್ವ ಸ್ಪಂದನೆ ಸಿಕ್ಕಿದ್ದು ಲಕ್ಷಾಂತರ ಜನರು ಪಾಲ್ಗೊಂಡರು. ಮೇ 5 ರಂದು ಇನ್ನೊಂದು ಸಾರ್ವತ್ರಿಕ ಹರತಾಳಕ್ಕೆ ಕೊಡಲಾಗಿದ್ದು ಅದರಲ್ಲಿ ವೈದ್ಯರು, ನರ್ಸ್‌ಗಳು ಮತ್ತಿತರ ವೃತ್ತಿಪರರು ಕೂಡ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದು ಗಮನಾರ್ಹವಾಗಿತ್ತು. ಅಧ್ಯಕ್ಷರು ಮತ್ತು ಸರ್ಕಾರದ ರಾಜಿನಾಮೆಗೆ ಆಗ್ರಹಿಸಿ ಈ ಮುಷ್ಕರಗಳಿಗೆ ಕರೆ ಕೊಡಲಾಗಿತ್ತು.

ಈ ತೀಕ್ಷ್ಣ ಮುಷ್ಕರಗಳಿಂದ ಕಂಗಾಲಾದ ಅಧ್ಯಕ್ಷ ಗೋತಬಯ, ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದರು. ಇದು ಕೇವಲ ಒಂದು ತಿಂಗಳಿಗಿಂತ ಸ್ವಲ್ಪ ಹೆಚ್ಚು ಅವಧಿಯಲ್ಲಿ ಎರಡನೇ ಬಾರಿ ಹೇರಲಾದ ತುರ್ತು ಪರಿಸ್ಥಿತಿ. ಸರ್ಕಾರ ಹೇರಿದ್ದ ಕರ್ಫ್ಯೂವನ್ನು ಜನರು ಉಲ್ಲಂಘಿಸಿದರು.

ಅಂತಿಮ ಘಟ್ಟ

ನಿಜವಾಗಿಯೂ ಲಂಕಾ ಸರ್ಕಾರದ ಅಂತ್ಯ ಕಾಲ ಸನ್ನಿಹಿತವಾಗಿದೆ. ಮೇ 9 ರಂದು ಭುಗಿಲೆದ್ದ ಹಿಂಸಾಚಾರ ಶಾಂತಿಯುತ ಚಳವಳಿಯನ್ನು ಹಾಳುಮಾಡುವ ರಾಜಪಕ್ಸರ ಕೊನೆಯ ಪ್ರಯತ್ನವಾಗಿತ್ತು. ಸುಮ್ಮನೆ ಬಾಯಿ ಮುಚ್ಚಿಕೊಂಡು ರಾಜಿನಾಮೆ ನೀಡುವ ಬದಲು ಪ್ರಧಾನಿ ಮಹಿಂದ ರಾಜಪಕ್ಸ ತಮ್ಮ ಎಸ್‌ಎಲ್‌ಪಿಪಿ ಪಕ್ಷದ ಬೆಂಬಲಿಗರನ್ನು ಅಧಿಕೃತ ನಿವಾಸಕ್ಕೆ ಕರೆಸಿಕೊಂಡರು. ಅಲ್ಲಿ ಅವರು ಪ್ರಚೋದನಕಾರಿ ಭಾಷಣ ಮಾಡಿದ ನಂತರ ಬೆಂಬಲಿಗರು ಪ್ರಧಾನಿ ನಿವಾಸದ ಹೊರಗಡೆ ಒಂದು ತಿಂಗಳಿಂದ ಶಾಂತಿಯುತವಾಗಿ ಧರಣಿ ನಡೆಸುತ್ತಿದ್ದ ಜನರ ಮೇಲೆ ದಾಳಿ ಮಾಡಿ ಡೇರೆಗಳನ್ನು ನಾಶ ಮಾಡಿದರು. ಗಾಲೆ ಫೇಸ್‌ನಲ್ಲಿ ಕೂಡ ರಾಜಪಕ್ಸ ನಿಷ್ಠರು ಆಕ್ರಮಣ ಮಾಡಿದ್ದು ನೂರಾರು ಜನರು ಗಾಯಗೊಂಡಿದ್ದಾರೆ. ಪುಂಡಾಟ ತಡೆಯಲು ಪೊಲೀಸರು ಯಾವುದೇ ಕ್ರಮ ಕೈಗೊಂಡಿರಲಿಲ್ಲ.

ಹೊರಗಡೆಯಿಂದ ಬಂದ ಆಳುವ ಪಕ್ಷದ ಬೆಂಬಲಿಗರು ನಡೆಸಿದ ನಗ್ನ ಹಿಂಸಾಚಾರವೇ ಪ್ರತಿ ದಾಳಿಗೆ ಕಾರಣವಾಯಿತು. ಪ್ರಧಾನಿ ನಿವಾಸ ಟೆಂಪಲ್ ಟ್ರೀ ಬಳಿ ಜಮಾಯಿಸಿದ ಸಾವಿರಾರು ಜನರು ಮನೆಯೊಳಗೆ ನುಗ್ಗಲೂ ಯತ್ನಿಸಿದರು. ಅಂತಿಮವಾಗಿ, ಅದಾಗಲೇ ಪ್ರಧಾನಿ ಸ್ಥಾನಕ್ಕೆ ರಾಜಿನಾಮೆ ನೀಡಿದ್ದ ಮಹಿಂದ ಮತ್ತು ಕುಟುಂಬದವರನ್ನು ಮಿಲಿಟರಿಯವರು ಪಾರು ಮಾಡಿ ಹೆಲಿಕಾಪ್ಟರ್‌ನಲ್ಲಿ ನೌಕಾ ನೆಲೆಯೊಂದಕ್ಕೆ ಕರೆದೊಯ್ಯಬೇಕಾಯಿತು. ರಾಜಪಕ್ಸ ಕುಟುಂಬ ಸದಸ್ಯರು, ಮಾಜಿ ಮಂತ್ರಿಗಳು ಮತ್ತು ಆಳುವ ಪಕ್ಷದ ಸಂಸದರ ಮನೆಗಳ ಮೇಲೆ ಉದ್ರಿಕ್ತ ಪ್ರತಿಭಟನೆಕಾರರು ದಾಳಿ ನಡೆಸಿದ್ದಲ್ಲದೆ ಕೆಲವಕ್ಕೆ ಬೆಂಕಿಯನ್ನೂ ಹಚ್ಚಿದರು.

ಪ್ರತಿಪಕ್ಷ ನಕಾರ

ಈ ನಡುವೆ, ಪ್ರಮುಖ ಪ್ರತಿಪಕ್ಷವಾದ ಎಸ್‌ಜೆಬಿ ಮೈತ್ರಿಕೂಟ ಅಧ್ಯಕ್ಷ ಗೋತಬಯ ನೇತೃತ್ವದ ಯಾವುದೇ ಮಧ್ಯಂತರ ಸರ್ಕಾರ ಸೇರಲು ನಿರಾಕರಿಸಿದೆ. ಗೋತಬಯ ಕೂಡ ಪದತ್ಯಾಗ ಮಾಡಬೇಕೆನ್ನುವುದು ಅದರ ಬೇಡಿಕೆಯಾಗಿದೆ. ಎಡಪಕ್ಷವಾದ ಜನತಾ ವಿಮುಕ್ತಿ ಪೆರುಮನ (ಜೆವಿಪಿ) ಕೂಡ ಹೊಸ ಚುನಾವಣೆಗಳು ನಡೆಯುವವರೆಗೆ ಹಂಗಾಮಿ ಅಧ್ಯಕ್ಷ ಹಾಗೂ ಮಧ್ಯಂತರ ಸರ್ಕಾರ ರಚನೆಯಾಗಬೇಕೆಂದು ಆಗ್ರಹಿಸಿದೆ.

ಅಧ್ಯಕ್ಷ ಗೋಂತಬಯರಲ್ಲೇ ಹೆಚ್ಚಿನ ಕಾರ್ಯ ನಿರ್ವಾಹಕ ಅಧಿಕಾರಗಳು ಕೇಂದ್ರೀಕೃತ ವಾಗಿರುವುದರಿಂದ ಅವರು ಸ್ಥಾನದಿಂದ ಕೆಳಗಿಳಿಯಬೇಕೆಂಬ ಬೇಡಿಕೆ ಸಮರ್ಥನೀಯವಾಗಿದೆ. ದೇಶದ ಆರ್ಥಿಕ ಅವ್ಯವಸ್ಥೆಗೆ ಅವರೇ ಹೊಣೆ ಹಾಗೂ ಸರ್ವಾಧಿಕಾರಿ ರಾಷ್ಟ್ರೀಯ ಭದ್ರತಾ ವ್ಯವಸ್ಥೆಗೆ ಕೂಡ ಅವರೇ ಜವಾಬ್ದಾರರು. ಆರ್ಥಿಕ ಮತ್ತು ರಾಜಕೀಯ ಬಿಕ್ಕಟ್ಟು ಒಂದಕ್ಕೊಂದು ತಳಕು ಹಾಕಿ ಕೊಂಡಿದೆ.

ರಾಜಪಕ್ಸ ಕುಟುಂಬವನ್ನು ಅಧಿಕಾರದಿಂದ ತೊಲಗಿಸುವುದರ ಜೊತೆಯಲ್ಲೇ ದೇಶದ ರಾಜಕೀಯ ಮತ್ತು ಆರ್ಥಿಕ ಸಂರಚನೆಯನ್ನು ಜನತಾಂತ್ರಿಕವಾಗಿ ಪರಿವರ್ತಿಸುವುದು ಅಗತ್ಯ. ಕಾರ್ಯನಿರ್ವಾಹಕ ಅಧ್ಯಕ್ಷ ಸ್ಥಾನ ಮತ್ತು ಕೇಂದ್ರೀಕೃತ ರಾಷ್ಟ್ರೀಯ ಭದ್ರತಾ ವ್ಯವಸ್ಥೆಯನ್ನು ತೆಗೆದು ಹಾಕಬೇಕು. ದೇಶದ ಆರ್ಥಿಕ ನೀತಿಗಳಿಗೆ ಆಧಾರವಾಗಿರುವ ನವ–ಉದಾರವಾದಿ ಚೌಕಟ್ಟನ್ನು ತೆಗೆದು ಹಾಕಿ ಅಭಿವೃದ್ಧಿಯ ಜನಪರ ಹಾದಿಯನ್ನು ತುಳಿಯಬೇಕು. ರಾಜಪಕ್ಸ ಕುಟುಂಬ ಕುರಿತು ಜನರಲ್ಲಿ ಉಂಟಾಗಿರುವ ಭ್ರಮನಿರಸನವು ಸಿಂಹಳ ಬೌದ್ಧ ರಾಷ್ಟ್ರೀಯವಾದ ಕ್ಷೀಣಗೊಳ್ಳಲು ಕಾರಣವಾಗಬಹುದೆಂದು ಆಶಿಸೋಣ. ಭಾಷೆ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಕುರಿತು ಪ್ರಜಾಸತ್ತಾತ್ಮಕ ಧೋರಣೆ ಅನುಸರಿಸುವುದರೊಂದಿಗೆ ಜನರ ಏಕತೆಗೆ ಅಡಿಗಲ್ಲಿಡಲು ಅದು ನೆರವಾಗಬಹುದೆಂದು ಭಾವಿಸೋಣ.

ಐಎಂಎಫ್ ಸಾಲದಿಂದ ಸಂಕಷ್ಟವೇ ಸರಿ...

ಶ್ರೀಲಂಕಾ ಸರ್ಕಾರ ಸಾಲ ಪಡೆಯಲು ಅಂತಾರಾಷ್ಟ್ರೀಯ ಹಣಕಾಸು ನಿಧಿಯೊಂದಿಗೆ (ಐಎಂಎಫ್) ಮಾತುಕತೆ ನಡೆಸುತ್ತಿದೆ. ಅದರಿಂದಾಗಿ ಕಲ್ಯಾಣ ಕಾರ್ಯಕ್ರಮಗಳ ವೆಚ್ಚ ಕಡಿತಗೊಳ್ಳಲಿದೆ, ಮಿತವ್ಯಯ ಕ್ರಮಗಳು ಬರಲಿದ್ದು ಅದು ಇನ್ನಷ್ಟು ಖಾಸಗೀಕರಣಕ್ಕೆ ದಾರಿಯಾಗಲಿದೆ.

ಶ್ರೀಲಂಕಾದ ಮುಖ್ಯವಾಹಿನಿಯ ರಾಜಕೀಯ ಪಕ್ಷಗಳಿಗೆ ಐಎಂಎಫ್ ನಿರ್ದೇಶನಗಳನ್ನು ಪಾಲಿಸುವುದಲ್ಲದೆ ಅನ್ಯ ಮಾರ್ಗ ಕಾಣಿಸುತ್ತಿಲ್ಲ. ಆದರೆ ಅದು ಆಳವಾದ ಸಂರಚನಾತ್ಮಕ ಬಿಕ್ಕಟ್ಟಿಗೆ ಪರಿಹಾರವಲ್ಲ. ಜನರ ಹಿತಗಳನ್ನು ಕಾಪಾಡುವ ಮತ್ತು ಶ್ರೀಲಂಕಾವನ್ನು ಹಣಕಾಸು ಬಂಡವಾಳದ ಆಕ್ರಮಣದಿಂದ ರಕ್ಷಿಸಬಲ್ಲ ಪರ್ಯಾಯ ಮಾರ್ಗ ಅನುಸರಿಸುವುದು ಅತ್ಯಗತ್ಯ. ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳ ಪುನರ್‌ರಚನೆಗೆ ಮುಂದಾಗಲು ಒಂದು ಅಪರೂಪದ ಅವಕಾಶ ತಮ್ಮ ಮುಂದೆ ಇರುವುದನ್ನು ಶ್ರೀಲಂಕಾದ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಅರ್ಥ ಮಾಡಿಕೊಳ್ಳಬೇಕು ಹಾಗೂ ಅಂಥದ್ದೊಂದು ಬದಲಾವಣೆಗಾಗಿ ಹೋರಾಡಲು ಜನರನ್ನು ಅಣಿಗೊಳಿಸಬೇಕು.


ಅನು: ವಿಶ್ವ





'ರಾಜದ್ರೋಹ'ದ ಐಪಿಸಿ ಕಲಮು 124(ಎ) ಕೊನೆಗಾಣಿಸಬೇಕು

ಸ್ವಾತಂತ್ರ್ಯ ಬಂದ ನಂತರ ನಮ್ಮ ಸರ್ಕಾರಗಳು ಇಂತಹ ಅಮಾನವೀಯ ಬರ್ಬರ ಮತ್ತು ದಮನಕಾರಿ ಕಾನೂನನ್ನು ಮುಂದುವರೆಸಿಕೊಂಡು ಬಂದಿದ್ದು ದುರದೃಷ್ಟಕರ. ಸರ್ಕಾರದ ವಿರುದ್ಧ ಧ್ವನಿ ಎತ್ತುತ್ತಿರುವ ಸಾಹಿತಿಗಳ, ಕಲಾವಿದರ, ಜನಪರ ನಾಯಕರ ವಿರುದ್ಧ ಇದನ್ನು ಬಳಸಲಾಗುತ್ತಿದೆ. ಸ್ವಾತಂತ್ರ್ಯದ ನಂತರ ಈ ಕಲಂನ ದುರ್ಬಳಕೆಯೇ ಹೆಚ್ಚಿದೆ. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ದೇಶದಲ್ಲಿ ಇಂತಹ ದಮನಕಾರಿ ಕಲಂನ ಅಗತ್ಯ ಇದೆಯೇ? ಇಂತಹ ಕಾನೂನನ್ನು ಕೊನೆಗಾಣಿಸಿ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಬೇಕಾಗಿದೆ. ವಿಶ್ರಾಂತ ನ್ಯಾಯಮೂರ್ತಿ ಗಳ ವಿಶ್ಲೇಷಣೆ ಹಿಂದಿನ ಲೇಖನ, ಇಂದಿಗೆ ಪ್ರಸ್ತುತ.



ನ್ಯಾ. ಹೆಚ್.ಎನ್. ನಾಗಮೋಹನ ದಾಸ್
ನಿವೃತ್ತ ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ

ದೀರ್ಘಕಾಲದ ಹೋರಾಟಗಳ ಮೂಲಕ ಜಗತ್ತಿನ ಜನರು ವಾಕ್ ಮತ್ತು ಅಭಿವ್ಯಕ್ತಿ ಸ್ವತಂತ್ರ್ಯವನ್ನು ಪಡೆದಿದ್ದಾರೆ. ಭಾರತದ ಸ್ವಾತಂತ್ರ್ಯ ಹೋರಾಟ ಅಭಿವ್ಯಕ್ತಿ ಸ್ವಾತಂತ್ರ್ಯ ಹೋರಾಟ ಇವೆರೆಡು ಜೊತೆಜೊತೆಯಲ್ಲಿ ನಡೆದು ಬಂದಿದ್ದು ಗಮನಾರ್ಹ. ದೇಶದ ಜನರಿಗೆ ಮೂಲಭೂತ ಹಕ್ಕುಗಳನ್ನು ಒದಗಿಸುವುದು ಸ್ವಾತಂತ್ರ್ಯದ ಹೋರಾಟದ ಗುರಿಗಳಲ್ಲಿ ಒಂದಾಗಿತ್ತು. ನಮ್ಮ ಸ್ವಾತಂತ್ರ್ಯ ಚಳುವಳಿಯ ಗುರಿಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ನಮಗೆ ಒಂದು ಸಂವಿಧಾನ ಅನಿವಾರ್ಯವಾಯಿತು. ಸಂವಿಧಾನ ರಚನಕಾರರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರಜಾತಾಂತ್ರಿಕ ವ್ಯವಸ್ಥೆಯ ತಳಹದಿ ಎಂಬ ಸ್ಪಷ್ಟಕಲ್ಪನೆ ಇತ್ತು. ಈ ಅಂಶವನ್ನು ನಮ್ಮ ಸಂವಿಧಾನದ ಅನುಚ್ಛೇದ–19(1) (ಎ)ರ ಅಡಿಯಲ್ಲಿ ಅಳವಡಿಸಲಾಗಿದೆ. ಈ ಹಕ್ಕು ತನ್ನಷ್ಟಕ್ಕೆ ಪೂರ್ಣವಾದದ್ದಲ್ಲ. ದೇಶದ ಸಾರ್ವಭೌಮತ್ವ ಮತ್ತು ಸಮಗ್ರತೆಯನ್ನು ಕಾಪಾಡಲು ಈ ಹಕ್ಕಿನ ಮೇಲೆ ಕೆಲವು ನಿರ್ಬಂಧಗಳನ್ನು ವಿಧಿಸುವ ಅಧಿಕಾರವನ್ನು ಸರ್ಕಾರ ಹೊಂದಿದೆ.

ದೇಶದ ಭದ್ರತೆ, ವಿದೇಶಗಳ ಜೊತೆಗಿನ ಬಾಂಧವ್ಯ, ಸುವ್ಯವಸ್ಥೆ ಮತ್ತು ನೈತಿಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ನಿರ್ಬಂಧಗಳನ್ನು ವಿಧಿಸಬಹುದು. ಅನುಚ್ಛೇಧ–19 ರಲ್ಲಿ ನೀಡಿರುವ ಮೂಲಭೂತ ಹಕ್ಕಾದ ವಾಕ್ ಸ್ವಾತಂತ್ರ್ಯವು ಭಿನ್ನಾಭಿಪ್ರಾಯವನ್ನು ಹೊಂದಿರುವ ಸ್ವಾತಂತ್ರ್ಯವನ್ನು ಒಳಗೊಂಡಿದೆ. ಮೂಲಭೂತ ಹಕ್ಕುಗಳನ್ನು ಹತ್ತಿಕ್ಕುವ ಅಧಿಕಾರವನ್ನು ನಮ್ಮ ಸಂವಿಧಾನವು ಮಾನ್ಯ ಮಾಡುವುದಿಲ್ಲ, ಭಿನ್ನಾಭಿಪ್ರಾಯಗಳ ಬಗೆಗಿನ ಅಸಹನೆ ಪ್ರಜಾತಾಂತ್ರಿಕ ವ್ಯವಸ್ಥೆಗೆ ಅಪಾಯಕಾರಿ. ಈ ಹಕ್ಕಿಗೆ ಹಿಂದಿನ ಕಾಲದ ಕಟ್ಟಳೆಗಳಾಗಲಿ, ವರ್ತಮಾನದ ಕೋಳಗಳಾಗಲಿ ಇರಬಾರದು. ಫ್ರೆಂಚ್ ಚಿಂತಕ ವೋಲ್ಟೈರ್ ಹೇಳುವಂತೆ "ನೀನು ಹೇಳುವ ಒಂದು ಮಾತನ್ನೂ ನಾನು ಒಪ್ಪುವುದಿಲ್ಲ. ಆದರೆ ಅಭಿಪ್ರಾಯವನ್ನು ವ್ಯಕ್ತಪಡಿಸುವ ನಿನ್ನ ಹಕ್ಕನ್ನು ನನ್ನ ಸಾವಿನವರೆಗೂ ನಾನು ಬೆಂಬಲಿಸುತ್ತೇನೆ" ಎಂಬ ಮಾತು ಗಮನಾರ್ಹ.

ಸಮಾಜದ ಸರ್ವತೋಮುಖ ಅಭಿವೃದ್ದಿಗೆ ವ್ಯಕ್ತಿ ಸ್ವಾತಂತ್ರ್ಯವು ಮೊದಲನೆಯ ಹೆಜ್ಜೆ. ಹಾಗಾಗಿ ಯಾವ ಸಂಪ್ರದಾಯಗಳನ್ನು ವಿರೋಧಿಸಿದರೂ ಸರಿಯೇ, ವ್ಯಕ್ತಿಯು ಸತ್ಯಕ್ಕಾಗಿ ನಡೆಸುವ ಹುಡುಕಾಟದ ಸ್ವಾತಂತ್ರ್ಯ ಮೊಟಕುಗೊಳ್ಳಬಾರದು. ಎಲ್ಲಾ ಪ್ರಮುಖ ವಿಷಯಗಳ ಬಗ್ಗೆಯೂ ಮುಕ್ತ ಚರ್ಚೆ ನಡೆಯಬೇಕು. ಪ್ರಗತಿ ಸಾಧ್ಯವಾಗುವುದು ಪರಂಪರೆಯನ್ನು ಒಪ್ಪಿಕೊಳ್ಳುವುದರ ಮೂಲಕವಲ್ಲ: ಬದಲಾಗಿ ಜನರ ಅಭಿಪ್ರಾಯಗಳು ಬದಲಾಗುವಷ್ಟರ ಮಟ್ಟಿಗೆ ಹೊಸ ವಿಷಯಗಳನ್ನು, ವೈಜ್ಞಾನಿಕ ಚಿಂತನೆಯ ಆಧಾ ರದ ಮೇಲೆ ಮಂಡಿಸುವ ಮೂಲಕ. ವ್ಯಕ್ತಿಯ ಚಿಂತನಾಕ್ರಮ ವೃದ್ಧಿಗೊಳ್ಳಲು, ವೈಚಾರಿಕತೆ ಅರಳಲೂ, ಬೌದ್ಧಿಕ ಜಗತ್ತು ವಿಸ್ತಾರಗೊಳ್ಳಲು ಮತ್ತು ವ್ಯಕ್ತಿತ್ವ ಪರಿಪಕ್ವಗೊಳ್ಳಲು ಎಲ್ಲ ರೀತಿಯ ಅಭಿಪ್ರಾಯಗಳೂ ತಿಳಿದಿರಬೇಕು.

ಜ್ಞಾನ ಅಥವಾ ವಿವೇಕ ಆಕಾಶದಿಂದ ಉದುರುವುದಿಲ್ಲ. ಅವು ಸಿದ್ದ ವಸ್ತುಗಳೂ ಅಲ್ಲ, ಇಂದಿನ ಅಗತ್ಯಕ್ಕೆ ತಕ್ಕಂತೆ ನಮ್ಮ ಅನುಭವದ ಜ್ಞಾನವನ್ನು ಹರಿತಗೊಳಿಸಿದಾಗ ಸಮಕಾಲೀನ ಸತ್ಯವು ಗೋಚರಿಸುತ್ತದೆ. ಮಾನವನ ಅನುಭವದ ಜ್ಞಾನವನ್ನು ವಿಮರ್ಶೆಗೆ ಒಳಪಡಿಸಿದಾಗ ಪ್ರಗತಿ ಪರಚಿಂತನೆ ಎಂದು ಕರೆಯಲಾಗುವ ವೈಚಾರಿಕತೆಯು ಉಗಮವಾಗುವುದು. ಮಾನವನ ನಾಗರಿಕತೆ ಬೇಟೆಯಾಡುವ ಕಾಲದಿಂದ ಇಂದಿನ ಅತ್ಯಂತ ಅಧುನಿಕ, ವೈಜ್ಞಾನಿಕ ಯುಗವನ್ನು ಮುಟ್ಟರುವುದು ಈ ಪ್ರಕ್ರಿಯೆಯ ಮೂಲಕವೇ. ಆದರೆ ವಿಮರ್ಶೆಯ ಬಗ್ಗೆ ನಾವು ಅತ್ಯಂತ ಜಾಗರೂಕರಾಗಿರಬೇಕಾಗಿರುತ್ತದೆ. ಅದು ಅನಾರೋಗ್ಯಕರ ಮತ್ತು ವಿನಾಶಕಾರಿಯಾಗಿರಬಾರದು. ವ್ಯಕ್ತಿಗಳನ್ನು ಅಥವಾ ಸಮುದಾಯಗಳನ್ನು ಅವಮಾನಿಸುವ, ಒಡೆಯುವ ಉದ್ದೇಶದ್ದಾಗಿರಬಾರದು. ಇಂದಿಗಿಂತಲೂ ಉತ್ತಮ ಸ್ಥಿತಿಗೆ ನಮ್ಮನ್ನು ಕೊಂಡಯ್ಯುವ, ಈಗಿನ ತಪ್ಪುಗಳನ್ನು ಸರಿಪಡಿಸುವ ವಿಮರ್ಶೆಯಾಗಿರಬೇಕು. ಇಂಥ ಆರೋಗ್ಯಕರ ವಿಮರ್ಶೆಯನ್ನು ತಾಳ್ಮೆಯಿಂದ, ಸ್ವಾಗತಿಸಬೇಕಾದದ್ದು ಸಮಾಜದ ಕರ್ತವ್ಯ.


ಭಾರತದಲ್ಲಿ ಸತ್ಯಶೋಧನೆ ಮತ್ತು ಅಂಧಶ್ರದ್ಧೆಗೆ ಸವಾಲುಗಳನ್ನು ಒಡ್ಡಿದ ಮಹಾನ್ ಇತಿಹಾಸವೇ ಇದೆ. ಚಾರ್ವಾಕ್, ಗೌತಮಬುದ್ಧ, ಬಸವೇಶ್ವರ, ಅಂಬೇಡ್ಕರ್, ಪಂಡಿತ್ ನೆಹರು, ಕುವೆಂಪು, ಇನ್ನೂ ಅನೇಕ ಮಹನೀಯರು ತಮ್ಮ ಜೀವನ ಕಾಲದ ಪರಂಪರಾನುಗತ ಚಿಂತನೆಯಿಂದ ದೂರ ಸರಿದವರೇ. ಬ್ರಿಟಿಷರು ಭಾರತದಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸುತ್ತ ಹೋದ ಹಾಗೆ ಅವರ ವಿರುದ್ಧವಾದ ಹೋರಾಟಗಳೂ ನಡೆಯುತ್ತಾ ಹೋದವು. 1857ರ ಮೊದಲ ಸ್ವಾತಂತ್ರ್ಯ ಯುದ್ಧದ ನಂತರ ಈಸ್ಟ್ ಇಂಡಿಯಾ ಕಂಪನಿಯ ಆಡಳಿತವು ಕೊನೆಗೊಂಡು ಭಾರತದೇಶವು ಇಂಗ್ಲೆಂಡಿನ ಮಹಾರಾಣಿಯರ ನೇರ ಆಡಳಿತಕ್ಕೆ ಒಳಪಟ್ಟಿತು. 1858ರಲ್ಲಿ ಬ್ರಿಟಿಷ್ ಮಾದರಿಯ ನ್ಯಾಯಾಲಯಗಳ ಸ್ಥಾಪನಾ ಕಾರ್ಯವು ಪ್ರಾರಂಭವಾಯಿತು. ಈ ನ್ಯಾಯಾಲಯಗಳ ಮುಖಾಂತರ ಸಿವಿಲ್ ಮತ್ತು ಕ್ರಿಮಿನಲ್ ವಿಧಾನಾತ್ಮಕ ಕಾನೂನುಗಳು ಜಾರಿಗೆ ತರಲಾಯಿತು.

ಬ್ರಿಟಿಷರ ವಿರುದ್ಧ ಜನಾಭಿಪ್ರಾಯವನ್ನು ರೂಪಿಸುತ್ತಿದ್ದ ಪತ್ರಿಕೆಗಳ ಮೇಲೆ ದಾಳಿ ಪ್ರಾರಂಭವಾಯಿತು. ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಬ್ರಿಟಿಷರು ಸುಮಾರು 15 ರೀತಿಯ ವಿವಿಧ ಕಾನೂನುಗಳನ್ನು ಜಾರಿಗೊಳಿಸಿದರು. ಸ್ವಾತಂತ್ರ್ಯ ಹೋರಾಟಗಾರರ ಬಾಯಿ ಮುಚ್ಚಿಸಲು ಕ್ರಿಮಿನಲ್ ವಿಧಾನಾತ್ಮಕ ಕಾಯ್ದೆಗೆ (ಐಪಿಸಿ–ಇಂಡಿಯನ್ ಪೆನಲ್‌ಕೋಡ್) ತಿದ್ದುಪಡಿತಂದು ಕಲಂ 124(ಎ) ಸೇರಿಸಿದರು. ಇದನ್ನು Sedition(ರಾಜದ್ರೋಹ ಅಥವಾ ದೇಶದ್ರೋಹ)ದ ಕಲಂ ಎನ್ನಲಾಗಿದೆ. ಐಪಿಸಿ ಕಲಂ 124(ಎ) ಪ್ರಕಾರ ಒಬ್ಬ ವ್ಯಕ್ತಿಯ ಭಾಷಣ ಅಥವಾ ಬರಹ ಅಥವಾ ಇತರ ವಿಧಾನಗಳ ಮೂಲಕ ಸರಕಾರದ ವಿರುದ್ಧ ದ್ವೇಷ ಅಥವಾ ತಿರಸ್ಕಾರವನ್ನು ಬೆಳೆಸುತ್ತದೋ ಅಥವಾ ಬೆಳೆಸಲು ಪ್ರಯತ್ನಿಸುತ್ತದೋ, ಅಥವಾ ಅತೃಪ್ತಿಯನ್ನು ಪ್ರಚೋದಿಸುತ್ತದೋ ಅಥವಾ ಪ್ರಚೋದಿಸಲು ಪ್ರಯತ್ನಿಸುತ್ತದೋ, ಅಂತಹ ವ್ಯಕ್ತಿಯ ವಿರುದ್ಧ ರಾಜದ್ರೋಹ ಅಥವಾ ದೇಶದ್ರೋಹದ ಆಪಾದನೆ ಹೊರಿಸಬಹುದು. ಈ ಕಲಂ ಪ್ರಕಾರ ಆಪಾದಿಸಿದರೆ ಜೀವಾವಧಿಯ ವರೆಗೆ ಶಿಕ್ಷೆ ವಿಧಿಸಬಹುದು. ಈ ಕಲಂನ್ನು ಬಳಸಿ ಬ್ರಿಟಿಷರು ಅನೇಕ ಸ್ವಾತಂತ್ರ್ಯ ಹೋರಾಟಗಾರರನ್ನು ಬಂಧಿಸಿ ಮೊಕದ್ದಮೆಗಳನ್ನು ಹೂಡಿದರು. ಅವರುಗಳ ಪೈಕಿ ಪ್ರಮುಖರೆಂದರೆ ಬಾಲಗಂಗಾಧರ ತಿಲಕ್, ಮಹಾತ್ಮಗಾಂಧಿ, ಅನಿಬೆಸೆಂಟ್, ವಿರೇಂದ್ರದತ್ ಮುಜುಂದಾರ್.

ಸ್ವಾತಂತ್ರ್ಯ ಬಂದ ನಂತರ ನಮ್ಮ ಸರ್ಕಾರಗಳು ಇಂತಹ ಅಮಾನವೀಯ ಬರ್ಬರ ಮತ್ತು ದಮನಕಾರಿ ಕಾನೂನನ್ನು ಮುಂದುವರೆಸಿಕೊಂಡು ಬಂದಿದ್ದು ದುರದೃಷ್ಟಕರ. ಈಗ ಇರುವ ಕಲಂ124(ಎ) ಪ್ರಕಾರ ಸರಕಾರದ ಕ್ರಮಗಳು ಅಥವಾ ಆಡಳಿತಾತ್ಮಕ ಕಾರ್ಯಚರಣೆಗಳನ್ನು ಸರ್ಕಾರದ ವಿರುದ್ಧ ದ್ವೇಷ ಅಥವಾ ತಿರಸ್ಕಾರ ಅಥವಾ ಅತೃಪ್ತಿ ಪ್ರಚೋದಿಸದೆ ವಿರೋಧಿಸುವುದು ಅಥವಾ ಬದಲಾಯಿಸಲು ಪ್ರಯತ್ನಿಸುವುದು ಈ ಕಲಂ ನ ಪ್ರಕಾರ ಅಪರಾಧವಲ್ಲ. ಇಲ್ಲಿ ಸರ್ಕಾರಅಂದರೆ ಪ್ರಧಾನ ಅಥವಾ ಮುಖ್ಯ ಮಂತ್ರಿ, ಮಂತ್ರಿ, ಶಾಸಕರು, ಅಧಿಕಾರಿಗಳು ಇತ್ಯಾದಿಗಳ ಹೇಳಿಕೆ ಕ್ರಮಗಳನ್ನು ಟೀಕಿಸುವುದು ಸಹ ಅಪರಾಧವಲ್ಲ. ಇವರ್‍ಯಾರೂ 'ಸರ್ಕಾರ'ವಲ್ಲ. ಆದರೂ ನಮ್ಮ ಸರ್ಕಾರದ ಅತಿರೇಕಗಳನ್ನು ಪ್ರಶ್ನಿಸಲು ಪ್ರಯತ್ನಿಸಿದ ವ್ಯಕ್ತಿಗಳನ್ನು ಈ ಕಲಂನ್ನು ಬಳಸಿ ಬಂಧಿಸಿ, ಜೈಲಿಗೆ ಕಳಿಸಿ ಮೊಕದ್ದಮೆಗಳನ್ನು ದಾಖಲಿಸಲಾಯಿತು. ಇತ್ತೀಚಿನ ವರ್ಷಗಳಲ್ಲಿ ದೇಶದ ಗಮನವನ್ನು ಸೆಳೆದ ಪ್ರಕರಣಗಳೆಂದರೆ 2007ರಲ್ಲಿ ಬಿನಾಯಕ್ ಸೆನ್, 2010ರಲ್ಲಿ ಅರುಂಧತಿ ರಾಯ್, 2012ರಲ್ಲಿ ಅಸೀಮ್ ತ್ರಿವೇದಿ, ಇತ್ತೀಚೆಗೆ ಇದೇ ಕಲಂನ್ನು ಬಳಸಿ ಗುಜರಾತಿನ ಹಾರ್ದಿಕ್ ಪಟೇಲ್‌ರನ್ನು ಮತ್ತು ತಮಿಳುನಾಡಿನ ಜಾನಪದ ಕಲಾವಿದ ಕೋವನ್‌ರನ್ನು ಬಂಧಿಸಲಾಗಿದೆ. ಸರ್ಕಾರದ ವಿರುದ್ಧ ಧ್ವನಿ ಎತ್ತುತ್ತಿರುವ ಸಾಹಿತಿಗಳ, ಕಲಾವಿದರ, ಜನಪರ ನಾಯಕರ ವಿರುದ್ಧ ಬಳಸಲಾಗುತ್ತಿದೆ. ಸ್ವಾತಂತ್ರ್ಯದ ನಂತರ ಈ ಕಲಂನ ದುರ್ಬಳಕೆಯೆ ಹೆಚ್ಚಿದೆ. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ದೇಶದಲ್ಲಿ ಇಂತಹ ದಮನಕಾರಿ ಕಲಂನ ಅಗತ್ಯ ಇದೆಯೇ?

ವಿಶ್ವದ ಇತರೆ ಪ್ರಜಾಪ್ರಭುತ್ವ ದೇಶಗಳಾದ ಇಂಗ್ಲೆಂಡ್, ಅಮೇರಿಕಾ, ನ್ಯೂಜಿಲ್ಯಾಂಡ್ ದೇಶಗಳು ಇಂತಹ ಕಾನೂನನ್ನು ಕೊನೆಗಾಣಿಸಿವೆ. ಇಂತಹ ಕಾನೂನನ್ನು ಭಾರತವು ಸಹ ಕೊನೆಗಾಣಿಸಿ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಬೇಕಾಗಿದೆ. ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿಯವರು 1986ರಲ್ಲಿ ಬಿಜೋಎಮಾನ್ಯೂಯಲ್ ಎಂಬ ಪ್ರಕರಣದಲ್ಲಿ ಈ ರೀತಿ ಹೇಳಿದ್ದಾರೆ:

"ನಮ್ಮ ಪರಂಪರೆ ಸಹನೆಯನ್ನು ಕಲಿಸುತ್ತದೆ. ನಮ್ಮ ತತ್ವಶಾಸ್ತ್ರ ಸಹನೆಯನ್ನು ಬೋಧಿಸುತ್ತದೆ. ನಮ್ಮ ಸಂವಿಧಾನವು ಸಹನೆಯ ಆಚರಣೆಗೆ ಮಹತ್ವ ನೀಡುತ್ತದೆ. ನಾವು ಅದನ್ನು ನಿಸ್ಸತ್ವಗೊಳಿಸದಿರೋಣ"



ಕೃಪೆ: ಪಿ. ಮಹಮ್ಮದ್, ವಾರ್ತಾ ಭಾರತಿ





ಪ್ರಜಾಸತ್ತಾತ್ಮಕ ಸಂಸ್ಕೃತಿ ಕಟ್ಟುವ ಬಗೆ ತೋರಿಸಿದ ವಿಠ್ಠಲ: ಚೆನ್ನಿ

ತಮ್ಮ ವಿದ್ಯಾರ್ಥಿಗಳ ನಡುವೆ ಕನ್ನಡ ಸಾಹಿತ್ಯದ ಓದು ಮೂಲಕ, ಸ್ಥಳಿಯ ಸಮುದಾಯಗಳಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ, ಇಡೀ ರಾಜ್ಯದ ತುಂಬಾ ಸಾವಿರಾರು ವಿದ್ಯಾರ್ಥಿ–ಯುವಜನರಲ್ಲಿ ‘ಸಂವಿಧಾನ ಓದು’ ಮೂಲಕ ಪ್ರಜಾಸತ್ತಾತ್ಮಕ ಸಂಸ್ಕೃತಿ ಕಟ್ಟುವ ಮಾದರಿಯನ್ನು ವಿಠ್ಠಲ ತೋರಿಸಿದ್ದರು ಎಂದು ಚೆನ್ನಿ ಅವರು ಮೇ 7 ರಂದು ಕೆರೆಕೋಣದ ಸಹಯಾನ ಅಂಗಳದಲ್ಲಿ ‘ಪ್ರೀತಿ ಪದಗಳ ಸಹಯಾನಿ ವಿಠ್ಠಲ ಭಂಡಾರಿ’ ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ಹೇಳಿದರು.

— ಸುಧಾ ಆಡುಕಳ, ವಸಂತರಾಜ ಎನ್‌.ಕೆ. —

ಜೋಪಡಿಗಳ ಮೇಲೆ ಜೆಸಿಬಿ ಯಂತ್ರವೊಂದು ಎರಗಿ ನಾಶಮಾಡುತ್ತಿರುವುದನ್ನು ಸಾಮಾನ್ಯರೂ ಅನುಕೂಲಸ್ಥರೂ ಸುಶಿಕ್ಷಿತರೂ ಸುಮ್ಮನೆ ನಿಂತು ನೋಡುತ್ತಿರುವ ಚಿತ್ರ, ಇಂಗ್ಲೆಂಡಿನ ಪ್ರಧಾನಿ ಜೆಸಿಬಿ ಕಂಪನಿಗೆ ಭೇಟಿ ನೀಡಿ ಜೆಸಿಬಿ ಮೇಲೆ ನಿಂತು ಕೈಬೀಸಿದ ಚಿತ್ರ, ಸಿಎಎ ಪ್ರತಿಭಟನೆಯ ಮೆರವಣಿಗೆಗೆ ಪಿಸ್ತೂಲು ಹಿಡಿದ ಯುವಕನ ಹಿಂದೆ ಕೆಲ ದೂರದಲ್ಲೇ ದೆಹಲಿ ಪೋಲಿಸರ ದೊಡ್ಡ ಪಟಲಾಂ ನಗುತ್ತಾ ನಿಂತಿರುವ ಚಿತ್ರ – ಇವು ಹಿಟ್ಲರನ ಸೈನಿಕರು ಯಹೂದಿ ಹೆಣ್ಣುಮಗಳೊಬ್ಬಳನ್ನು ಬೀದಿಯಲ್ಲಿ ಸೆಳೆದೊಯ್ಯುತ್ತಿರುವಾಗ ಸಾಮಾನ್ಯರೂ ಅನುಕೂಲಸ್ಥರೂ ಸುಶಿಕ್ಷಿತರೂ ಯಾವುದೇ ಭಾವನೆಯಿಲ್ಲದೆ ನೋಡುತ್ತಿರುವ ಚಿತ್ರವನ್ನು ನೆನಪಿಸುತ್ತವೆ, ಪ್ರಜಾಸತ್ತೆ ಕಳೆದು ಹೋಗುತ್ತಿರುವುದನ್ನು ಸೂಚಿಸುತ್ತಿವೆ. ಈ ರೀತಿ ಪ್ರಜಾಸತ್ತೆ ಸಮಾನತೆ ಸೋದರತ್ವ ಗಳಿಲ್ಲದೆ ಟೊಳ್ಳಾಗಿ, ಬರಿಯ ಚುನಾವಣಾ ಪ್ರಜಾಸತ್ತೆಗೆ ಸೀಮಿತಗೊಂಡಿರುವ ವಿದ್ಯಮಾನವನ್ನೂ, ಅದಕ್ಕೆ ಕಾರಣಗಳನ್ನೂ ಚಿಂತಕರಾದ ಪ್ರೊ.ರಾಜೇಂದ್ರ ಚೆನ್ನಿಯವರು ವಿವರಿಸಿದರು. ಪ್ರಜಾಸತ್ತಾತ್ಮಕ ಸಂಸ್ಕೃತಿಯ ಅಭಾವವೇ ಇದಕ್ಕೆ ಮೂಲಕಾರಣ ಎಂದೂ ಅವರು ಗುರುತಿಸಿದರು. ಅವರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನಲ್ಲಿರುವ ಕೆರೆಕೋಣದ ಸಹಯಾನ ಅಂಗಳದಲ್ಲಿ ನಡೆದ ‘ಪ್ರೀತಿ ಪದಗಳ ಸಹಯಾನಿ ವಿಠ್ಠಲ ಭಂಡಾರಿ’ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಗಾಂಧೀಜಿಯವರ ಸ್ವಾತಂತ್ರ್ಯದ ಸಂದೇಶವನ್ನು ಮನೆಮನೆಗೆ ಕೊಂಡೊಯ್ಯುವ ಮೂಲಕ ಅವರನ್ನು ರಾಷ್ಟ್ರೀಯ ನೇತಾರನನ್ನಾಗಿ ರೂಪಿಸಿದವರು ಈ ದೇಶದ ಸಾಮಾಜಿಕ ಕಾರ್ಯಕರ್ತರು. ಅವರು ಸ್ವಾತಂತ್ರ್ಯದ ಮೌಲ್ಯಗಳನ್ನು ತಮ್ಮ ಸ್ಥಳೀಯ ಸಮುದಾಯಗಳಲ್ಲಿ ಜನರ ಪ್ರಜ್ಞೆಯ ಭಾಗವಾಗಿಸಿದರು. ಆದರೆ ಅಂತಹ ಕೆಲಸ ನಮ್ಮ ಸಾಂವಿಧಾನಿಕ ಪ್ರಜಾಸತ್ತೆಯ ಮೌಲ್ಯಗಳ ಸಂದರ್ಭದಲ್ಲಿ ಆಗಲಿಲ್ಲ. ಈ ನಿರ್ವಾತವನ್ನು ಬಲಪಂಥೀಯ ಶಕ್ತಿಗಳು ತುಂಬಿವೆ. ಈ ಪರಿಸ್ಥಿತಿಯನ್ನು ಇಂದಿನ ಸಂದರ್ಭದಲ್ಲಿ ಎದುರಿಸುವ ಬಗೆಯನ್ನು ವಿಠ್ಠಲ ತೋರಿಸಿದ್ದರು. ತಮ್ಮ ವಿದ್ಯಾರ್ಥಿಗಳ ನಡುವೆ ಕನ್ನಡ ಸಾಹಿತ್ಯದ ಓದು ಮೂಲಕ, ಸ್ಥಳಿಯ ಸಮುದಾಯಗಳಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ, ಇಡೀ ರಾಜ್ಯದ ತುಂಬಾ ಸಾವಿರಾರು ವಿದ್ಯಾರ್ಥಿ–ಯುವಜನರಲ್ಲಿ ‘ಸಂವಿಧಾನ ಓದು’ ಮೂಲಕ ಪ್ರಜಾಸತ್ತಾತ್ಮಕ ಸಂಸ್ಕೃತಿ ಕಟ್ಟುವ ಮಾದರಿಯನ್ನು ವಿಠ್ಠಲ ತೋರಿಸಿದ್ದರು ಎಂದು ಚೆನ್ನಿ ಅವರು ಹೇಳಿದರು.

ಇದಕ್ಕೆ ಮೊದಲು ವಿಠ್ಠಲ ಭಂಡಾರಿಯವರ ಸಮಾಧಿಗೆ ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಅವರು ಪುಷ್ಪಾರ್ಚನೆಯನೊಂದಿಗೆ ಗೌರವ ನಮನ ಸಲ್ಲಿಸಿದರು. ವಿಠ್ಠಲ ಭಂಡಾರಿಯವರ ನೆನಪಿನ ‘ಪುಸ್ತಕ ಮನೆ’ಯನ್ನು ಅವರು ಉದ್ಘಾಟಿಸಿದರು. ಮೀನಾಕ್ಷಿ ಬಾಳಿಯವರ ಸಂಪಾದಕತ್ವದಲ್ಲಿ ರೂಪುಗೊಂಡ ‘ಪ್ರೀತಿ ಪದಗಳ ಸಹಯಾನಿ ವಿಠ್ಠಲ ಭಂಡಾರಿ’ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು. ಶ್ರೀಪಾದ ಭಟ್ ಅವರ ಸಂಗೀತ ನಿರ್ದೇಶನದಲ್ಲಿ ಸಂವಿಧಾನ ಗೀತೆಯನ್ನು ಹಾಡುವುದರ ಮೂಲಕ ಅದನ್ನು ‘ಸಂವಿಧಾನ ಓದು’ ಕಾರ್ಯಕ್ರಮದ ರೂವಾರಿಯಾಗಿದ್ದ ವಿಠ್ಠಲ ಭಂಡಾರಿಯವರಿಗೆ ಅರ್ಪಿಸುವ ಮೂಲಕ ಸಭಾ ಕಾರ್ಯಕ್ರಮ ಆರಂಭವಾಗಿತ್ತು. ವಿಠ್ಠಲ ಭಂಡಾರಿಯವರ ಬಾಳಸಂಗಾತಿ ಯಮುನಾ ಗಾಂವಕಾರ ಪ್ರಾಸ್ತಾವಿಕ ಮಾತುಗಳನ್ನಾಡಿದರು.

‘ಪ್ರಜಾಸತ್ತೆಯ ಪುನಶ್ಚೇತನ: ಚರಿತ್ರೆ ನಮಗೆ ಹೇಳುವುದೇನು?’

ನಂತರ ವಿಠ್ಠಲ ಭಂಡಾರಿಯವರ ನೆನಪಿನ ಉಪನ್ಯಾಸ ಮಾಲಿಕೆಯ ಮೊದಲ ಉಪನ್ಯಾಸವಾಗಿ ಪ್ರೊ.ಜಿ. ಎನ್‌.ದೇವಿಯವರ ‘ಪ್ರಜಾಸತ್ತೆಯ ಪುನಶ್ಚೇತನದ ನಾಲ್ಕು ಚತುಷ್ಕಗಳು’ ಎಂಬ ವಿಷಯದ ಮೇಲೆ ಮುದ್ರಿತ ಭಾಷಣವನ್ನು ಪ್ರಸಾರ ಮಾಡಲಾಯಿತು. ‘ಪ್ರಜಾಸತ್ತೆಯ ಪುನಶ್ಚೇತನ : ಚರಿತ್ರೆ ನಮಗೆ ಹೇಳುವುದೇನು?’ ಎಂಬ ಮೊದಲ ಚತುಷ್ಕದಲ್ಲಿ ವಿಶ್ವ ಮತ್ತು ಭಾರತದಲ್ಲಿ ಪ್ರಜಾಸತ್ತೆಯ ಬೆಳವಣಿಗೆಯ ಚರಿತ್ರೆ ಮತ್ತು ಇಂದಿನ ಪರಿಸ್ಥಿತಿಯ ಬಗ್ಗೆ ವಿಶ್ಲೇಷಿಸುತ್ತಾರೆ. ‘ಸಾಮಾಜಿಕ ಕಾರ್ಯಕರ್ತ, ಸರಕಾರೇತರ ಕ್ರಿಯಾಭಾಗಿಗಳು ಮತ್ತು ರಾಷ್ಟ್ರಪ್ರಭುತ್ವ’ ಎಂಬ ಎರಡನೆಯ ಚತುಷ್ಕದಲ್ಲಿ ಸಮಾಜ ಬದಲಾವಣೆಯ ಪ್ರಕ್ರಿಯೆಯಲ್ಲಿ ನಾಗರಿಕ ಸಮಾಜದ ಪಾತ್ರದ ಬೆಳವಣಿಗೆ ಇಂದಿನ ಭಾರತದವರೆಗೆ ನಡೆದು ಬಂದ ಹಾದಿಯ ಅವಲೋಕನ ಮಾಡುತ್ತಾರೆ. ‘ಹಲವು ನಾಯಕರುಗಳ ಕುರಿತು : ಭಾರತದ ಭೂತ ಮತ್ತು ಭವಿಷ್ಯ’ ಎಂಬ ಮೂರನೆಯ ಚತುಷ್ಕದಲ್ಲಿ ‘ಭಾರತದ ನಿರ್ಣಾಯಕ ಗುರುತಾದ ಬಹುತ್ವಕ್ಕೆ ಅಂದರೆ ಭಾಷಿಕ, ಸಾಂಸ್ಕೃತಿಕ, ಸಾಮಾಜಿಕ ವೈವಿಧ್ಯತೆಗಳಿಗೆ ಒದಗಿರುವ ಅಪಾಯಗಳನ್ನು ಗುರುತಿಸುತ್ತಾರೆ. ‘ಗತದತ್ತ ಮರುಪಯಣಕ್ಕೆ ಪ್ರಶಿಕ್ಷಣ’ ಎಂಬ ಕೊನೆಯ ಚತುಷ್ಕದಲ್ಲಿ ದೇಶದ ಶೈಕ್ಷಣಿಕ ಇತಿಹಾಸವನ್ನು ಪೂರ್ಣವಾಗಿ ನಿರ್ಲಕ್ಷಿಸಿದ, ತಪ್ಪಾದ ಭಾಷಾ ಪರಿಪ್ರೇಕ್ಷ್ಯದ, ಭಾರತೀಯ ಜ್ಞಾನಮಾದರಿಗಳಿಗೆ ಮರಳುವ ‘ಹೊಸ ಶಿಕ್ಷಣ ನೀತಿ’ಯ ಪೊಳ್ಳುತನವನ್ನು ಬಯಲು ಮಾಡುತ್ತಾರೆ.

ನಾಲ್ಕು ಚತುಷ್ಕಗಳಲ್ಲಿ ಸಾಕಷ್ಟು ನಿರಾಶಾದಾಯಕವಾದ ಇಂದಿನ ಪರಿಸ್ಥಿತಿಯನ್ನು ಪ್ರಸ್ತುತಪಡಿಸಿದರೂ, ಪ್ರಜಾಸತ್ತೆಯ ಭವಿಷ್ಯದ ಕುರಿತು ಪ್ರೊ. ಜಿ.ಎನ್‌.ದೇವಿ ಅವರು ಈ ಆಶಾದಾಯಕ ಮಾತುಗಳನ್ನು ಹೇಳುತ್ತಾರೆ: “ನಿಸ್ಸಂಶಯವಾಗಿಯೂ ಸ್ವಾನುರಕ್ತ ರಾಷ್ಟ್ರೀಯತೆಯ ವಿಚಾರಗಳಿಗೆ, ಸ್ವಾನುಭೋಗಿ ಆರ್ಥಿಕ ಲಾಭಗಳ ಬಯಕೆಗೆ, ಸ್ವಸಂಪೂರಿತವಾಗುವ ಕ್ಷಿಪ್ರ ಚಲನೆಯ ಮಾಹಿತಿಗಾಗಿನ ಕಡುಮೋಹಕ್ಕೆ ದೊರಕುತ್ತಿರುವ ಮಹತ್ವ ದೀರ್ಘಕಾಲೀನವಾಗುವುದು ಅಸಂಭವ. ನಾವು ವಿಚಾರಗಳ ಚರಿತ್ರೆಯನ್ನು ನಂಬುವುದಾದರೆ, ಇಪ್ಪತ್ತೊಂದನೆಯ ಶತಮಾನವು ಮುಂಬರುವ ದಶಕಗಳಲ್ಲಿ ಮುಂದುವರಿಯುತ್ತಿದ್ದಂತೆ ನ್ಯಾಯ, ಸ್ವಾತಂತ್ರ್ಯ ಮತ್ತು ಜ್ಞಾನದ ಕಲ್ಪನೆಗಳು ಇನ್ನಷ್ಟು ವಿಸ್ತಾರವೂ ಆಳವೂ ಹೆಚ್ಚು ವಿಮೋಚಕವೂ ಆದ ಮನಸ್ಸುಗಳಾಗಿ ಹೊರಹೊಮ್ಮುವುದು ನಿಶ್ಚಿತ. ಅದು ವೈವಿಧ್ಯತೆ ಮತ್ತು ಪರಿಸರದ ಕುರಿತು ಆಳವಾದ ಗೌರವವು ತಳಹದಿಯಾಗುಳ್ಳ ನ್ಯಾಯದ ಹೆಚ್ಚು ಸೂಕ್ಷ್ಮವಾದ ಕಲ್ಪನೆಯ ಮೇಲೆ ನೆಲೆ ನಿಂತ ವಿಸ್ತೃತ ಪ್ರಜಾಪ್ರಭುತ್ವವಾಗಿರುತ್ತದೆ. ಮಾನವನ ಗತಕಾಲದ ಬಗ್ಗೆ ನಮಗಿರುವ ತಿಳಿವಳಿಕೆಯ ಬೆಳಕಿನಲ್ಲಿ ನಮ್ಮ ಕಾಲದ ಚಿಹ್ನೆಗಳನ್ನು ಓದುವುದು ಅಗತ್ಯ”

‘ಕೆರೆಕೋಣ ಮಾದರಿ’

ಕ್ರಿಯಾ ಮಾಧ್ಯಮದ ವಸಂತರಾಜ್ ಎನ್‌.ಕೆ. ಅವರು ಮಾತನಾಡಿ ಪ್ರಜಾಸತ್ತೆಗೆ ಇಂದು ಒದಗಿರುವ ಅಪಾಯಗಳನ್ನು ಎದುರಿಸಲು ಅಗತ್ಯವಾದ ಪ್ರಜಾಸತ್ತಾತ್ಮಕ ಸಂಸ್ಕೃತಿ ಕಟ್ಟಲು ಪ್ರಗತಿಪರ ಸಾಂಸ್ಕೃತಿಕ ಚಳುವಳಿ ಅಗತ್ಯ ಎಂದರು. ಇದನ್ನು ಕಟ್ಟಲು ವಿಠ್ಠಲ ಬಿಟ್ಟು ಹೋದ ಬಳುವಳಿಯೆಂದರೆ ವಿಶಿಷ್ಟವಾದ ‘ಕೆರೆಕೋಣ ಮಾದರಿ’. ಸ್ಥಳೀಯ ಸಮುದಾಯಗಳಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ, ಅದನ್ನು ತಾಲೂಕು ಜಿಲ್ಲೆ ರಾಜ್ಯ ಮಟ್ಟಕ್ಕೆ ಕೆಳಗಿನಿಂದ ಮೇಲಕ್ಕೆ ವಿಸ್ತರಿಸುವ ವಿಧಾನ, ಸರಕಾರಿ, ಇತರ ಸಾಂಸ್ಕೃತಿಕ ಸಂಘಟನೆಗಳು ಮತ್ತು ಸಾಮಾಜಿಕ–ರಾಜಕೀಯ ಚಳುವಳಿ–ಸಂಘಟನೆಗಳ ಜತೆ ಸಹಯೋಗದ ವಿಧಾನ ಇತ್ಯಾದಿ ‘ಕೆರೆಕೋಣ ಮಾದರಿ’ಯ ವಿಶಿಷ್ಟ ಗುಣಲಕ್ಷಣಗಳು. ನೂರು ‘ಕೆರೆಕೋಣ’ಗಳನ್ನು ಕಟ್ಟುವುದು ಮಾತ್ರ ವಿಠ್ಠಲನಿಗೆ ಸೂಕ್ತ ಶ್ರದ್ಧಾಂಜಲಿಯಾದೀತು ಎಂದು ಅವರು ಅಭಿಪ್ರಾಯಪಟ್ಟರು. ಡಾ। ಎಂ.ಜಿ.ಹೆಗಡೆಯವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಡಾ।ಶ್ರೀಪಾದ ಭಟ್ ಕಾರ್ಯಕ್ರಮವನ್ನು ನಿರ್ವಹಿಸಿದರು.

ಮಧ್ಯಾಹ್ನದ ನಂತರದ ಕಾರ್ಯಕ್ರಮದಲ್ಲಿ ವಿಠ್ಠಲ ಭಂಡಾರಿಯವರು ರಚಿಸಿದ ‘ಸ್ವಾತಂತ್ರ್ಯನೂ ಬೇಕು, ಭೂಮಿನೂ ಬೇಕು’, ಸಂಪಾದಿಸಿದ ‘ಮೂರು ಸುತ್ತು ಒಂದು ಗತ್ತು’, ಮಾಧವಿ ಭಂಡಾರಿಯವರು ರಚಿಸಿದ ‘ಪಿಸುದನಿ’ ಮತ್ತು ಡಾ।ಶ್ರೀಪಾದ ಭಟ್ ಬರೆದ ‘ನಟನೆಯ ಕೈಪಿಡಿ’ ಪುಸ್ತಕಗಳನ್ನು ಕಾರ್ಮಿಕ ಸಂಘಟನೆಯ ರಾಷ್ಟ್ರೀಯ ನಾಯಕರಾದ ವಿ.ಜೆ. ಕೆ.ನಾಯರ್ ಅವರು ಬಿಡುಗಡೆಗೊಳಿಸಿದರು. ನಂತರ ವಿಠ್ಠಲ ಸ್ಮರಣೆ ಕಾರ್ಯಕ್ರಮ ನಡೆಯಿತು. ವಿಠ್ಠಲ ಭಂಡಾರಿಯವರ ಒಡನಾಡಿಗಳಾಗಿದ್ದ ವಿಮಲಾ ಕೆ. ಎಸ್‌., ಕೆ. ಪ್ರಕಾಶ, ಮುನೀರ ಕಾಟಿಪಳ್ಳ, ಅವಿನಾಶ, ರಾಘವೇಂದ್ರ ಸಾಗರ ಮತ್ತು ಮೀನಾಕ್ಷಿ ಬಾಳಿಯವರು ಅವರ ಜತೆಗಿನ ತಮ್ಮ ಆಪ್ತ ಅನುಭವಗಳನ್ನು ಹಂಚಿಕೊಳ್ಳುವುದರ ಮೂಲಕ ಎಲ್ಲರ ಕಣ್ಣಂಚನ್ನು ತೇವವಾಗಿಸಿದರು. ಶ್ರೀಮತಿ ಸುಧಾ ಆಡುಕಳ ಕಾರ್ಯಕ್ರಮವನ್ನು ನಿರೂಪಿಸಿದರು.

ಸಮಾರೋಪ ಮಾತುಗಳನ್ನಾಡಿದ ಸಾಹಿತಿ ರಹಮತ್ ತರಿಕೆರೆಯವರು ಇರುವಾಗ ಸಾಮಾನ್ಯ ಹುಡುಗನಂತೆ ಕಾಣುತ್ತಿದ್ದ ವಿಠ್ಠಲ ಎಷ್ಟೊಂದು ಕೆಲಸಗಳನ್ನು ಮಾಡಿದ್ದರು ಮತ್ತು ಎಷ್ಟೊಂದು ಜನರ ಪ್ರೀತಿಯನ್ನು ಗಳಿಸಿದ್ದರೆಂಬುದನ್ನು ನೋಡಿದರೆ ಅಚ್ಚರಿಯಾಗುತ್ತದೆ. ಇಂಥದೊಂದು ಅರ್ಥಪೂರ್ಣವಾದ ಆರ್ದ್ರವಾದ ಕಾರ್ಯಕ್ರಮವನ್ನು ನಾನು ಹಿಂದೆಂದೂ ಕಂಡಿಲ್ಲ. ಬಹುಬೇಗ ಕಣ್ಮರೆಯಾದ ಅವರ ಕನಸುಗಳನ್ನು ಎಲ್ಲರೂ ನಮ್ಮ ಹೆಗಲ ಮೇಲೆ ಹೊತ್ತು ಸಾಗುವುದೇ ನಾವು ಅವರಿಗೆ ಸಲ್ಲಿಸಬೇಕಾದ ಗೌರವ ಎಂದರು. ಭಂಡಾರಿ ಕುಟುಂಬದ ಸದಸ್ಯರೆಲ್ಲರೂ ಅವರ ನೆನಪುಗಳನ್ನು ಹಂಚಿಕೊಂಡರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮುದಾಯ ಕರ್ನಾಟಕದ ದೇವೇಂದ್ರ ಗೌಡ ಅವರು ವಹಿಸಿದ್ದರು.

ಕಾರ್ಯಕ್ರಮದ ಕೊನೆಯಲ್ಲಿ ವಿಠ್ಠಲನಿಗೆ ಪ್ರಿಯವಾಗಿದ್ದ ತಾಳಮದ್ದಲೆಯ ಪ್ರಕಾರದಲ್ಲಿ ‘ಕೃಷ್ಣಸಂಧಾನ’ವನ್ನು ಸಹಯಾನ ತಂಡವು ಪ್ರಸ್ತುತ ಪಡಿಸಿತು.





ದೇಶದ ಸಂಪತ್ತು ಲೂಟಿ–ಬಡಗಲಪುರ ನಾಗೇಂದ್ರ ಚಾಟಿ

ಜಿಲ್ಲಾ ಮಟ್ಟದ ಜಾಗೃತಿ ಶಿಬಿರ ಉದ್ಘಾಟನೆ: ಸರ್ಕಾರಗಳ ವಿರುದ್ಧ ಆಕ್ರೋಶ

ದೇಶದ ಬಹು ಭಾಗದ ಸಂಪತ್ತು ಬೆರಳೆಣಿಕೆಯ ಮಂದಿಯ ಕೈ ಸೇರುತ್ತಿದೆ. ಬಂಡವಾಳಶಾಹಿಗಳು ಇನ್ನಷ್ಟು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಮಧ್ಯಮ ವರ್ಗದವರು ಬಡವರಾಗುತ್ತಿದ್ದಾರೆ. ಬಡವರು ಬಿಕ್ಷುಕರಾಗುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಅವರು ಆಕ್ರೋಶ ವ್ಯಕ್ತಪಡಿಸಿ ಸರ್ಕಾರಗಳ ವಿರುದ್ಧ ಚಾಟಿ ಬೀಸಿದರು.

ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯ ಹೊಸ ಜೀವನ ದಾರಿ ತರಬೇತಿ ಕೇಂದ್ರದಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಸಮಿತಿ ವತಿಯಿಂದ ಸೋಮವಾರ ಆಯೋಜಿಸಿದ್ದ ಕೃಷಿ ಕೂಲಿಕಾರರಿಗೆ ಜಿಲ್ಲಾ ಮಟ್ಟದ ಜಾಗೃತಿ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಹಲವು ವೈರುಧ್ಯಗಳು ಜೀವಂತವಾಗಿವೆ. ಜಾತಿ ವ್ಯವಸ್ಥೆ, ಅಸಮಾನತೆ, ಆರ್ಥಿಕ ದಿವಾಳಿತನದಿಂದ ಕೂಲಿಕಾರರು ಬೇಸತ್ತಿದ್ದಾರೆ. ಶ್ರಮ ಜೀವಿಗಳ ಬದುಕು ದಿಕ್ಕೆಟ್ಟು ಅಸ್ತಿತ್ವ ಕಳೆದುಕೊಳ್ಳುತ್ತಿವೆ. ದೆಹಲಿಯಲ್ಲಿ ರೈತರು ಸಂಘಟಿತವಾಗಿ ಹೋರಾಟ ಮಾಡಿದ ಪರಿಣಾಮ ಕರಾಳ ಕೃಷಿ ಕಾಯ್ದೆಗಳನ್ನು ಕೇಂದ್ರ ಸರ್ಕಾರ ಹಿಂಪಡೆಯುವಂತೆ ಮಾಡಲಾಯಿತು. ದೆಹಲಿ ಹೋರಾಟ ಎಲ್ಲಾರಿಗೂ ಮತ್ತು ಎಲ್ಲಾ ಹೋರಾಟಗಳಿಗೂ ಮಾದರಿಯಾಗಿದೆ. ಸಂವಿಧಾನ ಬದಾಲಾಯಿಸಲು ಸರ್ಕಾರಗಳು ಹೊಂಚು ಹಾಕಿ ಸಂಚು ರೂಪಿಸುತ್ತಿವೆ. ಸಂವಿಧಾನದ ಒಂದೊಂದು ಕವಲನ್ನು ಒಡೆಯುವ ತಂತ್ರವನ್ನು ಆಳುವ ಸರ್ಕಾರಗಳು ರೂಪಿಸುತ್ತಿವೆ. ಡಾ.ಬಿ.ಆರ್. ಅಂಬೇಡ್ಕರ್ ಅವರು ಬರೆದಿರುವ ಸಂವಿಧಾನವನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ ಅವರ ಪ್ರಯತ್ನ ವಿಫಲವಾಗುತ್ತದೆ. ದಿನ ಬಳಕೆಯ ವಸ್ತುಗಳನ್ನು ಹೆಚ್ಚು ಮಾಡುವ ಮೂಲಕ ಬಡವರ ಬದುಕಿಗೆ ಬರೆ ಎಳೆದಂತಾಗುತ್ತಿದೆ. ಸರ್ಕಾರದ ವಿರುದ್ದ ಜನ ದಂಗೆ ಏಳುವ ಕಾಲ ದೂರವಿಲ್ಲ ಎಂದು ಸರ್ಕಾರಗಳ ನಡೆಯ ಬಗ್ಗೆ ವಾಗ್ದಾಳಿ ನಡೆಸಿದರು.



ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಟಿ.ಎಲ್. ಕೃಷ್ಣೇಗೌಡ ಮಾತನಾಡಿ, ನಮ್ಮನಾಳುತ್ತಿರುವ ಜನ ಪ್ರತಿನಿಧಿಗಳು ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಿ ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಈ ದೇಶವನ್ನು ಬಂಡವಾಳದಾರರಿಗೆ, ಭೂ ಮಾಲೀಕರಿಗೆ ಅನುಕೂಲವಾಗುವಂತೆ ರೂಪಿಸಿರುವುದೇ ಸ್ವಾತಂತ್ರ್ಯದಿಂದ ಇಲ್ಲಿಯವರೆಗಿನ

ವರದಿ: **ಬಿ.ಎ. ಮಧುಕುಮಾರ**

ಸರ್ಕಾರಗಳ ಸಾಧನೆಯಾಗಿದೆ. ಗ್ರಾಮೀಣ ಭಾಗದ ಜನರು ರಾಜಕೀಯ ತಿಳುವಳಿಕೆಯನ್ನು ಬೆಳೆಸಿಕೊಳ್ಳಬೇಕು. ಕೂಲಿಕಾರರು ಪ್ರಜ್ಞಾವಂತರಾದರೆ ವ್ಯವಸ್ಥೆಯನ್ನು ಬದಲಾವಣೆ ಮಾಡ ಬಹುದು. ಕೋಟ್ಯಾಂತರ ರೂಪಾಯಿ ಸಾಲ ಮಾಡಿ ದೇಶ ಬಿಟ್ಟು ಹೋದವರ ಸಾಲವನ್ನು ಮನ್ನಾ ಮಾಡುತ್ತಾರೆ. ಬಡವರ ಸಾಲ ವಸೂಲಿ ಮಾಡಲು ಪಟ್ಟು ಹಿಡಿಯುತ್ತಾರೆ ಇದು ಈ ದೇಶದ ಶೋಚನೀಯ ವ್ಯವಸ್ಥೆ ಎಂದು ಸರ್ಕಾರಗಳನ್ನು ಛೇಡಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷ ಎಂ. ಪುಟ್ಟಮಾದು ಮಾತನಾಡಿ, ಕೂಲಿಕಾರರು ವಿಚಾರವಂತಿಕೆಯನ್ನು ಬೆಳೆಸಿಕೋಂಡು ಗ್ರಾಮೀಣ ಭಾಗದಲ್ಲಿ ಜನರಿಗೆ ಜಾಗೃತಿ ಮೂಡಿಸಬೇಕು. ಸರ್ಕಾರಗಳು ಅನುಸರಿಸುತ್ತಿರುವ ಬಡವರ ವಿರೋದಿ ಧೋರಣೆಗಳ ಬಗ್ಗೆ ತಿಳಿಸಬೇಕು. ಅಧ್ಯಯನ ಶಿಬಿರಗಳಿಂದ ಕಾರ್ಯಕರ್ತರು ಸಂಘಟಿತರಾಗಬೇಕು ಎಂದರು.

ಕ್ರಾಂತಿ ಗಾಯಕ ಹುರುಗಲವಾಡಿ ರಾಮಯ್ಯ ಅವರು ಕ್ರಾಂತಿಗೀತೆಗಳನ್ನು ಹಾಡಿ ಗಮನ ಸೆಳೆದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದಸ್ವಾಮಿ, ವಿಚಾರವಾದಿ ಜಿ.ಎನ್. ನಾಗರಾಜು, ಕರ್ನಾಟಕ ರೈತ ಸಂಘದ ಜಿಲ್ಲಾಧ್ಯಕ್ಷ ಕೆಂಪೂಗೌಡ, ಡಿಎಸ್ಎಸ್ ಜಿಲ್ಲಾ ಸಂಚಾಲಕ ಡಿ.ಕೆ. ಅಂಕಯ್ಯ, ಸಿಐಟಿಯು ಜಿಲ್ಲಾಧ್ಯಕ್ಷ ಎಂ.ಎಂ. ಶಿವಕುಮಾರ್, ಕೂಲಿಕಾರರ ಸಂಘದ ಜಿಲ್ಲಾ ಕಾರ್ಯದರ್ಶಿ ಬಿ. ಹನುಮೇಶ, ಎನ್. ಸುರೇಂದ್ರ, ಬಿ.ಎಂ. ಶಿವಮಲ್ಲು, ಅನಿತಾ, ಗಿರೀಶ ಸೇರಿದಂತೆ ಇತರರು ಇದ್ದರು.



ಕೃಷಿ ಕೂಲಿಕಾರರಿಗೆ ಜಿಲ್ಲಾ ಮಟ್ಟದ ಜಾಗೃತಿ ಶಿಬಿರವನ್ನು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಅವರು ಉದ್ಘಾಟಿಸಿ ಮಾತನಾಡಿದರು. ಜಿ.ಎನ್. ನಾಗರಾಜು, ನಿತ್ಯಾನಂದಸ್ವಾಮಿ, ಕೆಂಪೂಗೌಡ, ಅಂಕಯ್ಯ, ಕೃಷ್ಣೇಗೌಡ ಸೇರಿದಂತೆ ಇತರರು ಇದ್ದರು.



ಸಾರ್ವಜನಿಕ ಶಿಕ್ಷಣದ ಮೇಲಿನ ವೆಚ್ಚ ಮತ್ತು ಪ್ರಭುತ್ವ.......

ಪುಟ 6 ರಿಂದ

2017	46356	46600	
2018	50000	48441	1559
2019	56537	52520	4107
2020	59845	52189	7656

ಕೇಂದ್ರ ಸರಕಾರವು ಉನ್ನತ ಶಿಕ್ಷಣಕ್ಕೆ ಬಜೆಟ್‌ನಲ್ಲಿ ಪ್ರಸ್ತಾಪಿಸಿದ ಮೊತ್ತ ಮತ್ತು ನಂತರದ ವಾಸ್ತವದ ಹಂಚಿಕೆ

ವರ್ಷ	ಬಜೆಟ್ ಪ್ರಸ್ತಾಪ (ಕೋಟಿ ರೂ.)	ವಾಸ್ತವ ಹಂಚಿಕೆ (ಕೋಟಿ ರೂ.)	ಪ್ರಸ್ತಾಪದಲ್ಲಿ ಕಡಿತ /ಬಳಸಿಕೊಂಡಿಲ್ಲ (ಕೋಟಿ ರೂ.)
2010	16690	15475	1215
2011	21912	19505	2407
2012	25275	20423	4852
2013	26750	24465	2285
2014	27656	23152	4504
2015	26855	25439	1416
2016	28840	29026	
2017	33330	33614	
2018	35010	31904	3106
2019	38317	36916	1401
2020	**39467**	**32900**	**6567**

ಮೇಲಿನ ಅಂಕಿಸಂಖ್ಯೆಗಳನ್ನು ವಿಶ್ಲೇಷಿಸಿದಾಗ ಕಳೆದ ಹತ್ತು ವರ್ಷಗಳಲ್ಲಿ ಶಾಲಾ ಶಿಕ್ಷಣಕ್ಕೆ 33,505 ಕೋಟಿ ಮೊತ್ತದ ಹಂಚಿಕೆಯನ್ನು ಕಡಿತಗೊಳಿಸಿದ್ದಾರೆ ಅಥವಾ ಬಳಸಿಕೊಂಡಿಲ್ಲ. ಕಳೆದ ಹತ್ತು ವರ್ಷಗಳಲ್ಲಿ ಉನ್ನತ ಶಿಕ್ಷಣಕ್ಕೆ 27,753 ಕೋಟಿ ಮೊತ್ತದ ಹಂಚಿಕೆಯನ್ನು ಕಡಿತಗೊಳಿಸಿದ್ದಾರೆ ಅಥವಾ ಬಳಸಿಕೊಂಡಿಲ್ಲ.

ಈ ಅಂಕಿ ಸಂಖ್ಯೆಗಳೇ ಎಲ್ಲವನ್ನೂ ಹೇಳುವುದರಿಂದ ಹೆಚ್ಚಿನ ನಿಶ್ಲೇಷಣೆಯ ಅಗತ್ಯವಿಲ್ಲವೆನಿಸುತ್ತದೆ.

ಕಳೆದ ಆರು ವರ್ಷಗಳಲ್ಲಿ (2017–22) ದೆಹಲಿ ಸರಕಾರವು ತನ್ನ ಬಜೆಟ್ ವೆಚ್ಚದ ಸರಾಸರಿ ಶೇ 24.22, ಜಿಡಿಪಿಯ ಸರಾಸರಿ ಶೇ.1.82 ಮೊತ್ತವನ್ನು ಮೀಸಲಿಟ್ಟಿದೆ.

ವರ್ಷ	ಬಜೆಟ್ ಪ್ರಮಾಣ(%)	ಜಿಡಿಪಿಯ ಪ್ರಮಾಣ(%)	ಬಜೆಟ್‌ನ ವೆಚ್ಚ (ಸಾವಿರ ಕೋಟಿ ರೂ)	ಶಿಕ್ಷಣಕ್ಕೆ (ಸಾವಿರ ಕೋಟಿ ರೂ.)
2017	ಶೇ. 23.54	ಶೇ. 1.66	48000	11300
2018	ಶೇ. 26.4	ಶೇ. 1.86	53000	13999
2019	ಶೇ. 25.9	ಶೇ. 1.87	60000	15600
2020	ಶೇ. 24.33	ಶೇ. 1.98	65000	15815
2021	ಶೇ. 23.73	ಶೇ. 1.77	69000	16377
2022	ಶೇ. 21.47		75800	16278
ಸರಾಸರಿ	**ಶೇ. 24.22**	**ಶೇ. 1.82**	**61800**	**14894**

ಮೇಲಿನ ಅಂಕಿ ಸಂಖ್ಯೆಗಳನ್ನು ವಿಶ್ಲೇಷಿಸಿದಾಗ ದೆಹಲಿ ಸರಕಾರವು 2017–22ರ ಆರು ವರ್ಷಗಳ ಅವಧಿಯಲ್ಲಿ ಶಿಕ್ಷಣಕ್ಕೆ ಸರಾಸರಿ ಬಜೆಟ್ ವೆಚ್ಚದ ಶೇ.24.22ರಷ್ಟು ಹಂಚಿಕೆ ಮಾಡಿದೆ. ನಮ್ಮ ಕರ್ನಾಟಕ ಮತ್ತು ಕೇಂದ್ರ ಸರಕಾರದ ಹಂಚಿಕೆಗಳಿಗೆ ಹೋಲಿಸಿದರೆ ದೆಹಲಿ ಸರಕಾರವು ಶಿಕ್ಷಣಕ್ಕಾಗಿ ಸಾರ್ವಜನಿಕ ವೆಚ್ಚವನ್ನು ಕಡಿತಗೊಳಿಸಿಲ್ಲದಿರುವುದು ಸ್ಪಷ್ಟವಾಗುತ್ತದೆ. ಇದು ಸ್ವಾಗತಾರ್ಹ ಬೆಳವಣಿಗೆ. ಸಾರ್ವಜನಿಕ ಶಿಕ್ಷಣದ ಕುರಿತಾಗಿ ಸಂಪೂರ್ಣ ನಿರ್ಲಕ್ಷ್ಯ ಕಂಡುಬರುತ್ತಿರುವ ಇಂದಿನ ದಿನಗಳಲ್ಲಿ ದೆಹಲಿ ಸರಕಾರವು ಅದರ ಕುರಿತು ತನ್ನ ಬದ್ಧತೆಯನ್ನು ಪ್ರದರ್ಶಿಸಿರುವುದನ್ನು ಮೆಚ್ಚಿಕೊಳ್ಳಬೇಕಾಗುತ್ತದೆ. ಆದರೆ ದೆಹಲಿ ಸರಕಾರವು ಶಿಕ್ಷಣಕ್ಕೆ ಅಗತ್ಯವಿರುವ ಹಣವನ್ನು ಕೊಡುತ್ತಿದೆಯಾದರೂ ಸಹ ಸ್ವತಃ ಶಿಕ್ಷಣ ಇಲಾಖೆಯು ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿಲ್ಲ, ಬದಲಿಗೆ ಬಹುತೇಕ ಜವಬ್ದಾರಿಗಳನ್ನು ಎನ್‌ಜಿಓಗಳಿಗೆ ಹೊರಗುತ್ತಿಗೆ ನೀಡುತ್ತಿದೆ. ಇದು ಸಮಸ್ಯಾತ್ಮಕವಾಗಿದೆ. ಮತ್ತೊಂದೆಡೆ 12ನೆ ತರಗತಿಯಲ್ಲಿ ಉತ್ತಮ ಫಲಿತಾಂಶವನ್ನು ತೋರಿಸಲು ಹಿಂದಿನ ತರಗತಿಗಳಲ್ಲಿ ಮಕ್ಕಳನ್ನು ಫೇಲು ಮಾಡುತ್ತಾರೆ ಎನ್ನುವ ಆರೋಪವಿದೆ. 2 ಜೂನ್ 2018ರ 'ದ ಪ್ರಿಂಟ್' ಅಂತರ್ಜಾಲ ಪತ್ರಿಕೆಯ ವರದಿಯ ಅನುಸಾರ 9ನೇ ತರಗತಿಯಲ್ಲಿ ಶೇ.50–45 ಪ್ರಮಾಣದ ವಿದ್ಯಾರ್ಥಿಗಳನ್ನು ಫೇಲು ಮಾಡಿದ್ದಾರೆ ಎಂದು ವರದಿಯಾಗಿದೆ. 2013ರಲ್ಲಿ ಶೇ.44, 2014ರಲ್ಲಿ ಶೇ.48.2, 2015ರಲ್ಲಿ ಶೇ.49.22, 2016ರಲ್ಲಿ ಶೇ.47.72ರಷ್ಟು ಪ್ರಮಾಣದಲ್ಲಿ ಫೇಲು ಮಾಡಲಾಗಿದೆ. 6–8ನೆ ತರಗತಿಯ ದೆಹಲಿ ಸರಕಾರಿ ಶಾಲೆಗಳನ್ನು ಪ್ರತಿಭಾ ವಿದ್ಯಾರ್ಥಿಗಳು, ಸರಾಸರಿಗಿಂತ ಕೆಳಗಿರುವ ವಿದ್ಯಾರ್ಥಿಗಳು, ಸರಾಸರಿ ವಿದ್ಯಾರ್ಥಿಗಳೆಂದು ಮೂರು ಶ್ರೇಣಿಗಳಲ್ಲಿ ವರ್ಗೀಕರಿಸಲಾಗಿದೆ. ಇಲ್ಲಿ ಕಲಿಕೆಯಲ್ಲಿ ಹಿಂದಿರುವ ವಿದ್ಯಾರ್ಥಿಗಳನ್ನು ಶೇ.30ರಷ್ಟು ಮಾತ್ರ ಪಠ್ಯಕ್ರಮ ಬೋದಿಸುತ್ತಾರೆ. ಈ ವಿದ್ಯಾಥಿಗಳು 9ನೆ ತರಗತಿಗೆ ಬಂದಾಗ ಸಂಪೂರ್ಣ ಪ್ರಮಾಣದ ಪರೀಕ್ಷೆ ಬರೆಯಬೇಕಾಗುತ್ತದೆ ಮತ್ತು ಅಲ್ಲಿ ಫೇಲಾಗುತ್ತಾರೆ ಎಂದು ಆರೋಪಿಸಲಾಗಿದೆ.

ಆದರೆ ಆಪ್ ಸರಕಾರವು ಈ ಆರೋಪವನ್ನು ಅಲ್ಲಗೆಳೆಯುತ್ತಾ ಈ 9ನೆ ತರಗತಿಯ ಈ ಕಳಪೆ ಫಲಿತಾಂಶಕ್ಕೆ ಕಾರಣಗಳನ್ನು ಕೊಡುತ್ತಾರೆ. ಮೊದಲನೆಯದಾಗಿ 2011ರಲ್ಲಿ ಜಾರಿಗೊಂಡ 8ನೆ ತರಗತಿವರೆಗೆ ಫೇಲು ಮಾಡಬಾರದು (ಎನ್‌ಡಿಪಿ) ಎನ್ನುವ ನೀತಿ. ಎರಡನೆಯದು ಹತಾತ್ತನೆ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗೆ ವಿಶೇಷ ಮುತುವರ್ಜಿ ವಹಿಸಿ ಬೋಧೀಸಬೇಕಾದ ಶಿಕ್ಷಕರು ಒತ್ತಡದಲ್ಲಿರುತ್ತಾರೆ. ಆದರೆ ಈ ಕುರಿತು ಮತ್ತಷ್ಟು ವಿಶ್ಲೇಷಣೆಯ ಅಗತ್ಯವಿದೆ.

ಉಪ ಸಂಹಾರ

ಶಿಕ್ಷಣದಲ್ಲಿ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸುವುದು ಮತ್ತು ಸರಕಾರವು ಸಾರ್ವಜನಿಕ ಶಿಕ್ಷಣದ ಸಬಲೀಕರಣಕ್ಕೆ ಮೊದಲ ಆದ್ಯತೆ ಕೊಡಬೇಕಾಗಿರುವುದು. ಈ ಎರಡೂ ಇಂದಿನ ದಿನಗಳಲ್ಲಿ ಅತ್ಯಂತ ಸವಾಲಿನ ಪ್ರಶ್ನೆಗಳು. ಇದಕ್ಕೆ ಪರಿಹಾರ ಸುಲಭವಂತೂ ಅಲ್ಲ. ಮೊದಲಿಗೆ ಪ್ರಭುತ್ವಕ್ಕೆ ರಾಜಕೀಯ ಇಚ್ಚಾಶಕ್ತಿಯ ಅಗತ್ಯವಿದೆ. ಎರಡನೆಯದಾಗಿ ತನ್ನ ಶಿಕ್ಷಣದ ಖಾಸಗೀಕರಣ ನೀತಿಯಿಂದ ಹೊರಬರಬೇಕಾಗಿದೆ. ಮೂರನೆಯದಾಗಿ ಸಾರ್ವಜನಿಕ ವೆಚ್ಚಕ್ಕಾಗಿ ಅಗತ್ಯವಿರುವ ಆರ್ಥಿಕ ಸಂಪನ್ಮೂಲವನ್ನು ಕ್ರೋಢೀಕರಿಸಬೇಕಾಗಿದೆ. ಕಳೆದ ಹತ್ತು ವರ್ಷಗಳಲ್ಲಿ 1 ಲಕ್ಷ ಕೋಟಿಗೂ ಅಧಿಕ ಶಿಕ್ಷಣ ಸೆಸ್‌ನ ಮೂಲಕ ತೆರಿಗೆ ಸಂಗ್ರಹಿಸಲಾಗಿದೆ. ಆದರೆ ಅದನ್ನು ಸಾರ್ವಜಿಕ ವೆಚ್ಚಕ್ಕೆ ಬಳಸಿಕೊಂಡಿಲ್ಲ. ಶೇ.1 ಪ್ರಮಾಣದಲ್ಲಿರುವ ಅತಿ ಶ್ರೀಮಂತರಿಗೆ ಶೇ.2 ಪ್ರಮಾಣದ ತೆರಿಗೆ ವಿಧಿಸುವುದರ ಮೂಲಕ ಸಂಗ್ರಹಿಸಿದ ಹಣವನ್ನು ಶಿಕ್ಷಣಕ್ಕೆ ಬಳಸಿಕೊಳ್ಳಬೇಕಾಗಿದೆ. ಮನಸ್ಸಿದ್ದರೆ ಮಾರ್ಗಗಳಿವೆ. ಅದರೆ ಒಲ್ಲದ ಮನಸ್ಸಿಗೆ ಯಾವುದೇ ಮಾರ್ಗಗಳು ಕಾಣುವುದಿಲ್ಲ. ಇದು ಇಲ್ಲಿನ ದುರಂತ.

ಎಡ ಪಕ್ಷಗಳು, ಕಾರ್ಮಿಕ ಸಂಘಗಳು, ಮಹಿಳಾ ಸಂಘಟನೆಗಳು ಆದ್ಯತಾ ವಲಯದ ಸಾಲಕ್ಕೆ ಸಮಾನವಾದ ಬಡ್ಡಿದರದಲ್ಲಿ (ಸರ್ಕಾರೀ ಸಬ್ಸಿಡಿಯೊಂದಿಗೆ) ಸಾಲ ನೀಡಲು ಒತ್ತಾಯಿಸುತ್ತಲೇ ಬಂದಿವೆ. ಆದರೆ ಕೇಂದ್ರ ಸರ್ಕಾರ/ಆರ್‌ಬಿಐನಿಂದ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ಬಂದಿರಲಿಲ್ಲ. ಸಣ್ಣ ಸಾಲಕ್ಕಾಗಿ ಎಂಎಫ್ಐ ಗಳ ಮೇಲೆ ಅವಲಂಬಿತರಾಗಿರುವ ಮತ್ತು ಭದ್ರತೆ ನೀಡಲು ಏನನ್ನೂ ಹೊಂದಿರದ ಅಸಹಾಯಕ ಬಡ ಜನರಿಗೆ ಪರಿಹಾರವನ್ನು ನೀಡುವ ಬದಲು ರಿಜರ್ವ್ ಬ್ಯಾಂಕ್ ಮಾರ್ಚ್ 14, 2022 ರಂದು ಹೊರತಂದ ಹೊಸ ಮಾರ್ಗಸೂಚಿಗಳು ಈ ಹಿಂದೆ ಇದ್ದ ಸ್ವಲ್ಪ ಮಟ್ಟಿನ ರಕ್ಷಣೆಯನ್ನೂ ಈಗ ಇಲ್ಲವಾಗಿಸಿವೆ.

— ಕೋಟ ನಾಗರಾಜ —



ಕಿರು ಬಂಡವಾಳ ಸಾಲಗಳ ಮೇಲಿನ ರಿಜರ್ವ್ ಬ್ಯಾಂಕ್ ಮಾರ್ಗಸೂಚಿಗಳು – ಬಡವರ ಮೇಲಿನ ಕ್ರೂರ ಧಾಳಿ

ಭಾರತೀಯ ರಿಸರ್ವ್ ಬ್ಯಾಂಕ್ ಇತ್ತೀಚಿಗೆ ಕಿರುಬಂಡವಾಳ ಸಾಲಗಳ(ಮೈಕ್ರೋಫೈನಾನ್ಸ್)) ಕುರಿತು ಮಾಸ್ಟರ್ ನಿರ್ದೇಶನವನ್ನು ನೀಡಿ, ಬಡ್ಡಿದರದ ಮೇಲಿನ ಚಾಲ್ತಿಯಲ್ಲಿರುವ ಈಗಿನ ಮಿತಿಯನ್ನು ತೆಗೆದುಹಾಕಿದೆ. ಇದು ಏಪ್ರಿಲ್ 1, 2022 ರಿಂದ ಜಾರಿಗೆ ಬಂದಿದೆ. ತಮ್ಮ ಉಳಿವಿಗಾಗಿ ಈ ರೀತಿಯ ಸಾಲವನ್ನು ಹೆಚ್ಚಾಗಿ ಅವಲಂಬಿಸಿರುವ ಬಡವರು, ವಿಶೇಷವಾಗಿ ಮಹಿಳೆಯರ ಮೇಲೆ ಎಸಗಿದ ಅತ್ಯಂತ ಅಮಾನವೀಯ, ಕ್ರೂರ ಧಾಳಿ ಇದಾಗಿದೆ.

ತೊಂಬತ್ತರ ದಶಕದಲ್ಲಿ ಆರಂಭಗೊಂಡ ನವ ಉದಾರೀಕರಣ ನೀತಿಗಳ ಫಲವಾಗಿ, ನಮ್ಮ ದೇಶದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸುಧಾರಣೆ ಹೆಸರಿನಲ್ಲಿ ಹಲವು ಬದಲಾವಣೆಗಳನ್ನು ತರಲಾಯಿತು. ಇದರ ಪರಿಣಾಮವಾಗಿ ವಿತ್ತೀಯ ಸೇರ್ಪಡೆ (ಫಿನಾನ್ಶಿಯಲ್ ಇನ್‌ಕ್ಲೂಷನ್) ಮತ್ತು ಆದ್ಯತೆಯ ವಲಯಗಳತ್ತ ರಾಷ್ಟ್ರೀಕೃತ ಬ್ಯಾಂಕುಗಳ ಪಾತ್ರವನ್ನು ದುರ್ಬಲಗೊಳಿಸಲಾಯಿತು.

ಉದಾಹರಣೆಗೆ, 1994 ರಲ್ಲಿ ರೂ. 25000 ಗಿಂತ ಕೆಳಗಿನ ಸಾಲಗಳು, ಒಟ್ಟು ಸಾಲದ 18.3 % ಮತ್ತು ಫಲಾನುಭವಿಗಳ ಸಂಖ್ಯೆ 5.58 ಕೋಟಿ ಇದ್ದಿದ್ದು 2010 ರಲ್ಲಿ (16 ವರ್ಷಗಳ ನಂತರ), ಒಟ್ಟು ಸಾಲದ 1.3% ಮತ್ತು ಫಲಾನುಭವಿಗಳ ಸಂಖ್ಯೆ ಕೇವಲ 19 ಲಕ್ಷಕ್ಕೆ ಇಳಿಯಿತು. ಈ ಅವಧಿಯಲ್ಲಿ 5 ಕೋಟಿಗೂ ಹೆಚ್ಚು ಸಾಲಗಾರರು ಅನಿವಾರ್ಯವಾಗಿ ತಮ್ಮ ಆರ್ಥಿಕ ಚಟುವಟಿಕೆಗಳಿಗೆ ಬೇಕಾಗಿರುವ ಸಣ್ಣ ಸಾಲದ ಅವಶ್ಯಕತೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅಸ್ತಿತ್ವಕ್ಕೆ ಬಂದ ಖಾಸಗಿ ಕಿರುಬಂಡವಾಳ ಸಂಸ್ಥೆಗ(ಎಂಎಫ್ಐ)ಳ ಮೊರೆ ಹೋಗಬೇಕಾಯಿತು.

ಈ ಎಂಎಫ್ಐ ಗಳು ರಾಷ್ಟ್ರೀಕೃತ ಬ್ಯಾಂಕುಗಳಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಪಡೆದು, ಈ ಸಾಲಗಾರರಿಗೆ (ಸ್ವ ಸಹಾಯ ಗುಂಪುಗಳು, ಸ್ತ್ರೀ ಶಕ್ತಿ ಸಂಘಗಳು ಇತ್ಯಾದಿ) ವಾರ್ಷಿಕ 48%–60% ಬಡ್ಡಿಯನ್ನು ವಿಧಿಸಿ, ತರಹೇವಾರಿ ಶುಲ್ಕಗಳನ್ನು ಹೇರಿ ಸಾಲಗಾರರನ್ನು ಹಿಂಡಲು ಪ್ರಾರಂಭಿಸಿದವು. ಸಾಲ ವಸೂಲಾತಿಗೆ ಗೂಂಡಾಗಳನ್ನು 'ರಿಕವರಿ ಏಜೆಂಟ್'(ವಸೂಲಿದಾರರು)ಗಳಾಗಿ ಬಳಸಿಕೊಂಡು, ನಿಗದಿತ ದಿನಾಂಕಗಳಲ್ಲಿ (ವಾರಕ್ಕೊಮ್ಮೆ/ಹದಿನೈದು ದಿನಕ್ಕೊಮ್ಮೆ) ಸಾಲ ಮರುಪಾವತಿ ಮಾಡದ ಬಡ ಸಾಲಗಾರರಿಗೆ ಕಿರುಕುಳ ನೀಡುತ್ತಿದ್ದವು. ಈ ಬಡ ಸಾಲಗಾರರಲ್ಲಿ ಹೆಚ್ಚಿನವರು ಗ್ರಾಮೀಣ ಮಹಿಳೆಯರು. ಈ ಎಂಎಫ್ಐ ಗಳ ವಿರುದ್ಧ ವಿಶೇಷವಾಗಿ ಅಂದಿನ ಆಂಧ್ರಪ್ರದೇಶದಲ್ಲಿ ನೂರಾರು ದೂರುಗಳು ಬಂದಿದ್ದವು. ಈ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಕಿರುಕುಳ ತಾಳದೆ ಸುಮಾರು 150 ಮಹಿಳೆಯರು ಆತ್ಮಹತ್ಯೆಗೆ ಶರಣಾದರು.

ಇದನ್ನು ವಿರೋಧಿಸಿ ಎಡ ಪಕ್ಷಗಳು ಹಾಗೂ ಮಹಿಳಾ ಸಂಘಟನೆಗಳು ನಡೆಸಿದ ಚಳುವಳಿಗಳ ಫಲವಾಗಿ ಸಾಲಗಾರರ ಶೋಷಣೆ ತಡೆಯಲು ಕೆಲವು ಸುಧಾರಣೆಗಳು ಜಾರಿಗೆ ಬಂದವು.

ಜನವರಿ 2011 ರಲ್ಲಿ ವೈ ಹೆಚ್ ಮಾಲೆಗಾಂ ಸಮಿತಿಯು ಸಲ್ಲಿಸಿದ ವರದಿಯ ಶಿಫಾರಸಿಗೆ ಅನುಗುಣವಾಗಿ ರಿಜರ್ವ್ ಬ್ಯಾಂಕ್ ಮಾರ್ಗಸೂಚಿಗಳನ್ನು ಹೊರಡಿಸಿತು. ಎಂಎಫ್ಐ ಗಳು ತಾವು ಪಡೆಯುವ ಸಾಲದ ಬಡ್ಡಿಯ ದರಕ್ಕಿಂತ ಗರಿಷ್ಠ 10%–12% ಷ್ಟು ಮಾತ್ರ ಹೆಚ್ಚು ಬಡ್ಡಿದರವನ್ನು ವಿಧಿಸಲು ಮಿತಿಗೊಳಿಸುವುದು, ಬಡ್ಡಿದರವು ಪಾರದರ್ಶಕವಾಗಿರುವುದು, ಕಿರುಕುಳ ರಹಿತ ವಸೂಲಾತಿ ಮುಂತಾದ ಹಲವು ನಿರ್ಬಂಧಗಳನ್ನು ತಂದಿತು. ಇದರಿಂದ ಸಾಲಗಾರರಿಗೆ ಸ್ವಲ್ಪ ಮಟ್ಟಿನ ಅನುಕೂಲಗಳೇನೋ ಆಯಿತು. ಕಾನೂನು/ ಮಾರ್ಗಸೂಚಿಗಳ ಉಲ್ಲಂಘನೆಯಾದಾಗಲೆಲ್ಲ ಪೊಲೀಸ್ ರಕ್ಷಣೆ ಸಿಗುವಂತಾಯಿತು.

ಆದರೂ, ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ ವಾರ್ಷಿಕ ಶೇಕಡಾ 22–24 ರ ಬಡ್ಡಿ ದರವು ಯಾವುದೇ ರೀತಿಯಲ್ಲಿ ಸಹಾಯಕವಾಗಲಿಲ್ಲ. ಎಡ ಪಕ್ಷಗಳು, ಕಾರ್ಮಿಕ ಸಂಘಗಳು, ಮಹಿಳಾ ಸಂಘಟನೆಗಳು ಆದ್ಯತಾ ವಲಯದ ಸಾಲಕ್ಕೆ ಸಮಾನವಾದ ಬಡ್ಡಿದರದಲ್ಲಿ (ಸರ್ಕಾರೀ ಸಬ್ಸಿಡಿಯೊಂದಿಗೆ) ಸಾಲ ನೀಡಲು ಒತ್ತಾಯಿಸುತ್ತಲೇ ಬಂದಿವೆ. ಆದರೆ ಕೇಂದ್ರ ಸರ್ಕಾರ/ಆರ್‌ಬಿಐನಿಂದ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ಬಂದಿಲ್ಲ.

ಅಸಹಾಯಕ ಬಡಜನತೆಗೆ ಮಾರಕವಾಗುವ ರಿಜರ್ವ್ ಬ್ಯಾಂಕ್ ಮಾರ್ಗ ಸೂಚಿಗಳು:

ಸಣ್ಣ ಸಾಲಕ್ಕಾಗಿ ಎಂಎಫ್ಐ ಗಳ ಮೇಲೆ ಅವಲಂಬಿತರಾಗಿರುವ ಮತ್ತು ಭದ್ರತೆ ನೀಡಲು ಏನನ್ನೂ ಹೊಂದಿರದ ಅಸಹಾಯಕ ಬಡ ಜನರಿಗೆ ಪರಿಹಾರವನ್ನು ನೀಡುವ ಬದಲು ರಿಜರ್ವ್ ಬ್ಯಾಂಕ್ ಮಾರ್ಚ್ 14, 2022 ರಂದು ಹೊರತಂದ ಹೊಸ ಮಾರ್ಗಸೂಚಿಗಳ ಮೂಲಕ ಈ ಸಾಲಗಳ ಬಡ್ಡಿ ಮಿತಿಯನ್ನು ತೆಗೆದು ಹಾಕಿದೆ. ಇದು ಕೋಟ್ಯಂತರ ಬಡವರ ಜೀವನದಲ್ಲಿ ಹಾನಿಕಾರಕ ಪರಿಣಾಮಗಳನ್ನು ಉಂಟುಮಾಡುತ್ತದೆ. ಸ್ವಲ್ಪ ಮಟ್ಟಿಗೆ ಈ ಹಿಂದೆ ಇದ್ದ ರಕ್ಷಣೆಯೂ ಈಗ ಇಲ್ಲವಾಗಿದೆ.

ಇತ್ತೀಚಿನ ಆರ್‌ಬಿಐ ಮಾರ್ಗಸೂಚಿಗಳ ಮುಂದುವರಿದ ಭಾಗವಾಗಿ, ಹಣಕಾಸು ಸಂಸ್ಥೆಗಳು ಮತ್ತೆ ವಾರ್ಷಿಕ ಶೇಕಡಾ 48 ರಿಂದ ಶೇಕಡಾ 60 ರ ನಡುವೆ ಬಡ್ಡಿದರವನ್ನು ಹೆಚ್ಚಿಸುತ್ತವೆ; ಗೂಂಡಾಗಳನ್ನು ನೇಮಿಸಿಕೊಂಡು ಸಾಲಗಾರರಿಗೆ ಹಿಂದಿನಂತೆ ಕಿರುಕುಳ ನೀಡಲು ಪ್ರಾರಂಭಿಸುತ್ತಾರೆ. ಹೀಗಾಗಿ ಸುಮಾರು 13–14 ವರ್ಷಗಳ ಹಿಂದೆ ನಡೆದ ದುರಂತ ಘಟನೆಗಳು ಮರುಕಳಿಸಲಿವೆ.

ಸರ್ಕಾರೀ ಬ್ಯಾಂಕುಗಳ, ಗ್ರಾಮೀಣ ಬ್ಯಾಂಕುಗಳ ಖಾಸಗೀಕರಣ, ಸಹಕಾರಿ ಕ್ಷೇತ್ರದ ಮೇಲೆ ಧಾಳಿ, ಇವೆಲ್ಲವೂ ಗ್ರಾಮೀಣ ಆರ್ಥಿಕತೆಯನ್ನು ಖಾಸಗಿ ಕಾರ್ಪೊರೇಟ್‌ಗಳ ಹಿತಾಸಕ್ತಿಗೆ ಒಳಪಡಿಸುವ ಯೋಜನೆಯ ಭಾಗ. ಈ ಮಾರ್ಗ ಸೂಚಿಗಳೂ ಇದೇ ದಿಕ್ಕಿನಲ್ಲೇ ಇವೆ. ಆದ್ದರಿಂದ ಈ ನೀತಿಗಳ ಪ್ರತಿರೋಧದ ಭಾಗವಾಗಿಯೇ, ಈ ಮಾರ್ಗಸೂಚಿಗಳನ್ನು ವಾಪಸ್ಸು ಪಡೆಯುವಂತೆ ರಿಜರ್ವ್ ಬ್ಯಾಂಕ್ ಹಾಗೂ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕಾಗಿದೆ.



ಜೀವ ವಿಮಾ ನಿಗಮದ ನಿಜವಾದ ಒಡೆಯರು ಯಾರು?

ಭಾರೀ ವಿರೋಧದ ನಡುವೆಯೂ ಎಲ್‌ಐಸಿಯ ಶೇರು ಮಾರಾಟದ ಪ್ರಕ್ರಿಯೆ ಆರಂಭವಾಗಿದೆ. ಇದಕ್ಕೆ ಭಾರೀ ಸ್ಪಂದನ ಸಿಕ್ಕಿದೆ, ಅತ್ಯಂತ ಯಶಸ್ವಿಯಾಗಿದೆ ಎಂದು ಸರಕಾರೀ ವಕ್ತಾರರು ಹೇಳುತ್ತಿದ್ದಾರೆ. ಇನ್ನೂ ಮುಂದೆ ಹೋಗಿ ಇದನ್ನು 'ಆತ್ಮನಿರ್ಭರ ಭಾರತ'ದ ಒಂದು ಉದಾಹರಣೆಯಾಗಿ ಪರಿಗಣಿಸಬಹುದು ಎಂದೂ ಹೇಳಿದ್ದಾರೆ. ಆದರೆ ವಾಸ್ತವವಾಗಿ ಇದು 'ಯಶಸ್ವಿ'ಯಾಗಿರುವುದು ಎಲ್‌ಐಸಿ ಶೇರುಗಳಿಗೆ ಅತೀ ಕಡಿಮೆ ಬೆಲೆ ನಿಗದಿ ಮಾಡಿದ್ದರಿಂದ. ಈ ನಿಗದಿ ಪ್ರಕ್ರಿಯೆಯೇ ಹೇಗೆ ಒಂದು ಬೃಹತ್ ಹಗರಣವಾಗಿ ಕಾಣುತ್ತದೆ ಎಂಬುದನ್ನು ಹಿಂದಿನ ಸಂಚಿಕೆಯಲ್ಲಿ ಓದಿದ್ದೀರಿ (ಜನಶಕ್ತಿ, ಸಂಚಿಕೆ 20, ಮೇ 9–15,2022). ಐಪಿಒನಲ್ಲಿರುವ ಎಲ್‌ಐಸಿ ಶೇರುಗಳ ಸಂಭಾವ್ಯ "ಖರೀದಿದಾರರು", ಅಂದರೆ ಅಂತರ್ರಾಷ್ಟ್ರೀಯ 'ಹೂಡಿಕೆದಾರರು', ವಿಶೇಷವಾಗಿ "ಆಂಕರ್"(ಲಂಗರು) ಹೂಡಿಕೆದಾರರು ಎಂದು ಕರೆಯಲ್ಪಡುವವರು, ಬೆಲೆ ಏನಾಗಿರಬೇಕು ಎಂದು ಸರ್ಕಾರಕ್ಕೆ ಹೇಳುತ್ತಿದ್ದ ಸುದ್ದಿಗಳು ಮಾಧ್ಯಮಗಳಲ್ಲಿ ಕಾಣಿಸಿಕೊಂಡಿದ್ದವು.

ಬಹುಶಃ, ಮೋದಿ ಸರ್ಕಾರವು ಈ ಐಪಿಒದ ಪ್ರಯೋಜನ ಪಡೆದುಕೊಂಡು ನಿರ್ಗಮಿಸುವ ಸಟ್ಟಾಕೋರ ತಿಮಿಂಗಿಲಗಳು ಗಳಿಸುವ ಅಗಾಧ ಲಾಭದ ಲೆಕ್ಕಾಚಾರ ಮಾಡುತ್ತಿದೆಯಷ್ಟೇ, ಅವರ ಈ ಅಗಾಧ ಲಾಭ ಹೇಗೆ ನೇರವಾಗಿ ಸರ್ಕಾರಕ್ಕೆ ಮತ್ತು ಕೋಟ್ಯಂತರ ಪಾಲಿಸಿದಾರರಿಗೆ ನಷ್ಟ ಮಾಡುವ ಮೂಲಕವೇ ಬರುವಂತದ್ದು ಎಂಬುದನ್ನು ಆರ್ಥಿಕ ವಿಚಾರಗಳ ವಿಶ್ಲೇಷಕರಾಗಿರುವ ವಿ.ಶ್ರೀಧರ್ ಮೇಲೆ ಹೇಳಿದ ಲೇಖನದಲ್ಲಿ ವಿವರಿಸಿದ್ದರು.

ಈ ಸಂದರ್ಭದಲ್ಲಿ ಅವರು ಹೆಚ್ಚಿನವರ ಗಮನಕ್ಕೆ ಬಾರದ ಈ ಕಥನದಲ್ಲಿನ ಒಂದು ದೊಡ್ಡ ಪ್ರಶ್ನೆಯನ್ನು ಬಗ್ಗೆ, ಸರಕಾರ ಯಾವ ನೆಲೆಯಲ್ಲಿ ಈ ಐಪಿಒ ವನ್ನು ಮಾಡಿದೆ, ಎಲ್‌ಐಸಿಯ ನಿಜವಾದ ಒಡೆಯರು ಯಾರು ಎಂಬ ಪ್ರಶ್ನೆಯನ್ನು ಕೂಡ ವಿಶ್ಲೇಷಿಸಿದ್ದಾರೆ. ಆ ವಿಶ್ಲೇಷಣೆಯನ್ನು ಈ ಮುಂದೆ ಕೊಡಲಾಗಿದೆ. ಇದೀಗ ದೇಶದ ಸರ್ವೋಚ್ಚ ನ್ಯಾಯಾಲಯದ ಮುಂದೆಯೂ ಬಂದಿದೆ.

ವಿ. ಶ್ರೀಧರ್ ಅನುವಾದ: **ಶೃಂಶನಾ**

ಎಲ್‌ಐಸಿ ಕಥನದಲ್ಲಿನ ಈ ದೊಡ್ಡ ಪ್ರಶ್ನೆಯನ್ನು ಮಾಧ್ಯಮಗಳಲ್ಲಿನ ಪಂಡಿತರು ಬಲು ಎಚ್ಚರಿಕೆಯಿಂದ ತಪ್ಪಿಸಿದ್ದಾರೆ. ಅಲ್ಲದೆ ಎಲ್‌ಐಸಿಯ ಶೇರುಗಳ ಈ ಕಡಿಮೆ ಮೌಲ್ಯಮಾಪನವು ಸಂಪೂರ್ಣವಾಗಿ ಸರ್ಕಾರದ ನಿಯಂತ್ರಣಕ್ಕೆ ಹೊರಗಿರುವ ಅಂಶಗಳ ಪರಿಣಾಮವಾಗಿದೆ ಎಂದು ಅವರು ಸರ್ಕಾರದ ಬಗ್ಗೆ ತುಂಬಾ ಸಹಾನುಭೂತಿ ವ್ಯಕ್ತಪಡಿಸಿ ವಾದಿಸುತ್ತಿದ್ದಾರೆ. ಇದನ್ನು ಜಾಣತನ ಎನ್ನಲೂ ಸಾಧ್ಯವಿಲ್ಲ. ಪಾಲಿಸಿದಾರರು ಐಪಿಒ ನಲ್ಲಿ ಷೇರುಗಳಿಗೆ ಅರ್ಹರು ಎಂಬ ವಾದವು ಸಹ ಜಾಣತನದಲ್ಲ, ಬದಲಾಗಿ ಪಕ್ಕಾ ವಿಕೃತವಾದ.

ಮೊದಲನೆಯದಾಗಿ, ಪಾಲಿಸಿದಾರರನ್ನು ವೈಯಕ್ತಿಕವಾಗಿಯಲ್ಲ, ಬದಲು, ಒಂದು ವರ್ಗವಾಗಿ ಸಾಮೂಹಿಕವಾಗಿ ನಗಣ್ಯಗೊಳಿಸಲಾಗುತ್ತಿದೆ ಎಂಬುದರಲ್ಲಿ ಸಂದೇಹವಿಲ್ಲ.

ಎರಡನೆಯದಾಗಿ, ಐಪಿಒ ದಲ್ಲಿ ಭಾಗವಹಿಸಲು ಔಪಚಾರಿಕವಾಗಿ "ಅವಕಾಶ" ನೀಡುವ ಮೂಲಕ ಇದನ್ನು ಸರಿಪಡಿಸಲಾಗುತ್ತಿದೆ ಎಂಬುದೂ ಸರಿಯಲ್ಲ. ಏಕೆಂದರೆ ಲಕ್ಷ–ಲಕ್ಷ ಪಾಲಿಸಿದಾರರು, ವಿಶೇಷವಾಗಿ ಸಣ್ಣ ಮೊತ್ತದ ಪಾಲಿಸಿಗಳನ್ನು ಹೊಂದಿರುವವರು, ಷೇರು ಮಾರುಕಟ್ಟೆಯನ್ನು ಪ್ರವೇಶಿಸುವ ಸ್ಥಿತಿಯಲ್ಲಿಲ್ಲದಿರಬಹುದು ಅಥವಾ ಹಾಗೆ ಮಾಡುವ ಬಯಕೆಯನ್ನು ಹೊಂದಿರದಿರಬಹುದು. ಆದ್ದರಿಂದ ಈ ಐಪಿಒ ಲಾಟರಿಯಲ್ಲಿ ಅವರು ಒಂದು ವರ್ಗವಾಗಿ ವಂಚಿತರಾಗುತ್ತಿದ್ದಾರೆ ಎಂಬ ಸಂಗತಿ ಬದಲಾಗುವುದಿಲ್ಲ.

ಮೂರನೆಯದಾಗಿ, ಯಾವುದೇ ಪಾಲಿಸಿದಾರರು ಯಾವುದೇ ಮಾಲೀಕತ್ವದ ಹಕ್ಕುಗಳಿಲ್ಲದ ಎಲ್‌ಐಸಿಯ "ಗ್ರಾಹಕ"ರಷ್ಟೇ ಎಂದು ಸರ್ಕಾರವು ಈಗ ಪರಿಗಣಿಸಿ ಅವರಿಗೆ ಒಂದು ಭಾಗವನ್ನು ಮೀಸಲಿಡುವ ವಿಚಾರದ ಬಗ್ಗೆಯೇ ಮಾಧ್ಯಮಗಳಲ್ಲಿ ಗೊಣಗಾಟದ ದನಿಯಾದರೂ ಏಳಬೇಕಾಗಿತ್ತು. ಹಾಗಾಗಿಲ್ಲ ಎಂಬುದು ಕೂಡ ಗಮನಿಸಬೇಕಾದ ಸಂಗತಿಯಲ್ಲವೇ?

ಭಾರತೀಯ ಬಂಡವಾಳ ಮಾರುಕಟ್ಟೆಗಳ ಇತಿಹಾಸದಲ್ಲಿ ಒಂದು ಕಂಪನಿಯು ತನ್ನ "ಗ್ರಾಹಕರಿಗೆ" ಐಪಿಒ ದಲ್ಲಿ ಷೇರುಗಳನ್ನು ನೀಡಿದ ನಿದರ್ಶನ ಇದೆಯೇ? ಉದಾ: ಪೇಟಿಎಂ ತನ್ನ ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ಷೇರುಗಳನ್ನು ಮಾರಾಟ ಮಾಡಿದ್ದರೆ ಪ್ರತಿಕ್ರಿಯೆ ಹೇಗಿರುತ್ತಿತ್ತು?

ಪುಟ 14 ಕ್ಕೆ





ಬುಲ್‌ಡೋಜರ್ ರಾಜಕೀಯಕ್ಕೆ ನಾಗರಿಕರ ಪ್ರತಿರೋಧ

ಮೇ 11 ರಂದು ದಿಲ್ಲಿಯ ನಾಗರಿಕರು ಸಾವಿರಾರು ಸಂಖ್ಯೆಯಲ್ಲಿ ನೆರೆದು ತಮ್ಮ ಸಂವಿಧಾನಿಕ ಹಕ್ಕುಗಳ ಮೇಲೆ ಬಿಜೆಪಿ–ಆರೆಸ್ಸೆಸ್ ಬುಲ್‌ಡೋಜರ್ ಹರಿಸಲು ಬಿಡುವುದಿಲ್ಲ ಎಂದು ಎಚ್ಚರಿಕೆ ಕೊಟ್ಟರು.

ದೇಶದ ರಾಜಧಾನಿ ದಿಲ್ಲಿಯೂ ಸೇರಿದಂತೆ ದೇಶದ ಹಲವೆಡೆ ನಡೆಯುತ್ತಿರುವ ಬುಲ್‌ಡೋಜರ್ ರಾಜಕೀಯದ ವಿರುದ್ಧ ಎಡಪಕ್ಷಗಳ ಕರೆಯ ಮೇರೆಗೆ ದಿಲ್ಲಿಯ ಜಂತರ್ ಮಂತರ್‌ನಲ್ಲಿ ಧರಣಿಯ ನಂತರ ದಿಲ್ಲಿಯ ಉಪರಾಜ್ಯಪಾಲರ ನಿವಾಸದ ವರೆಗೆ 'ನಾಗರಿಕ ಜಾಥಾ' ನಡೆಯಿತು. ಇದರಲ್ಲಿ ಎಡಪಕ್ಷಗಳ ಕಾರ್ಯಕರ್ತರಲ್ಲದೆ ದಿಲ್ಲಿಯ ಸಾವಿರಾರು ನಾಗರಿಕರೂ ಭಾಗವಹಿಸಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಆರೆಸ್ಸೆಸ್–ಬಿಜೆಪಿ ಮಾಡಿರುವ ದುಷ್ಟಕಾರ್ಯದಿಂದ ಅದೆಷ್ಟೋ ಶ್ರಮಜೀವಿಗಳ ಬದುಕಿನ ಹೊಟ್ಟೆ ಮೇಲೆ ತಣ್ಣೀರ ಬಟ್ಟೆ ಹಾಕಿದಂತಾಗಿದೆ. ದಿಲ್ಲಿಯ ದುಡಿಯುವ ಜನಗಳ ಜೀವನೋಪಾಯಗಳ ಮೇಲೆ ಹರಿಯುವ ಆರೆಸ್ಸೆಸ್–ಬಿಜೆಪಿ ಬುಲ್‌ಡೋಜರ್ ಅವರ ಬಂಟರು ಮತ್ತು ಮೇಲ್ವರ್ಗಗಳ ಮಂದಿಯ ಒತ್ತುವರಿಗಳ ಎದುರು ಗಕ್ಕನೇ ನಿಂತುಬಿಡುತ್ತದೆ. ಮುಂಬರುವ ದಿನಗಳಲ್ಲಿ ಕಾರ್ಮಿಕರು ಆರೆಸ್ಸೆಸ್–ಬಿಜೆಪಿಯವರಿಗೆ ಒಗ್ಗಟ್ಟಿನಿಂದ ಇದಕ್ಕೆ ಸರಿಯಾದ ಪ್ರತ್ಯುತ್ತರ ನೀಡಲಿದ್ದಾರೆ ಎಂದು ಜಾಥಾದಲ್ಲಿ ಭಾಗವಹಿಸಿದ್ದ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯೆ ಬೃಂದ ಕಾರಟ್ ಹೇಳಿದರು.

ಜಾಥಾದಲ್ಲಿ ಭಾಗವಹಿಸಿದ್ದ ಸುಚೇತಾ ಡೇ (ಸಿಪಿಐ–ಎಂಎಲ್), ಅಮರ್‌ಜೀತ್ ಕೌರ್(ಸಿಪಿಐ), ಬಿನೋಯ್ ವಿಶ್ವಮ್ (ರಾಜ್ಯಸಭಾ ಸದಸ್ಯ), ಶತ್ರುಜೀತ್ (ಆರ್‌ಎಸ್‌ಪಿ), ಮತ್ತು ಬಿರ್ಜು ನಾಯಕ್ (ಸಿಜಿಪಿಐ) ಅವರುಗಳು ಸಹ ಮಾತನಾಡಿದರು. ದಿನೇಶ್ ವಾರ್ಶ್ನೇ ಪ್ರತಿಭಟನಾ ಧರಣಿಯ ಅಧ್ಯಕ್ಷತೆ ವಹಿಸಿದ್ದರು. ಈ ಎಡಪಕ್ಷಗಳಲ್ಲದೆ, 43 ಇತರ ಸಾರ್ವಜನಿಕ ಸಂಸ್ಥೆಗಳೂ ಸಹ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದವು.



ಜಹಾಂಗೀರ್‌ಪುರದಲ್ಲಿ ಆರಂಭವಾದ ಬುಲ್‌ಡೋಜರ್ ಕಾರ್ಯಾಚರಣೆಯಲ್ಲಿ ನಷ್ಟ ಅನುಭವಿಸಿದವರು ಕಾರ್ಮಿಕ ವರ್ಗದ ಜನಗಳು ಮಾತ್ರ. ಆರೆಸ್ಸೆಸ್–ಬಿಜೆಪಿ ಬುಲ್‌ಡೋಜರ್‌ಗಳ ಮೂಲಕ ತನ್ನ ಕೋಮುವಾದಿ ರಾಜಕೀಯವನ್ನು ಗಟ್ಟಿಗೊಳಿಸಲು ಪ್ರಯತ್ನಿಸುತ್ತಿದೆ. ಜನಸಾಮಾನ್ಯರ ಗೋಣು ಮುರಿಯುವ ವಿಪರೀತ ಬೆಲೆಯೇರಿಕೆ, ಹಣದುಬ್ಬರ ಮತ್ತು ನಿರುದ್ಯೋಗವನ್ನು ತಡೆಗಟ್ಟಲಾರದ ಶೋಚನೀಯ ವಿಫಲತೆಯಿಂದ ಜನಗಳ ಗಮನವನ್ನು ಬೇರೆಡೆಗೆ ತಿರುಗಿಸಲು ಮೋದಿ ಸರಕಾರ ಇಂತಹ ಸಂವಿಧಾನ ಬಾಹಿರ ಕೆಲಸಕ್ಕಿಳಿದಿದೆ ಎಂದು ಭಾಷಣಕಾರರು ಹೇಳಿದರು.

ರಾಷ್ಟ್ರ ರಾಜಧಾನಿ ದೆಹಲಿಯ ಜಹಾಂಗೀರ್‌ಪುರಿಯ ಅಕ್ರಮ ಕಟ್ಟಡಗಳ ನೆಲಸಮ ಹೆಸರಿನಲ್ಲಿ ಆರಂಭಿಸಿದ ಬುಲ್‌ಡೋಜರ್ ಕಾರ್ಯಾಚರಣೆ ಸುಪ್ರೀಂ ಕೋರ್ಟ್ ತಡೆ ನೀಡಿದ ನಂತರವೂ ಮುಂದುವರೆದಾಗ ಬೃಂದಾ ಕಾರಟ್ ಬುಲ್‌ಡೋಜರ್ ಮುಂದೆ ನಿಂತು ಸುಪ್ರೀಂ ಕೋರ್ಟ್ ಆದೇಶದ ಪ್ರತಿಯನ್ನು ಪ್ರದರ್ಶಿಸಿದಾಗ ಅವರೊಂದಿಗೆ ಜಹಾಂಗೀರ್‌ಪುರಿಯ ಸ್ಥಳೀಯರೂ ಕೂಡ ಜೆಸಿಬಿಯ ಯಂತ್ರಕ್ಕೆ ಅಡ್ಡಲಾಗಿ ನಿಂತಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಹಾಗೆಯೇ ಮೇ 11ರಂದು ಕೂಡ ಎಡಪಕ್ಷಗಳ ನೇತೃತ್ವದ ಪ್ರತಿಭಟನೆಯಲ್ಲಿ ಸಾವಿರಾರು ದಿಲ್ಲಿ ನಾಗರಿಕರು ದನಿಗೂಡಿಸಿದರು.

ಸಿಪಿಐ(ಎಂ)ನ ದಿಲ್ಲಿ ರಾಜ್ಯ ಸಮಿತಿ ಈಶಾನ್ಯ ದಿಲ್ಲಿಯ ಕೋಮು ಹಿಂಸಾಚಾರದ ಅನುಭವದಿಂದ ಪಾಠ ಕಲಿತು, ಜಹಾಂಗೀರ್‌ಪುರಿಯಲ್ಲಿ ಈ ಬಾರಿ ಆರೆಸ್ಸೆಸ್–ಬಿಜೆಪಿ ಅಜೆಂಡಾದ ಆಟ ನಡೆಯದಂತೆ ನೋಡಿಕೊಂಡಿತು.

ಏಪ್ರಿಲ್ 20 ರಂದು ಬೆಳಿಗ್ಗೆ 10.45 ಕ್ಕೆ ಸುಪ್ರಿಂ ಕೋರ್ಟ್ ಆದೇಶದ ನಂತರವೂ ನೆಲಸಮ ಕಾರ್ಯಾಚರಣೆ 12.15ರ ವರೆಗೂ ಮುಂದುವರೆದದ್ದು ಮೇಲ್ನೋಟಕ್ಕೆ ನ್ಯಾಯಾಲಯದ ನಿಂದನೆಯಾಗಿತ್ತು. ಇದಕ್ಕೆ ಸಂಬಂಧಪಟ್ಟಂತೆ, ಮರುದಿನ, ಏಪ್ರಿಲ್ 21ರಂದು 17 ಸಿಪಿಐ(ಎಂ) ಸದಸ್ಯರು ಮೂರು ವಿಭಿನ್ನ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಮೂರು ತಂಡಗಳನ್ನು ರಚಿಸಿಕೊಂಡರು. ಒಂದು ತಂಡ ಹನುಮಜಯಂತಿಯ ದಿನದ ಕಾನೂನುಬಾಹಿರ ಮೆರವಣಿಗೆಯ ವಿವರಗಳನ್ನು ಕಲೆ ಹಾಕಿತು. ಎರಡನೇ ತಂಡ ಪೋಲೀಸರು ಬಂಧಿಸಿದವರ ಕುಟುಂಬಗಳ ಸದಸ್ಯರನ್ನು ಭೇಟಿ ಮಾಡಿತು. ಮೂರನೇ ತಂಡ ಉತ್ತರ ದಿಲ್ಲಿ ಮಹಾನಗರ ಪಾಲಿಕೆ ನಡೆಸಿದ ನೆಲಸಮ ಕೆಲಸದ ಸಮೀಕ್ಷೆಯನ್ನು ಕೈಗೆತ್ತಿಕೊಂಡಿತು.

ಸಮಾಜದ ಅತ್ಯಂತ ಅಸಹಾಯಕ ಮತ್ತು ದುರ್ಬಲ ವಿಭಾಗಗಳ ಮೇಲೆಯೇ ವಿಧ್ವಂಸಕ ದಾಳಿಗಳನ್ನು ನಡೆಸಲಾಗಿದೆ ಎಂಬುದು ಆರಂಭದಿಂದಲೇ ಸ್ಪಷ್ಟವಾಗಿತ್ತು. ಜಹಾಂಗೀರಪುರಿಯಲ್ಲಿ ಕನಿಷ್ಠ 125 ಕುಟುಂಬಗಳ ಜೀವನೋಪಾಯದ ಮೇಲೆ ನೇರ ದಾಳಿ ನಡೆದಿದೆ ಎಂದು ಸಮೀಕ್ಷೆಯಿಂದ ಇನ್ನಷ್ಟು ಸ್ಪಷ್ಟವಾಯಿತು. ಇವರೆಲ್ಲ ತರಕಾರಿಗಳು, ಹಣ್ಣುಗಳು, ಮೊಬೈಲ್ ಬಿಡಿಭಾಗಗಳು ಇತ್ಯಾದಿಗಳನ್ನು ಮಾರುವವರು ಮತ್ತು ಆಹಾರ ಮಳಿಗೆಗಳನ್ನು ನಡೆಸುತ್ತಿರುವವರು ಮತ್ತು ಕಸ ಸಂಗ್ರಹಣೆಯಲ್ಲಿ ತೊಡಗಿರುವ ಅತ್ಯಂತ ಬಡ ವಿಭಾಗಗಳ ಕುಟುಂಬಗಳಿಗೆ ಸೇರಿದವರು. ಹಲವರು ತಳ್ಳುಗಾಡಿಗಳಲ್ಲಿ ಮಾರಾಟದ ಪ್ರಮಾಣಪತ್ರಗಳನ್ನೂ ಹೊಂದಿದ್ದವರು. ಇವರ ಮೇಲೆ ಹಗೆ ಸಾಧಿಸಲೆಂದೇ ಅವರ ಜೀವನೋಪಾಯಗಳ ಮೇಲೆಯೇ ಗುರಿಯಿಟ್ಟು ಈ ಕಾರ್ಯಾಚರಣೆಯನ್ನು ಯೋಜಿಸಲಾಗಿತ್ತು ಎಂಬುದು ಸ್ಪಷ್ಟವಾಗಿ ಕಾಣುತ್ತಿತ್ತು. ಅಂದೇ ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಈ ಕುಟುಂಬಗಳಿಗೆ ಹಣಕಾಸು ನೆರವು ಸಂಗ್ರಹಿಸುವ ಕರೆ ನೀಡಿತು.

ಮುಂದಿನ ಮೂರು ದಿನಗಳ ಕಾಲ ಸಿ.ಪಿ.ಐ.(ಎಂ) ಕಾರ್ಯಕರ್ತರು 100 ಕ್ಕೂ ಹೆಚ್ಚು ಕುಟುಂಬಗಳನ್ನು ಅವರಿಗಾದ ನಷ್ಟದ ಅಂದಾಜು ಮಾಡಲು ಸಂಪರ್ಕಿಸಿತು. ಅವರಲ್ಲಿ ಹಲವರು ಸರಕಾರ ಮತ್ತು ನ್ಯಾಯಾಲಯಗಳಿಂದ ನ್ಯಾಯಕ್ಕಾಗಿ ಹೋರಾಡುವ ಸ್ಥಿತಿಯಲ್ಲಿಲ್ಲ ಎಂದು ತಿಳಿಯಿತು. ಆದ್ದರಿಂದ ಎಪ್ರಿಲ್ 26ರಂದು ಸುಮಾರು 50 ಕುಟುಂಬಗಳಿಗೆ ಆಹಾರ ಪೊಟ್ಟಣಗಳನ್ನು ಹಂಚಲು ಯೋಜನೆ ಹಾಕಲಾಯಿತು. ಪ್ರತಿ ಪೊಟ್ಟಣದಲ್ಲಿ 10 ಕೆಜಿ ಅಕ್ಕಿ, 1 ಕೆಜಿ ಬೇಳೆ, 1 ಕೆಜಿ ಸಾಸಿವೆ ಎಣ್ಣೆ, ಉಪ್ಪು, ಮಸಾಲೆ ಸಾಮಾನುಗಳು, 1 ಕೆಜಿ ಸಕ್ಕರೆ, ಚಹಾಪುಡಿ, 2 ಕೆಜಿ ಆಲೂಗೆಡ್ಡೆ ಮತ್ತು 2 ಕೆಜಿ ಈರುಳ್ಳಿ ಇದ್ದವು. ನಂತರ ಇಂತಹ, ಆಹಾರವೂ ಸಿಗದ ಹಲವು ಕುಟುಂಬಗಳಿದ್ದಾವೆ ಎಂದು ತಿಳಿದು ಬಂತು. ಈದ್‌ನ ಹಿಂದಿನ ದಿನ 80 ಕುಟುಂಬಗಳಿಗೆ ಆಹಾರ ಪೊಟ್ಟಣಗಳನ್ನು ಹಂಚುವ ಜೊತೆಗೆ 50 ತಳ್ಳುಗಾಡಿಗಳಿಗೆ ವ್ಯವಸ್ಥೆ ಮಾಡಲಾಯಿತು. ಈದ್‌ನ ಮರುದಿನ ಮತ್ತೆ 30 ತಳ್ಳುಗಾಡಿಗಳಿಗೆ ವ್ಯವಸ್ಥೆ ಮಾಡಲಾಯಿತು. ಅದನ್ನು ಮೇ 5ರ ವೇಳೆಗೆ ಹಂಚಲಾಯಿತು.

ಮೇ 5ರ ವರೆಗೆ 125 ಸಮೀಕ್ಷೆ ಫಾರಂಗಳು ಸಿಪಿಐ(ಎಂ) ಸಮೀಕ್ಷೆ ತಂಡದ ಕೈಸೇರಿವೆ. ನೆರವು ಅಗತ್ಯವಾಗಿರುವ ಇನ್ನೂ ಕೆಲವು ಕುಟುಂಬಗಳಿವೆ ಎಂದು ಕಾಣುತ್ತದೆ. ಈ ಎಲ್ಲ ಕುಟುಂಬಗಳಿಗೆ ನೆರವು ತಲುಪಿಸಲು ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಪ್ರಯತ್ನಿಸುತ್ತಿದೆ. ಈ ನಡುವೆ ಆರೆಸ್ಸೆಸ್–ಬಿಜೆಪಿ ಈ ಬುಲ್‌ಡೋಜರ್ ರಾಜಕೀಯವನ್ನು ದಿಲ್ಲಿಯ ಇತರ ಭಾಗಳಿಗೂ ವಿಸ್ತರಿಸಲು ಪ್ರಯತ್ನಿಸುತ್ತಿದೆ.

ಎಪ್ರಿಲ್ 28 ರಂದು ಎಡಪಕ್ಷಗಳು ಇದರ ವಿರುದ್ಧ ಧರಣಿ ಪ್ರತಿಭಟನೆ ಸಂಘಟಿಸಿದವು. ಇದರಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಸಿಪಿಐ ರಾಷ್ಟ್ರೀಯ ಕಾರ್ಯದರ್ಶಿ ಅಮರ್‌ಜಿತ್ ಕೌರ್, ಸಿಪಿಐ(ಎಂಎಲ್)–ಲಿಬರೇಷನ್ ಪೊಲಿಟ್‌ಬ್ಯುರೊ ಸದಸ್ತೆ ಕವಿತಾ ಕೃಷ್ಣನ್, ಮತ್ತು ಇತರ ಮುಖಂಡರು ಮಾತನಾಡಿದರು.

ಜಹಾಂಗೀರ್‌ಪುರಿಯಲ್ಲಿ ನೆಲಸಮ ಮಾಡುವ ಧಾವಂತ ಈ ಪ್ರದೇಶದಲ್ಲಿ ಹನುಮ ಜಯಂತಿಯ ಹೆಸರಲ್ಲಿ ಶಸ್ತ್ರಧಾರೀ ಮೆರವಣಿಗೆಯ ಮೂಲಕ ಕೋಮು ಸಾಮರಸ್ಯವನ್ನು ಛಿದ್ರಗೊಳಿಸುವ ಹಿಂದುತ್ವ ಶಕ್ತಿಗಳ ಪ್ರಯತ್ನದ ಮುಂದುವರಿಕೆಯಾಗಿದೆ. ಅವರು ಬುಲ್‌ಡೋಜರುಗಳು ಹರಿಸುತ್ತಿರುವುದು ಕಾರ್ಮಿಕ ವರ್ಗದ ಕುಟುಂಬಗಳ ಅಲ್ಪ–ಸ್ವಲ್ಪ ಸೊತ್ತುಗಳ ಮೇಲಷ್ಟೇ ಅಲ್ಲ, ಭಾರತೀಯ ಪ್ರಜಾಪ್ರಭುತ್ವದ ಮೂಲ ಹಂದರದ ಮೇಲೆಯೇ ಎಂದು ಭಾಷಣಕಾರರು ಈ ಪ್ರತಿಭಟನೆಯಲ್ಲಿ ಹೇಳಿದರು.





ಯುದ್ಧ ಮತ್ತು ಆಹಾರ ಸಾರ್ವಭೌಮತೆ

ಸ್ವಾತಂತ್ರ್ಯವೆಂದರೆ ಆಹಾರ ಸ್ವಾವಲಂಬನೆಯೇ ಎಂಬ ಸರಳ ಸತ್ಯವನ್ನು ಎಲ್ಲೆಡೆ ಜರುಗಿದ ವಸಾಹತುಶಾಹಿ-ವಿರೋಧಿ ಹೋರಾಟಗಳು ಅರ್ಥಮಾಡಿಕೊಂಡಿದ್ದವು. ಪ್ರತಿಯೊಂದು ದೇಶದೊಳಗೂ ಅಲ್ಲದಿದ್ದರೂ, ಕನಿಷ್ಠ ಪಕ್ಷ ಮೂರನೇ ಜಗತ್ತಿನ ದೇಶಗಳ ಗುಂಪಿನ "ಆಹಾರ ಸಮುದಾಯ"ದ ಕನಿಷ್ಠ ಬಳಕೆಯ ಮಟ್ಟವನ್ನು ತಲುಪುವತ್ತ ಅವು ಶ್ರಮಿಸಿದವು. ಆದರೆ ಈ ಗುರಿಯನ್ನು ತ್ಯಜಿಸುವಂತೆ ಸಾಮ್ರಾಜ್ಯಶಾಹಿಯು ಭಾರತವೂ ಸೇರಿದಂತೆ ಈ ದೇಶಗಳ ಮೇಲೆ ಒತ್ತಡ ಹಾಕುತ್ತಲೇ ಬಂದಿದೆ. ಆಫ್ರಿಕಾದ ದೇಶಗಳು ಈ ಒತ್ತಡಕ್ಕೆ ತಲೆಬಾಗಿ ಈಗ ಅದಕ್ಕೆ ಬೆಲೆ ತೆರುತ್ತಿವೆ. ಭಾರತ ತನ್ನ "ಆಹಾರ ಸಾರ್ವಭೌಮತೆ"ಯನ್ನು ಹಲವು ನ್ಯೂನ್ಯತೆಗಳ ನಡುವೆಯೂ ಕಾಯ್ದುಕೊಂಡು ಬಂದಿತ್ತು. ಆದರೆ ಮೋದಿ ಸರಕಾರ ಇಂತಹ ಸಾರ್ವಭೌಮತೆಯ ಬೆನ್ನೆಲುಬಾದ ಕನಿಷ್ಠ ಬೆಂಬಲ ಬೆಲೆ ಕ್ರಮವನ್ನು ಹಿಂತೆಗೆದುಕೊಳ್ಳುವ ಕೃಷಿ ಶಾಸನಗಳನ್ನು ತಂದು ತಲೆಬಾಗಲು ಮುಂದಾಯಿತು. ಆದರೆ, ಅವನ್ನು ಹಿಂತೆಗೆದುಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾದ ಧೀರೋಧಾತ್ತ ಐಕ್ಯ ಕಿಸಾನ್ ಆಂದೋಲನವು ಸದ್ಯಕ್ಕೆ ನಮ್ಮ "ಆಹಾರ ಸಾರ್ವಭೌಮತ್ವ"ವನ್ನು ಸಂರಕ್ಷಿಸಿದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ರಷ್ಯಾ ಮತ್ತು ಉಕ್ರೇನ್ ಎರಡೂ ದೇಶಗಳೂ ಸೇರಿ ವಿಶ್ವದ ಒಟ್ಟು ಗೋಧಿ ರಫ್ತಿನಲ್ಲಿ ಶೇ. 30ರಷ್ಟು ಪಾಲನ್ನು ಹೊಂದಿವೆ. ಅನೇಕ ಆಫ್ರಿಕನ್ ದೇಶಗಳು ತಮ್ಮ ಆಹಾರ ಧಾನ್ಯಗಳ ಪೂರೈಕೆಗಾಗಿ ಈ ಎರಡೂ ದೇಶಗಳನ್ನೇ ಅವಲಂಬಿಸಿವೆ. ರಷ್ಯಾ–ಉಕ್ರೇನ್ ದೇಶಗಳ ನಡುವಿನ ಯುದ್ಧದಿಂದಾಗಿ ಆಹಾರ ಧಾನ್ಯಗಳ ಸರಬರಾಜು ಅಸ್ತವ್ಯಸ್ತಗೊಂಡಿದೆ. ಅಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುವ ಪ್ರದೇಶಗಳಲ್ಲಿ ಬಿತ್ತುವ ಚಟುವಟಿಕೆಗಳ ಮೇಲೂ ಯುದ್ಧವು ಪರಿಣಾಮ ಬೀರುತ್ತಿರುವುದರಿಂದ ಧಾನ್ಯಗಳ ಸರಬರಾಜಿನ ಈ ಅಡಚಣೆ ಮುಂದುವರಿಯುತ್ತದೆ. ವಿಶ್ವದ ಮೆಕ್ಕೆಜೋಳ ರಫ್ತಿನಲ್ಲಿ ಉಕ್ರೇನ್ ಒಂದೇ ಶೇ.20 ರಷ್ಟು ಪಾಲು ಹೊಂದಿದೆ ಮತ್ತು ಮೆಕ್ಕೆಜೋಳವನ್ನು ಆಮದು ಮಾಡಿಕೊಳ್ಳುತ್ತಿದ್ದ ಹಲವಾರು ದೇಶಗಳಲ್ಲಿ ಈಗ ಆಹಾರದ ಕೊರತೆ ಎದುರಾಗಿದೆ. ಜೊತೆಗೆ, ಹಲವಾರು ದೇಶಗಳಿಗೆ ರಸಗೊಬ್ಬರ ಪೂರೈಕೆಯ ಮೂಲವಾಗಿದ್ದ ರಷ್ಯಾದಿಂದ ರಸಗೊಬ್ಬರ ಆಮದಿನ ಅಡಚಣೆಯಿಂದಾಗಿ ಜಾಗತಿಕ ಆಹಾರ ಬೆಲೆಗಳು ತೀವ್ರವಾಗಿ ಏರುತ್ತಿವೆ ಮತ್ತು ಲಭ್ಯತೆಯೂ ಸಹ ಇಳಿಕೆಯಾಗಿದೆ.

ರಷ್ಯಾ–ಉಕ್ರೇನ್ ಯುದ್ಧ ಆರಂಭವಾದ ಫೆಬ್ರವರಿ ತಿಂಗಳಲ್ಲಿದ್ದ ಪರಿಸ್ಥಿತಿಗೆ ಹೋಲಿಸಿದರೆ, ಏಪ್ರಿಲ್ 8ರ ಹೊತ್ತಿಗೆ ಆಹಾರ ಧಾನ್ಯಗಳ ಬೆಲೆಗಳು ಶೇ. 17ರಷ್ಟು ಹೆಚ್ಚಾಗಿವೆ. ಇದರಿಂದಾಗಿ ಲಕ್ಷಾಂತರ ಜನರು ಆಹಾರದ ಅಭಾವಕ್ಕೆ ಒಳಗಾಗುತ್ತಾರೆ. ಮುಂಬರುವ ದಿನಗಳಲ್ಲಿ ಆಹಾರದ ಅಭಾವಕ್ಕೆ ಒಳಗಾದವರ ಸಂಖ್ಯೆ ಮತ್ತಷ್ಟು ದೊಡ್ಡದಾಗುತ್ತದೆ. ಯೆಮನ್, ಇಥಿಯೋಪಿಯಾ, ಸೊಮಾಲಿಯಾ, ಸುಡಾನ್, ದಕ್ಷಿಣ ಸುಡಾನ್, ನೈಜೀರಿಯಾ, ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋ ಮತ್ತು ಅಫ್ಘಾನಿಸ್ತಾನದಂತಹ ಅನೇಕ ದೇಶಗಳು ಆಹಾರದ ಅಭಾವಕ್ಕೆ ಒಳಗಾಗುವ ಸಾಧ್ಯತೆಯ ಬಗ್ಗೆ ತಜ್ಞರು ಕೆಲವು ದಿನಗಳ ಹಿಂದೆಯೇ ಎಚ್ಚರಿಕೆ ನೀಡಿದ್ದಾರೆ. ಯುದ್ಧ ನಡೆಯುತ್ತಿರುವ ನಿಜ ರಣಭೂಮಿಯಲ್ಲಿ ಜೀವಹಾನಿಯಾಗುವ ಬಗ್ಗೆ ಹೆಚ್ಚಿನ ಕಾಳಜಿ ಇದೆಯಾದರೂ, ಈ ರಣಭೂಮಿಯಿಂದ ಅತಿ ದೂರವಿರುವ ದೇಶಗಳಲ್ಲಿ ಆಹಾರದ ಅಭಾವದಿಂದಾಗಿ ಉಂಟಾಗುವ ಜೀವಹಾನಿಯ ಅಪಾಯದ ಬಗ್ಗೆ ವಿಶ್ವದ, ಅದರಲ್ಲೂ ವಿಶೇಷವಾಗಿ ಪಶ್ಚಿಮದ ದೇಶಗಳ ಗಮನ ಹರಿದಿರುವುದು ವಿರಳವೇ.

ಈ ಎಲ್ಲ ಚರ್ಚೆಗಳಲ್ಲಿ ಒಂದು ಬಹಳ ಮುಖ್ಯವಾದ ಪ್ರಶ್ನೆಯನ್ನೇ ಕೇಳಲಾಗಿಲ್ಲ: ಆಹಾರ ಧಾನ್ಯಗಳ ಸರಬರಾಜಿನಲ್ಲಿ ಯಾವುದೇ ಅಡಚಣೆ ಉದ್ಭವವಾದರೂ, ತಕ್ಷಣವೇ ಕೆಲವೇ ಕೆಲವು ದೇಶಗಳು ಮಾತ್ರ ಆಹಾರದ ಅಭಾವಕ್ಕೂ ಮತ್ತು ಭಾರಿ ಪ್ರಮಾಣದ ಜೀವಹಾನಿಗೂ ಏಕೆ ಒಳಗಾಗುತ್ತವೆ? ಸಂಕ್ಷಿಪ್ತವಾಗಿ ಹೇಳುವುದಾದರೆ, 'ಅಭಾವಕ್ಕೆ ಪಕ್ಕಾಗುವ ದೇಶಗಳು' ಎಂಬುದು ಇರುವುದಾದರೂ ಏಕೆ?

ಈ ಪ್ರಶ್ನೆಗೆ ತಕ್ಷಣವೇ ದೊರಕುವ ಉತ್ತರವೆಂದರೆ, ಈ ದೇಶಗಳು ಸ್ವತಃ ಯುದ್ಧಗಳಿಂದ ಬಾಧಿತವಾಗಿರುವ ದೇಶಗಳು. ಅದು ಅಫ್ಘಾನಿಸ್ತಾನವೇ ಇರಲಿ, ಸುಡಾನ್ ಇರಲಿ ಅಥವಾ ಆಫ್ರಿಕಾದ ಕೊಂಬು ಎಂದು ಕರೆಯುವ ಪ್ರದೇಶದ ದೇಶಗಳೇ ಇರಲಿ, ಅಲ್ಲಿನ ಯುದ್ಧಗಳ ಇತಿಹಾಸವು ವರ್ತಮಾನದ ವರೆಗೂ ವಿಸ್ತರಿಸಿದೆ ಮತ್ತು ಈ ಕಾರಣದಿಂದಾಗಿಯೇ ಈ ದೇಶಗಳು ಧಾನ್ಯಗಳ ಸರಬರಾಜಿನ ಅಡಚಣೆಗೆ, ಆಹಾರದ ಅಭಾವಕ್ಕೆ ಮತ್ತು ಭಾರಿ ಪ್ರಮಾಣದ ಜೀವಹಾನಿಗೆ ಒಳಗಾಗುತ್ತವೆ. ಆದರೆ, ಈ ವಿವರಣೆಯು ಸಮರ್ಪಕವಲ್ಲ: ಇಂದಿನ ಸಂದರ್ಭದಲ್ಲಿ, ಯುದ್ಧವೆಂದರೆ ಅದು ಆಂತರಿಕ ದಂಗೆಯನ್ನೋ ಅಥವಾ ಭಯೋತ್ಪಾದನೆಯನ್ನೋ ಒಳಗೊಂಡಿರಬೇಕಾಗುತ್ತದೆ. ಈ ವಿವರಣೆಯು ಎರಡು ಪ್ರಶ್ನೆಗಳನ್ನು ಎತ್ತುತ್ತದೆ: ಮೊದಲನೆಯದು, ಬಂಡಾಯವನ್ನೇ ಹೊರಗಿನಿಂದ ಪ್ರೇರಿತವಾದ ಒಂದು ವಿದ್ಯಮಾನವೆಂದು ಭಾವಿಸಲಾಗದು. ಇದು ಬಡತನ ಮತ್ತು ಆಹಾರ ಅಲಭ್ಯತೆಯ ವಿದ್ಯಮಾನಗಳೊಂದಿಗೆ ಎಷ್ಟು ಆಳವಾಗಿ ಬೇರೂರಿದೆ ಮತ್ತು ಸಂಬಂಧಿಸಿದೆ ಎಂದರೆ, ಆಹಾರ ಅಲಭ್ಯತೆಯ ವಿದ್ಯಮಾನವನ್ನು ಸ್ವತಂತ್ರವಾಗಿ ವಿವರಿಸುವುದು ಸಾಧ್ಯವಿಲ್ಲ. ಎರಡನೆಯದು, ಬಂಡೇಳುವುನ್ನೂ ಸಹ ಒಳಗೊಂಡ ಸಮಗ್ರ ಅರ್ಥದಲ್ಲಿ ನೋಡುವುದಾದರೆ, ಯುದ್ಧಗಳು ಇಡೀ ಮೂರನೇ ಜಗತ್ತಿನ ದೇಶಗಳ ಒಂದು ವಾಸ್ತವಿಕ ಲಕ್ಷಣವೇ ಆಗಿವೆ. ಹಾಗಿರುವಾಗ, ಕೆಲವು ದೇಶಗಳನ್ನು ಮಾತ್ರ ಅಭಾವಕ್ಕೆ ಪಕ್ಕಾಗುವ ದೇಶಗಳು, ಇತರ ದೇಶಗಳನ್ನು ಅಲ್ಲ, ಎಂದು ಏಕೆ ಪರಿಗಣಿಸಲಾಗುತ್ತದೆ?

ಕೆಲವು ದೇಶಗಳನ್ನು ಮಾತ್ರ, ಇತರ ದೇಶಗಳನ್ನಲ್ಲ, ಅಭಾವಕ್ಕೆ ಪಕ್ಕಾಗುವ ದೇಶಗಳು ಎಂದು ಏಕೆ ಪರಿಗಣಿಸಲಾಗುತ್ತದೆ ಎಂಬ ಪ್ರಶ್ನೆಗೆ ನಿಜ ಉತ್ತರವು, ಈ ದೇಶಗಳು ಸಾಮ್ರಾಜ್ಯಶಾಹಿಯ ಕೋರಿಕೆಯ ಮೇರೆಗೆ ತಮ್ಮ "ಆಹಾರ ಸಾರ್ವಭೌಮತೆ"ಯನ್ನು ತ್ಯಜಿಸಿದವು ಎಂಬ ಅಂಶದಲ್ಲಿದೆ. ವಸಾಹತುಶಾಹಿಗಳು ನಿರ್ಗಮಿಸಿದ ನಂತರ, ಅವರ ಆಳ್ವಿಕೆಯ ಅವಧಿಯಲ್ಲಿ ಆಹಾರ ಧಾನ್ಯಗಳ ತಲಾ ಉತ್ಪಾದನೆಯಲ್ಲಿ ಮತ್ತು ತಲಾ ಲಭ್ಯತೆಯಲ್ಲಿ ತೀವ್ರ ಕುಸಿತವನ್ನು ಕಂಡಿದ್ದ ಮೂರನೇ ಜಗತ್ತಿನ ಬಹುತೇಕ ದೇಶಗಳು, ಆಹಾರ ಧಾನ್ಯಗಳ ಆಂತರಿಕ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದವು. ಆಹಾರಧಾನ್ಯಗಳ ಈ ಆಂತರಿಕ ಉತ್ಪಾದನೆಯನ್ನು ಮತ್ತು ಲಭ್ಯತೆಯ ಸಾಧನೆಯನ್ನು ನಿರ್ವಸಾಹತೀಕರಣದ ಒಂದು ಅಗತ್ಯ ಪ್ರತಿರೂಪವೆಂದು ಪರಿಗಣಿಸಲಾಯಿತು. ಅದು ಸರಿಯೂ ಹೌದು. ಆದರೂ, ಈ ಕ್ರಮವನ್ನು ಸಾಮ್ರಾಜ್ಯಶಾಹಿಯು ಪ್ರತಿರೋಧಿಸಿತು ಮತ್ತು ನಿಜವಲ್ಲದ "ಒಂದು ತುಲನಾತ್ಮಕ ಪ್ರಯೋಜನ"ದ ಆಧಾರದ ಮೇಲೆ, ಆಹಾರ ಸ್ವಾವಲಂಬನೆಯ ಅನ್ವೇಷಣೆಯನ್ನು ಕೈಬಿಡುವಂತೆ ಮೂರನೇ ಜಗತ್ತಿನ ದೇಶಗಳಿಗೆ "ಸಲಹೆ" ನೀಡಿದ್ದೂ ಅಲ್ಲದೆ, ಈ ಕೋರಿಕೆಯ ಅಂಶವನ್ನು ವಿಶ್ವ ವ್ಯಾಪಾರ ಸಂಘಟನೆಯ ಕಾರ್ಯಸೂಚಿಯಲ್ಲೂ ಸೇರಿಸಿತು.



ವಿಶ್ವ ವ್ಯಾಪಾರ ಸಂಘಟನೆಯ ಪ್ರಕಾರವಾಗಿ, ಭೂ–ಬಳಕೆಯನ್ನು ಆಹಾರ ಸ್ವಾವಲಂಬನೆ ಸಾಧಿಸುವ ಗುರಿಗಿಂತ ಹೆಚ್ಚಾಗಿ ಮಾರುಕಟ್ಟೆ–ಸಂಕೇತಗಳ ಮೂಲಕವೇ ನಿರ್ಧರಿಸಬೇಕಾಗುತ್ತದೆ.

ಅಜ್ಜಿನ ಸುಟ್ಟಂಗೂ ಆಯ್ತು; ಭಳಿ ಕಾಯಿಸಿಕೊಂಡಂಗೂ ಆಯ್ತು

ವ´ ು ು ಂ ದ´ ು ವ´ ರಿ ದ´ ಬಂಡವಾಳಶಾಹಿ ದೇಶಗಳು ಕೆಲವು ಧಾನ್ಯಗಳನ್ನು ಮಾತ್ರ ಬೆಳೆಯುತ್ತವೆ. ಮಾತ್ರವಲ್ಲ, ಈ ಧಾನ್ಯಗಳ ಹೆಚ್ಚುವರಿ ದಾಸ್ತಾನುಗಳನ್ನು ಅವು ಸದಾಕಾಲವೂ ಹೊಂದಿರುತ್ತವೆ. ಜೊತೆಗೆ, ಈ ದೇಶಗಳು ತಾಜಾ ತರಕಾರಿಗಳು, ಹಣ್ಣುಗಳು, ಕಬ್ಬು ಬೆಳೆಗಳು, ತೈಲ–ಬೆಳೆಗಳು, ಪಾನೀಯ–ಬೆಳೆಗಳು ಮತ್ತು ಸಾಂಬಾರ ಪದಾರ್ಥಗಳಂತಹ ಉಷ್ಣವಲಯದ ಅಥವಾ ಉಪ–ಉಷ್ಣವಲಯದ ಬೆಳೆಗಳನ್ನು ಬೆಳೆಯುವುದು ಸಾಧ್ಯವಿಲ್ಲ ಅಥವಾ ಸಾಕಷ್ಟು ಪ್ರಮಾಣದಲ್ಲಿ ಅಥವಾ ವರ್ಷವಿಡೀ ಬೆಳೆಯುವುದು ಸಾಧ್ಯವಿಲ್ಲ. ಆದ್ದರಿಂದ, ಪ್ರಪಂಚದ ಉಷ್ಣ ವಲಯದ ಮತ್ತು ಉಪ–ಉಷ್ಣವಲಯದ ಭಾಗಗಳೊಂದಿಗೆ ಸರಿಸುಮಾರು ಗುರುತಿಸಿಕೊಂಡಿರುವ ಮೂರನೇ ಜಗತ್ತಿನ ದೇಶಗಳು ತಮ್ಮ ಭೂ–ಬಳಕೆಯ ಮಾದರಿಯನ್ನು ಬದಲಾಯಿಸಿಕೊಂಡದ್ದರಿಂದ ಮುಂದುವರಿದ ಬಂಡವಾಳಶಾಹಿ ದೇಶಗಳಿಗೆ ದುಪ್ಪಟ್ಟು ಲಾಭವಾಗಿದೆ: ಮೊದಲನೆಯದಾಗಿ, ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುವಂತೆ ಮೂರನೇ ಜಗತ್ತಿನ ದೇಶಗಳನ್ನು ಪುಸಲಾಯಿಸುವ ಮೂಲಕ ಈ ಬಂಡವಾಳಶಾಹಿ ದೇಶಗಳು ತಮ್ಮ ಹೆಚ್ಚುವರಿ ಆಹಾರ ಧಾನ್ಯಗಳನ್ನು ಮಾರಾಟ ಮಾಡಿ ಹಣ ಮಾಡಿಕೊಳ್ಳುತ್ತವೆ. ಎರಡನೆಯದಾಗಿ, ಈ ಮೊದಲು ಆಹಾರ ಧಾನ್ಯಗಳ ಉತ್ಪಾದನೆಗಾಗಿ ಮೀಸಲಾಗಿದ್ದ ಮೂರನೇ ಜಗತ್ತಿನ ದೇಶಗಳ ಭೂಮಿಯನ್ನು ಈಗ ಬಂಡವಾಳಶಾಹಿ ದೇಶಗಳಿಗೆ ಬೇಕಾದ ಇತರ ಬೆಳೆಗಳನ್ನು (ಜೈವಿಕ ಇಂಧನಗಳ ಉತ್ಪಾದನೆಗಾಗಿ ಬೇಕಾದ ಬೆಳೆಗಳನ್ನು) ಬೆಳೆಯಲು ಅನುವು ಮಾಡಿಕೊಡಲಾಗಿದೆ.

ಭೂ–ಬಳಕೆಯ ಮಾದರಿಯನ್ನು ಬದಲಾಯಿಸಿಕೊಳ್ಳುವಂತೆ ಸಾಮ್ರಾಜ್ಯಶಾಹಿಗಳು ಮಾಡಿದ ಕೋರಿಕೆಯನ್ನು ಆಫ್ರಿಕಾದ ದೇಶಗಳು ಮೂರನೆಯ ಜಗತ್ತಿನ ದೇಶಗಳಿಗಿಂತ ಬಹಳ ಬೇಗನೆ ಒಪ್ಪಿಕೊಂಡವು. ಹಾಗಾಗಿ, "ಅಭಾವಕ್ಕೆ ಪಕ್ಕಾಗುವ ದೇಶಗಳು" ಪಟ್ಟಿಯು ಆಫ್ರಿಕನ್ ಉದಾಹರಣೆಗಳಿಂದ ತುಂಬಿರುವುದು ಆಶ್ಚರ್ಯವಲ್ಲ. ಈ ಪಟ್ಟಿಯಲ್ಲಿ ಸ್ಥಾನ ಪಡೆದ ಎರಡು ದೇಶಗಳ ಉದಾಹರಣೆಗಳನ್ನು ತೆಗೆದುಕೊಳ್ಳೋಣ: 20 ಕೋಟಿಗೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಆಫ್ರಿಕಾದ ಅತಿ ದೊಡ್ಡ ದೇಶವಾದ ನೈಜೀರಿಯಾ ಮತ್ತು ಬಹಳ ಹಿಂದೆ ಒಇಸಿಡಿಯಿಂದ "ಉದಾರೀಕರಣದ" "ಯಶೋಗಾಥೆ" ಎಂದು ಹೊಗಳಿಸಿಕೊಂಡ ಕೀನ್ಯಾ.

ಆಹಾರ ಮತ್ತು ಕೃಷಿ ಸಂಸ್ಥೆ (ಎಫ್‌ಎಒ)) ಒದಗಿಸಿರುವ ಅಂಕಿಅಂಶಗಳ ಪ್ರಕಾರ, ನೈಜೀರಿಯಾದ ಧಾನ್ಯ ತಲಾ ಉತ್ಪಾದನಾ ಸೂಚ್ಯಂಕವು (2014–16 = 100) 1990 ರಲ್ಲಿ 129.37 ರಷ್ಟಿತ್ತು; 2019 ರಲ್ಲಿ 101.09ಕ್ಕೆ ಇಳಿಯಿತು. ಅಂದರೆ, ಕೇವಲ ಮೂರು ದಶಕಗಳ ಅವಧಿಯಲ್ಲಿ ಧಾನ್ಯ ತಲಾ ಉತ್ಪಾದನೆಯು ಶೇ.20ಕ್ಕಿಂತ ಹೆಚ್ಚು ಕುಸಿಯಿತು. ಕೀನ್ಯಾದಲ್ಲಿ, ಧಾನ್ಯ ತಲಾ ಉತ್ಪಾದನಾ ಸೂಚ್ಯಂಕವು (2014–16 = 100) 1990ರಲ್ಲಿ 132.82ರಿಂದ 2019ರಲ್ಲಿ 107.97ಕ್ಕೆ ಇಳಿಯಿತು. 1980ರ ಧಾನ್ಯ ತಲಾ ಉತ್ಪಾದನಾ ಪರಿಸ್ಥಿತಿಯೊಂದಿಗೆ ಹೋಲಿಸಿದರೆ, ಕೀನ್ಯಾ ವಿಷಯದಲ್ಲಿ, ಧಾನ್ಯ ತಲಾ ಉತ್ಪಾದನಾ ಸೂಚ್ಯಂಕವು 155.96ರಿಂದ 107.97ಕ್ಕೆ, ಅಂದರೆ ಕೇವಲ ನಾಲ್ಕು ದಶಕಗಳ ಅವಧಿಯಲ್ಲಿ ಶೇ. 30ಕ್ಕಿಂತ ಹೆಚ್ಚು ಕುಸಿತವಾಗಿದೆ! ಈ ದೇಶಗಳ ಆಹಾರ ಧಾನ್ಯಗಳ ಆಂತರಿಕ ಉತ್ಪಾದನೆಯಲ್ಲಿನ ಈ ಅಸಾಧಾರಣ ಕುಸಿತದಿಂದಾಗಿ ಅವು ಆಹಾರವನ್ನು ಆಮದು ಮಾಡಿಕೊಳ್ಳುವ ಅನಿವಾರ್ಯತೆಗೆ ಒಳಗಾದವು. ಆಹಾರದ ಆಮದುಗಳು ಈ ದೇಶಗಳನ್ನು ಅಂತಿಮವಾಗಿ ಆಹಾರದ ಅಭಾವಕ್ಕೆ ಒಳಗಾಗುವಂತೆ ಮಾಡಿವೆ.

"ತುಲನಾತ್ಮಕ ಪ್ರಯೋಜನ"ದ ಈ ಮಾತುಗಳು ಮೋಸದಿಂದ ಕೂಡಿವೆ ಎಂಬುದನ್ನು ಆಫ್ರಿಕಾದ ಈ ವಿದ್ಯಮಾನವು ಸ್ಪಷ್ಟವಾಗಿ ತೋರಿಸುತ್ತದೆ. ಈ "ತೌಲನಿಕ ಪ್ರಯೋಜನ"ದ ಪರಿಕಲ್ಪನೆಯೇ ದೋಷಪೂರಿತವಾಗಿದೆ: ದೇಶವೊಂದು ಸರಕೊಂದನ್ನು ಉತ್ಪಾದಿಸಲು ಸಾಧ್ಯವಾಗದಿದ್ದಾಗ (ವಸಾಹತುಶಾಹಿ ಕಾಲದ ವ್ಯಾಪಾರದಂತೆ), ತುಲನಾತ್ಮಕ ಪ್ರಯೋಜನವನ್ನು ವ್ಯಾಖ್ಯಾನಿಸುವುದು ಸಾಧ್ಯವೇ ಇಲ್ಲ. ವಿಭಿನ್ನವಾಗಿ ಹೇಳುವುದಾದರೆ, "ತುಲನಾತ್ಮಕ ಅನುಕೂಲ"ದ ಪ್ರಕಾರ, ವ್ಯಾಪಾರವೆಂದರೆ, ಒಂದು ದೇಶವು ತಾನು ತುಲನಾತ್ಮಕವಾಗಿ ಅಗ್ಗವಾಗಿ ಉತ್ಪಾದಿಸಿದ ವಸ್ತುವನ್ನು ರಫ್ತು ಮಾಡಬೇಕು ಮತ್ತು ಅಗ್ಗವಾಗಿ ಉತ್ಪಾದಿಸಲಾಗದ ವಸ್ತುವನ್ನು ಆಮದು ಮಾಡಿಕೊಳ್ಳಬೇಕು ಎಂಬ ಕಲ್ಪನೆಯ ಪ್ರಕಾರ, ಎಲ್ಲಾ ದೇಶಗಳೂ ವ್ಯಾಪಾರಕ್ಕೆ ಮುಂಚಿತವಾಗಿಯೇ ಎಲ್ಲಾ ಸರಕುಗಳನ್ನೂ ಉತ್ಪಾದಿಸುತ್ತವೆ ಎಂದು ಭಾವಿಸುತ್ತದೆ. ಅದರ ಜೊತೆಗೆ, ಮಾರ್ಪಡಿಸಬಹುದಾದ, ಸಂಬಂಧಿತ "ಲಭ್ಯ ಉತ್ಪಾದನಾ ಸಂಪನ್ಮೂಲಗಳ" ಮೂಲಕ "ತುಲನಾತ್ಮಕ ಪ್ರಯೋಜನ"ವು ಪ್ರವಹಿಸಿದಾಗ, (ಉದಾಹರಣೆಗೆ, ಬಂಡವಾಳ ಶೇಖರಣೆಯ ಮೂಲಕ) "ತುಲನಾತ್ಮಕ ಅನುಕೂಲ" ಪ್ರಕಾರದ ವ್ಯಾಪಾರವು ಅಂತಹ ಮಾರ್ಪಾಟನ್ನು ತಡೆಯುತ್ತದೆ ಮತ್ತು "ಬಂಡವಾಳ–ಬಡ" ಮತ್ತು ಶ್ರಮ–ಹೇರಳದ ದೇಶಕ್ಕೆ ಹಾನಿಕರವಾಗುವಂತೆ ಉತ್ಪಾದನಾ ಮಾದರಿಯನ್ನು ಸ್ಥಗಿತಗೊಳಿಸುತ್ತದೆ. "ತುಲನಾತ್ಮಕ ಪ್ರಯೋಜನ"ಕ್ಕೆ ಸಂಬಂಧಿಸಿದ ಈ ಮೂಲಭೂತ ಆಕ್ಷೇಪಣೆಗಳನ್ನು ಒಂದು ವೇಳೆ ನಿರ್ಲಕ್ಷಿಸಿ, ಈ ಸಿದ್ಧಾಂತದ ಪ್ರತಿಪಾದಕರೇ ಮಾಡಿದ ಊಹೆಗಳ ಮೇಲೆ ನಾವು ಮುಂದುವರಿದರೂ ಸಹ, "ತುಲನಾತ್ಮಕ ಪ್ರಯೋಜನ"ವನ್ನು ಅನುಸರಿಸುವ ಕ್ರಮ ಮತ್ತು ಆಹಾರ ಧಾನ್ಯಗಳಂತಹ ಅತಿ ಮುಖ್ಯವಾದ ಸರಕುಗಳ ಆಮದು–ಅವಲಂಬನೆಯು ಒಂದು ದೇಶಕ್ಕೆ ಆತ್ಮಘಾತುಕವಾಗುತ್ತದೆ. ದೇಶವೊಂದು

ಪುಟ 14 ಕ್ಕೆ

'ರಾಜದ್ರೋಹ' ಕಾನೂನನ್ನು ರದ್ದುಗೊಳಿಸಿ: ಸಿಪಿಐ(ಎಂ) ಆಗ್ರಹ........ ಪುಟ 2 ರಿಂದ

ಯ ಅಪಮೌಲ್ಯಮಾಪನವನ್ನು ನಡೆಸಿರುವುದನ್ನು ಬಲವಾಗಿ ಖಂಡಿಸುತ್ತ ಷೇರುಗಳ ಭವಿಷ್ಯದ ಕಂತುಗಳ ಈ ಪ್ರಕ್ರಿಯೆಯನ್ನು ತಕ್ಷಣವೇ ನಿಲ್ಲಿಸಲು ಪೊಲಿಟ್ ಬ್ಯೂರೋ ಕರೆ ನೀಡುತ್ತದೆ.

ಆಕ್ರೋಶಕಾರೀ ಕೋಮುವಾದಿ ಹಿಂಸಾಚಾರ

ದೇಶದ ಹಲವು ರಾಜ್ಯಗಳ ವಿವಿಧ ಭಾಗಗಳಲ್ಲಿ ಕೋಮು ಹಿಂಸಾಚಾರದ ಘಟನೆಗಳು ಹೆಚ್ಚುತ್ತಿರುವ ಬಗ್ಗೆ ಪೊಲಿಟ್ ಬ್ಯೂರೋ ಆಳವಾದ ಕಳವಳ ಮತ್ತು ಆತಂಕವನ್ನು ವ್ಯಕ್ತಪಡಿಸಿದೆ. ಈ ಘಟನೆಗಳ ಹಿಂದೆ ಒಂದು ದುಷ್ಟ ವಿಧಾನವಿದೆ. ರಾಮ ನವಮಿ ಮತ್ತು ಹನುಮ ಜಯಂತಿಯಂತಹ ಧಾರ್ಮಿಕ ಹಬ್ಬಗಳನ್ನು ಕೋಮು ಹಿಂಸಾಚಾರವನ್ನು ಪ್ರಚೋದಿಸುವ ಆಕ್ರಮಣಕಾರಿ ಶಸ್ತ್ರಧಾರೀ ಧಾರ್ಮಿಕ ಮೆರವಣಿಗೆಗಳನ್ನು ಹರಿಯಬಿಡಲು ಬಳಸಲಾಯಿತು. ಇಂತಹ ಮೆರವಣಿಗೆಗಳಿಗೆ ಮುಂಚಿತವಾಗಿ ಪ್ರಚೋದನಕಾರೀ ದ್ವೇಷಭಾಷಣಗಳು ನಡೆದಿವೆ. ಮುಸ್ಲಿಮರ ವಿರುದ್ಧ ನರಮೇಧವನ್ನು ಹರಿಯಬಿಡುವ ಕರೆ ಕೊಟ್ಟವರಿಗೆ ಶಿಕ್ಷೆಯಾಗುವುದಿಲ್ಲ, ಇದು ದ್ವೇಷ ಮತ್ತು ಹಿಂಸಾಚಾರವನ್ನು ಹರಡಲು ಅಧಿಕೃತ ಕೃಪಾಪೋಷಣೆ ಇದೆ ಎಂಬುದನ್ನು ದೃಢಪಡಿಸುತ್ತದೆ.

ದ್ವೇಷ ಭಾಷಣಗಳು ಮತ್ತು ಧರ್ಮಾಂಧತೆಯನ್ನು ಪ್ರತಿಪಾದಿಸುವ ಕ್ರಮಗಳ ವಿರುದ್ಧ ಪ್ರಧಾನಿಯವರ ಮೌನವು ಇಂತಹ ಖಾಸಗಿ ಶಸ್ತ್ರಧಾರೀ ಗುಂಪುಗಳು ಅಧಿಕೃತ ಕೃಪಾಪೋಷಣೆಯನ್ನು ಅನುಭವಿಸುತ್ತಿವೆ ಎಂಬುದಕ್ಕೆ ಇದು ಜ್ವಲಂತ ಸಾಕ್ಷಿ.

ಶಾಂತಿಯನ್ನು ಕಾಪಾಡಿಕೊಳ್ಳಬೇಕು, ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸಲು ದ್ವೇಷಭಾಷಣ ಮತ್ತು ಹಿಂಸಾಚಾರವನ್ನು ಹರಡುವವರ ಈ ದುಷ್ಟ ಉದ್ದೇಶಗಳನ್ನು ವಿಫಲಗೊಳಿಸಬೇಕು ಎಂದು ಪೊಲಿಟ್ ಬ್ಯೂರೋ ಎಲ್ಲಾ ಜನವಿಭಾಗಗಳಿಗೆ ಮನವಿ ಮಾಡುತ್ತದೆ. ಶಾಂತಿ ಮತ್ತು ಸಾಮರಸ್ಯವನ್ನು ಕಾಪಾಡಲು, ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸಲು ಸ್ವತಂತ್ರವಾಗಿ ಮತ್ತು ಜಂಟಿಯಾಗಿ ಕೆಲಸ ಮಾಡುವಂತೆ ಪೊಲಿಟ್‌ಬ್ಯುರೊ ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಬುಲ್ಡೋಜರ್ ರಾಜಕೀಯಕ್ಕೆ ಖಂಡನೆ

ಜಹಾಂಗೀರ್ ಪುರಿ ಮತ್ತು ದೆಹಲಿಯ ಇತರ ಪ್ರದೇಶಗಳಲ್ಲಿ ಗುರಿಯಿಟ್ಟು ಕೆಡವಿ ಹಾಕುವ ಅಭಿಯಾನಗಳು ಉದ್ವಿಗ್ನತೆಯನ್ನು ಸೃಷ್ಟಿಸುವ ಮತ್ತು ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ನೀಚ ಪ್ರಯತ್ನಗಳ ಅಭಿನ್ನ ಭಾಗವಾಗಿವೆ. ಬುಲ್ಡೋಜರ್ ರಾಜಕೀಯವು ಬಡ ಜನರು ಮತ್ತು ಕಾರ್ಮಿಕ ವರ್ಗದ ಕುಟುಂಬಗಳ ಸೂರುಗಳನ್ನು ನೆಲಸಮ ಮಾಡಿದೆ.

ಅಕ್ರಮ ಕಟ್ಟಡಗಳು ಮತ್ತು ಅತಿಕ್ರಮಣಗಳನ್ನು ಕೆಡವಲು ಕಾನೂನುಗಳು ಮತ್ತು ವಿಧಿ–ವಿಧಾನಗಳು ಇವೆ. ಇಂತಹ ಬುಲ್ಡೋಜರ್ ರಾಜಕಾರಣ ಇವುಗಳನ್ನು ಭಂಡತನದಿಂದ ಉಲ್ಲಂಘಿಸುತ್ತದೆ. ನ್ಯಾಯಾಂಗದ ಮಧ್ಯಪ್ರವೇಶ ಸದ್ಯಕ್ಕೆ ಜಹಾಂಗೀರ್ ಪುರಿ ಯಲ್ಲಿ ಇದನ್ನು ನಿಲ್ಲಿಸಿದೆ, ಆದರೆ ಅಂತಹ ಕ್ರಮಗಳು ವಿವಿಧ ಸ್ಥಳಗಳಲ್ಲಿ ಮುಂದುವರೆದಿದೆ. ಯಾವುದೇ ಅಕ್ರಮ ಕಟ್ಟಡಗಳನ್ನು ತೆಗೆದುಹಾಕುವ ಕೆಲಸ ಕಾನೂನಿಗೆ ಅನುಸಾರವಾಗಿರಬೇಕು ಮತ್ತು ನಿಗದಿಪಡಿಸಿದ ಕಾರ್ಯವಿಧಾನಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. ಬಡಜನರಿಗೆ ಪರ್ಯಾಯ ಜೀವನೋಪಾಯ ಮತ್ತು ಆಶ್ರಯವನ್ನು ಖಾತರಿಪಡಿಸುವವರೆಗೆ ಎಲ್ಲಾ ಕೆಡಹುವ ಕೆಲಸಗಳು ನಿಲ್ಲಬೇಕು.

ಬೆಳೆಯುತ್ತಿರುವ ಸರ್ವಾಧಿಕಾರಶಾಹಿ

ಪ್ರಧಾನ ಮಂತ್ರಿಗಳು ಮತ್ತು ಬಿಜೆಪಿ ಸರ್ಕಾರವನ್ನು ಟೀಕಿಸಿದ್ದಕ್ಕಾಗಿ ಗುಜರಾತ್‌ನ ಪಕ್ಷೇತರ ಶಾಸಕ ಜಿಗ್ನೇಶ್ ಮೇವಾನಿ ಅವರನ್ನು ಬಂಧಿಸಿದ, ಮತ್ತೆ ಬಂಧಿಸಿದ ರೀತಿಯನ್ನು ಪೊಲಿಟ್ ಬ್ಯೂರೋ ತೀವ್ರವಾಗಿ ಖಂಡಿಸಿದೆ.

'ರಾಜದ್ರೋಹ' ಕಾನೂನನ್ನು ರದ್ದುಗೊಳಿಸಿ: ದೇಶದ್ರೋಹದ ಕಾನೂನು ನ್ಯಾಯಾಂಗ ಪರಿಶೀಲನೆಗೆ ಒಳಪಟ್ಟಿರುವುದರಿಂದಾಗಿ, ಈ ಕಾನೂನಿನ ನಿಬಂಧನೆಯನ್ನು ಮರುಪರಿಶೀಲಿಸುವುದಾಗಿ ಮತ್ತು ಮರುಪರೀಕ್ಷಿಸುವುದಾಗಿ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಲೇ ಬೇಕಾಗಿ ಬಂದಿದೆ. ಐಪಿಸಿಯ ಸೆಕ್ಷನ್ 124 ಎ ಅನ್ನು ಸದ್ಯಕ್ಕೆ ಅಮಾನತಿನಲ್ಲಿಡುವಂತೆ ಸುಪ್ರಿಂ ಕೋರ್ಟ್ ಆದೇಶಿಸಿರುವುದು ಮತ್ತು ಎಲ್ಲಾ ಬಾಕಿ ಇರುವ ವಿಚಾರಣೆಗಳಿಗೆ ತಡೆ ಹಾಕಿರುವುದು ಹಾಗೂ ದೇಶದ್ರೋಹ ಕಾನೂನಿನಡಿಯಲ್ಲಿ ಹೊಸ ಪ್ರಕರಣಗಳನ್ನು ದಾಖಲಿಸದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿರುವುದು ಒಳ್ಳೆಯ ಸಂಗತಿ. ಸುಪ್ರಿಂ ಕೋರ್ಟ್ ಈ ಸರ್ಕಾರದ ಮರುಪರಿಶೀಲನೆಗೆ ಕಾಯದೆ ಜುಲೈ 2022 ರಲ್ಲಿ ವಿಚಾರಣೆಯನ್ನು ಪುನರಾರಂಭಿಸಿದಾಗ ಭಾರತೀಯ ದಂಡ ಸಂಹಿತೆಯ ಈ ಕಾಲಕ್ಕೆ ತಕ್ಕುದಲ್ಲದ ಸೆಕ್ಷನ್ 124ಎ ಅನ್ನು ರದ್ದುಗೊಳಿಸಲು ಮುಂದಾಗಬೇಕು.

ಮತ್ತೊಂದು ಗಂಭೀರ ಬೆಳವಣಿಗೆಯೆಂದರೆ, ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕ, 2022 ಭಾರತವನ್ನು 180 ದೇಶಗಳಲ್ಲಿ 150 ನೇ ಸ್ಥಾನದಲ್ಲಿ ಇರಿಸಿದೆ. ಭಾರತ ಕಳೆದ ವರ್ಷದ 142 ನೇ ಮತ್ತು 2016 ರಲ್ಲಿದ್ದ 133ನೇ ಸ್ಥಾನದಿಂದ ಇನ್ನೂ ಕೆಳಕ್ಕೆ ಕುಸಿದಿದೆ.

ಜಮ್ಮು ಮತ್ತು ಕಾಶ್ಮೀರ ಕ್ಷೇತ್ರ–ಮರುವಿಂಗಡಣೆ ಆಯೋಗದ ಶಿಫಾರಸುಗಳನ್ನು ತಿರಸ್ಕರಿಸಬೇಕು

ಜಮ್ಮು ಮತ್ತು ಕಾಶ್ಮೀರದ ಜನಸಂಖ್ಯಾ ಸ್ವರೂಪ ಮತ್ತು ಸಂಯೋಜನೆಯನ್ನು ಬದಲಾಯಿಸುವ ಗುರಿಯನ್ನು ಹೊಂದಿರುವ, ಸ್ಪಷ್ಟವಾಗಿ ರಾಜಕೀಯವಾಗಿ ಪ್ರೇರೇಪಿತವಾಗಿರುವ ಈ ಶಿಫಾರಸುಗಳನ್ನು ತಿರಸ್ಕರಿಸಬೇಕೆಂದು ಪೊಲಿಟ್ ಬ್ಯೂರೋ ಒತ್ತಾಯಿಸಿತು.

ಚುನಾವಣಾ ಕ್ಷೇತ್ರಗಳ ಯಾವುದೇ ಮರುವಿಂಗಡಣೆಯಲ್ಲಿ ಜನಸಂಖ್ಯೆಯು ಒಂದು ಪ್ರಮುಖ ಅಂಶವಾಗಿದೆ. 2011 ರ ಜನಗಣತಿಯ ಪ್ರಕಾರ, ಕಾಶ್ಮೀರದ ಜನಸಂಖ್ಯೆ 68.9 ಲಕ್ಷ ಮತ್ತು ಜಮ್ಮುವಿನ ಜನಸಂಖ್ಯೆಯು 53.8 ಲಕ್ಷ. ನ್ಯಾಯಯುತವಾದ ಮರುವಿಂಗಡಣೆ 90 ಸದಸ್ಯರ ವಿಧಾನಸಭೆಯಲ್ಲಿ ಕಾಶ್ಮೀರಕ್ಕೆ 51 ಮತ್ತು ಜಮ್ಮುವಿಗೆ 39 ಸ್ಥಾನಗಳನ್ನು ನೀಡುತ್ತಿತ್ತು. ಬದಲಾಗಿ, ಈ ಶಿಫಾರಸುಗಳು ಕಾಶ್ಮೀರಕ್ಕೆ 47 ಮತ್ತು ಜಮ್ಮುವಿಗೆ 43 ಸ್ಥಾನಗಳನ್ನು ನೀಡುತ್ತವೆ.

ಕೋವಿಡ್ ಸಾವುಗಳ ಡಬ್ಲ್ಯುಹೆಚ್‌ಒ ಅಂದಾಜು

ಭಾರತದಲ್ಲಿ ಕೋವಿಡ್ ಸಂಬಂಧಿತ ಸಾವುಗಳ ಕುರಿತು ಇತ್ತೀಚೆಗೆ ಬಿಡುಗಡೆಯಾದ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಹೆಚ್‌ಒ) ಅಂದಾಜಿನ ಬಗ್ಗೆ ಪೊಲಿಟ್ ಬ್ಯೂರೋ ತೀವ್ರ ಕಳವಳ ವ್ಯಕ್ತಪಡಿಸಿದೆ. ಡಬ್ಲ್ಯುಎಚ್‌ಒ ಅಂದಾಜು ಪ್ರಕಾರ ಇಂತಹ ಸಾವುಗಳ ಸಂಖ್ಯೆ 47 ಲಕ್ಷ, ಅಂದರೆ ಅಧಿಕೃತ ಅಂಕಿ ಅಂಶ 4.8 ಲಕ್ಷಕ್ಕಿಂತ 10 ಪಟ್ಟು ಹೆಚ್ಚು. ಅನೇಕ ರಾಜ್ಯಗಳಲ್ಲಿ, ಕೋವಿಡ್ ಸಾವಿನ ಪರಿಹಾರವನ್ನು ಅಧಿಕೃತ ಸಾವಿನ ಸಂಖ್ಯೆಯ ಹಲವು ಪಟ್ಟು ಹೆಚ್ಚು ಸಂಖ್ಯೆಯಲ್ಲಿ ಮಂಜೂರು ಮಾಡಲಾಗಿದೆ. ಬಿಜೆಪಿ ಆಡಳಿತವಿರುವ ಗುಜರಾತ್‌ನಲ್ಲಿ ಅಧಿಕೃತ ಸಾವಿನ ಸಂಖ್ಯೆಗಿಂತ 10 ಪಟ್ಟು ಪರಿಹಾರ ನೀಡಲಾಗಿದೆ. ಇದು ಕೋವಿಡ್ ಸಾಂಕ್ರಾಮಿಕ ರೋಗವನ್ನು ನಿಭಾಯಿಸುವಲ್ಲಿ ಮೋದಿ ಸರ್ಕಾರದ ಕ್ರಿಮಿನಲ್ ಅಪರಾಧಕ್ಕೆ ಮಾತ್ರವಲ್ಲ, ಅದರ ಕುಖ್ಯಾತ ದತ್ತಾಂಶ ವಂಚನೆಯ ಬಗ್ಗೆಯೂ ಬಂದಿರುವ ದೋಷಾರೋಪಣೆಯಾಗಿದೆ. ಇದು ಬಹು ನಿಂದನೀಯ. ಮೋದಿ ಸರ್ಕಾರ ಸತ್ತವರನ್ನು ಎಣಿಸಲು ನಿರಾಕರಿಸುವ ಮೂಲಕ ಅವರನ್ನು ಅವಮಾನಿಸಬಾರದು. ಅವರೆಲ್ಲರ ಕುಟುಂಬಗಳಿಗೆ ಸುಪ್ರಿಂ ಕೋರ್ಟ್ ಆದೇಶಿಸಿರುವ ಪರಿಹಾರವನ್ನು ಕೊಡಬೇಕು.

ಪೊಲಿಟ್ ಬ್ಯೂರೋ ಮತ್ತು ಕೇಂದ್ರ ಸಮಿತಿ ಸದಸ್ಯರ ನಡುವೆ ಜವಾಬ್ದಾರಿಗಳ ಹಂಚಿಕೆ

ಇತ್ತೀಚೆಗೆ ಮುಕ್ತಾಯಗೊಂಡ ಸಿಪಿಐ(ಎಂ)ನ 23ನೇ ಮಹಾಧಿವೇಶನದ ನಂತರ ಮೊದಲ ಬಾರಿಗೆ ಸಭೆ ಸೇರಿದ ಪೊಲಿಟ್ ಬ್ಯೂರೋ, ಕೆಲಸದ ಮತ್ತು ಜವಾಬ್ದಾರಿಗಳ ಹಂಚಿಕೆಯನ್ನು ಚರ್ಚಿಸಿತು. ಇದನ್ನು ಜೂನ್ 18–19, 2022 ರಂದು ನಡೆಯಲಿರುವ ಸಭೆಯಲ್ಲಿ ಕೇಂದ್ರ ಸಮಿತಿಯ ಪರಿಗಣನೆಗಾಗಿ ಪ್ರಸ್ತುತಪಡಿಸಲಾಗುವುದು.

ಯುದ್ಧ ಮತ್ತು ಆಹಾರ ಸಾರ್ವಭೌಮತೆ... ಪುಟ 13 ರಿಂದ

ನಿಯಂತ್ರಣವನ್ನು ಹೊಂದಿರದ ಹಲವಾರು ಅನಿರೀಕ್ಷಿತ ವಿಶ್ವ ಬೆಳವಣಿಗೆಗಳು/ವಿದ್ಯಮಾನಗಳು ಇಡೀ ಜಗತ್ತಿನ ಜನರನ್ನು ಅಭಾವಗಳಿಗೆ ಒಡ್ಡುತ್ತವೆ.

ಈ ಸರಳ ಸತ್ಯವನ್ನು ಎಲ್ಲೆಡೆ ಜರುಗಿದ ವಸಾಹತುಶಾಹಿ–ವಿರೋಧಿ ಹೋರಾಟಗಳು ಅರ್ಥಮಾಡಿಕೊಂಡಿದ್ದವು. ಸ್ವಾತಂತ್ರ್ಯವೆಂದರೆ ಆಹಾರ ಸ್ವಾವಲಂಬನೆಯೇ ಎಂಬುದನ್ನು ಅವರು ಸರಿಯಾಗಿಯೇ ಪರಿಗಣಿಸಿದ್ದರು. ಪ್ರತಿಯೊಂದು ದೇಶದೊಳಗೂ ಅಲ್ಲದಿದ್ದರೂ, ಕನಿಷ್ಠ ಪಕ್ಷ ಮೂರನೇ ಜಗತ್ತಿನ ದೇಶಗಳ ಗುಂಪಿನ "ಆಹಾರ ಸಮುದಾಯ"ದ ಕನಿಷ್ಠ ಬಳಕೆಯ ಮಟ್ಟವನ್ನು ತಲುಪುವತ್ತ ಶ್ರಮಿಸಿದರು. ಈ ಗುರಿಯನ್ನು ತ್ಯಜಿಸುವಂತೆ ಸಾಮ್ರಾಜ್ಯಶಾಹಿಯಿಂದ ಒತ್ತಾಯಕ್ಕೊಳಗಾಗಿ ಆಫ್ರಿಕಾವು ಬಹಳ ದೊಡ್ಡ ಬೆಲೆಯನ್ನೇ ತೆತ್ತಿದೆ. ಇಂದು ಆಫ್ರಿಕಾದ ಮೇಲೆ ಅಭಾವದ ಭೀತಿ ಆವರಿಸಿದೆ.

ವಸಾಹತುಶಾಹಿಯು ನಿರ್ಗಮಿಸಿದ ನಂತರ ಆಹಾರ ಉತ್ಪಾದನೆಯನ್ನು ಹೆಚ್ಚಿಸುವ ಆರಂಭಿಕ ಯೋಜನೆಯ ಹೊರತಾಗಿಯೂ, ಧಾನ್ಯಗಳನ್ನು ಖರೀದಿಸುವ ಅಮೇರಿಕದ ಪಿಎಲ್–480 ಯೋಜನೆಯಡಿಯಲ್ಲಿ ಭಾರತವು ಸಿಕ್ಕಿಹಾಕಿಕೊಂಡಿತು. ಅರವತ್ತರ ದಶಕದ ಮಧ್ಯಭಾಗದಲ್ಲಿ ಎದುರಾದ ತೀವ್ರ ಬರಗಾಲದ ನಂತರವೇ ನಮ್ಮ ಆಳುವ ಸರ್ಕಾರಗಳಿಗೆ "ಆಹಾರ ಸಾರ್ವಭೌಮತೆ" ಸಾಧಿಸುವುದರ ಮಹತ್ವ ಅರ್ಥವಾಯಿತು. ಒಂದು ಹಸಿರು ಕ್ರಾಂತಿಯ ಮೂಲಕ, ಅದರ ನ್ಯೂನತೆಗಳು ಏನೇ ಇರಲಿ, "ಆಹಾರ ಸಾರ್ವಭೌಮತೆ"ಯ ಗುರಿಯನ್ನು ಸಾಧಿಸಲಾಯಿತು. ಅಂದಿನಿಂದಲೂ ಭಾರತದ "ಆಹಾರ ಸಾರ್ವಭೌಮತೆ"ಯನ್ನು ಹಾಳುಗೆಡವಲು ಸಾಮ್ರಾಜ್ಯಶಾಹಿಗಳು ಅವಿರತವಾಗಿ ಪ್ರಯತ್ನಿಸಿವೆ. ಭಾರತದ "ಆಹಾರ ಸಾರ್ವಭೌಮತೆ"ಯ ಹಿಂದಿರುವ ಕನಿಷ್ಠ ಬೆಂಬಲ ಬೆಲೆ ಕ್ರಮವನ್ನು ಹಿಂತೆಗೆದುಕೊಳ್ಳುವ ಕೃಷಿ ಶಾಸನಗಳನ್ನು ಅಂಗೀಕರಿಸಿದ ಮೋದಿ ಸರ್ಕಾರದಲ್ಲಿ ಸಾಮ್ರಾಜ್ಯಶಾಹಿಯು ಒಂದು "ಗುಗ್ಗು"ವನ್ನು ಕಂಡುಕೊಂಡಿತು. ಆದರೆ, ಈ ಕೃಷಿ ಶಾಸನಗಳನ್ನು ಹಿಂತೆಗೆದುಕೊಳ್ಳುವಂತೆ ಮಾಡುವಲ್ಲಿ ದೆಹಲಿಯ ಧೀರೋಧಾತ್ತ ಕಿಸಾನ್ ಆಂದೋಲನವು ಯಶಸ್ವಿಯಾಯಿತು. "ಆಹಾರ ಸಾರ್ವಭೌಮತ್ವ" ಸದ್ಯಕ್ಕೆ ಮುಂದುವರಿದಿದೆ. ಅದನ್ನು ಸಂರಕ್ಷಿಸಬೇಕಾದರೆ ಜನರು ಅವಿರತವಾಗಿ ಜಾಗರೂಕರಾಗಿರಬೇಕಾಗುತ್ತದೆ.

ಜೀವ ವಿಮಾ ನಿಗಮದ ನಿಜವಾದ ಒಡೆಯರು ಯಾರು?......... ಪುಟ 11 ರಿಂದ

ಟ್ರಸ್ಟಿಯೇ ಠಕ್ಕನಾಗಿದ್ದಾನೆ

ಎಲ್‌ಐಸಿಯ ಐಪಿಒ ವಿಷಯದಲ್ಲಿ ಮಾತ್ರ ಇದು ನಡೆದಿದ್ದರೆ, ಅದು ಬಹುಶ:, ಕೋಟ್ಯಂತರ ಪಾಲಿಸಿದಾರರು ತಾವು ಎಲ್‌ಐಸಿ ಎಂಬ ಈ ಬೃಹತ್ ಸಹಕಾರೀ ಉದ್ಯಮದ ಒಡೆಯರು ಎಂಬ ಸ್ಥಾನಮಾನವನ್ನು ಈ ಐಪಿಒದ ಮೂಲಕ ಕಳೆದುಕೊಳ್ಳುತ್ತಿರುವುದಕ್ಕೆ ಏಳಬಹುದಾಗಿದ್ದ ವಿರೋಧವನ್ನು ತಣ್ಣಗಾಗಿಸುವ ತಂತ್ರ ಎಂದೇ ಭಾವಿಸಬೇಕಾಗುತ್ತದೆ. ವಾಸ್ತವವಾಗಿ ಎಲ್‌ಐಸಿಯ ನಿರ್ಮಾಣವಾಗಿರುವುದು ಪಾಲಿಸಿದಾರರ ಒಂದು ಬೃಹತ್ ಉದ್ಯಮವಾಗಿ–ಇದರಲ್ಲಿ ಸರ್ಕಾರದ ಪಾತ್ರ ಕೇವಲ ಟ್ರಸ್ಟಿಯಾಗಿಯೇ ಹೊರತು ಸಂಪೂರ್ಣ ಮಾಲೀಕನಾಗಿ ಅಲ್ಲ. ಇಲ್ಲಿ ಟ್ರಸ್ಟಿಯೇ ಠಕ್ಕನಾಗಿದ್ದಾನೆ ಎಂಬುದನ್ನು ಈ ಐಪಿಒ ದೃಢೀಕರಿಸಿದೆ.

ಈ ಐಪಿಒ ಎಲ್‌ಐಸಿಯ ಮೇಲೆ ದೀರ್ಘಾವಧಿ ದುಷ್ಪರಿಣಾಮಗಳ ಬೆದರಿಕೆಯೊಡ್ಡಿದೆ. ಈ ಐಪಿಒ ಗೆ ವಿಧಿಸುವ ನಿಯಮಗಳ ಪ್ರಕಾರ ಎರಡು ವರ್ಷಗಳೊಳಗೆ ಕನಿಷ್ಟ 10% ಮತ್ತು ಐದು ವರ್ಷಗಳೊಳಗೆ ಕನಿಷ್ಟ 25% ಶೇರುಗಳ ಸಾರ್ವಜನಿಕ ಮಾರಾಟ ಮಾಡಬೇಕಾಗುತ್ತದೆ. ಈ ಐಪಿಒನಲ್ಲಿ ಶೇರು ಪಡೆಯುವವರಿಗೆ ಕೊಟ್ಟಿರುವ ಭಾರೀ ರಿಯಾಯಿತಿಯ ಕರಿನೆರಳು ಇನ್ನು ಮುಂದಿನ ಶೇರು ಮಾರಾಟಗಳ ಮೇಲೂ ಬೀರದಿರದು

ಬಹುಶಃ ಸರಕಾರ ಭಾರೀ ರಿಯಾಯ್ತಿ ಉಂಟು ಮಾಡುವ 'ಸದ್ಭಾವನೆ'ಯಿಂದ ತದ ನಂತರ ಶೀಘ್ರದಲ್ಲೇ ಷೇರು ಬೆಲೆಯಲ್ಲಿ "ಜಿಗಿತ" ಉಂಟಾಗಬಹುದು ಎಂದು ನಿರೀಕ್ಷಿಸುತ್ತಿರಬಹುದು. ಆದರೆ 2019 ರಲ್ಲಿ ಐಆರ್‌ಸಿಟಿಸಿ ಐಪಿಒನಲ್ಲಿ ಏನಾಯಿತು ಎಂದು ನೆನಪಿದೆಯೇ? ಅದರಲ್ಲಿ ಷೇರಿನ ನೀಡಿಕೆಯ ಬೆಲೆಯನ್ನು ನಿಗದಿ ಗೊಳಿಸಿದ್ದು ಪ್ರತಿ ಷೇರಿಗೆ ರೂ 315–320 ರಂತೆ. ಆದರೆ ಸೇರು ಮಾರಾಟದ ದಿನ ಇದು ತೆರೆದದ್ದು ರೂ. 644 ರಂತೆ. ಆದರೆ ಇಂತಹ "ಜಿಗಿತ" ದಿಂದ ಸರ್ಕಾರಕ್ಕಾಗಲೀ ಅಥವಾ ಲಕ್ಷಾಂತರ ಎಲ್‌ಐಸಿ ಪಾಲಿಸಿದಾರರಿಗಾಗಲೀ ಚಿಕ್ಕಾಸೂ ಸಿಗುವುದಿಲ್ಲ. ಬದಲಿಗೆ, ಎಲ್ಲ ಗಳಿಕೆಯೂ ಇದು 'ಜಾಣ' ಹೂಡಿಕೆದಾರರ ಪಾಲಾಗುತ್ತದೆ.

ಬಹುಶಃ, ಮೋದಿ ಸರ್ಕಾರವು ಈ ಐಪಿಒದ ಪ್ರಯೋಜನ ಪಡೆದುಕೊಂಡು ನಿರ್ಗಮಿಸುವ ಸಟ್ಟಾಕೋರ ತಿಮಿಂಗಿಲಗಳು ಗಳಿಸುವ ಅಗಾಧ ಲಾಭದ ಲೆಕ್ಕಾಚಾರ ಮಾಡುತ್ತಿದೆಯಷ್ಟೇ. ಅವರ ಈ ಅಗಾಧ ಲಾಭ ನೇರವಾಗಿ ಸರ್ಕಾರಕ್ಕೆ ಮತ್ತು ಕೋಟ್ಯಂತರ ಪಾಲಿಸಿದಾರರಿಗೆ ನಷ್ಟ ಮಾಡುವ ಮೂಲಕವೇ ಬರುವಂತದ್ದು ಎಂಬುದರ ಪರಿವೆ ಅದಕ್ಕಿದ್ದಂತಿಲ್ಲ. ಸದಾ 'ಸದ್ಭಾವನೆ' ಮೂಡಿಸುವ ಕೆಲಸದಲ್ಲೇ ನಿರತವಾಗಿರುವ ಸರ್ಕಾರದ ಇಂತಹ ನಡೆಯಿಂದ ಆಶ್ಚರ್ಯ ಪಡಬೇಕಾಗಿಲ್ಲ. ಆದರೆ ಇದು ಸಂಪೂರ್ಣವಾಗಿ ಸರಿ ಹೋಗಬಹುದು. ಆದರೆ ಕೋಟ್ಯಂತರ ಭಾರತೀಯರಿಗೆ, ಮೇ 4 ರಂದು ಆರಂಭವಾಗಿರುವ ಐಪಿಒ ಭಾರತದ ಅತ್ಯಂತ ಜನಪ್ರಿಯ ಸಂಸ್ಥೆಗಳಲ್ಲಿ ಒಂದರ ಧ್ವಂಸಕ್ರಿಯೆಯ ಆರಂಭವನ್ನು ಸೂಚಿಸುತ್ತಿದೆ.





‘ಮರಿ’ ಸರ್ವಾಧಿಕಾರಿ ಫಿಲಿಪ್ಪೀನ್ಸ್ ಅಧ್ಯಕ್ಷ

ಜಗದ ಸುತ್ತ

ವಸಂತರಾಜ ಎನ್.ಕೆ.

ಫಿಲಿಪ್ಪಿನ್ಸ್ ನ ಹೊಸ ಅಧ್ಯಕ್ಷ ಫರ್ಡಿನಾಂಡ್ ಮಾರ್ಕೋಸ್ ಜೂನಿಯರ್ 1986 ರಲ್ಲಿ ದಶಕಗಳ ಕ್ರೂರ ಸರ್ವಾಧಿಕಾರಿ ಆಡಳಿತದ ನಂತರ ಓಡಿಸಲಾಗಿದ್ದ ಸೀನಿಯರ್ ಮಾರ್ಕೋಸ್ ಮಗ ಮಾತ್ರವಲ್ಲ, ರಾಜಕೀಯ ಸಹಚರ ಸಹ ಆಗಿದ್ದರು. ಒಂದು ಪ್ರಾಂತದ ಗವರ್ನರ್ ಆಗಿ ಆ ಕ್ರೂರ ಆಡಳಿತದ ಭಾಗವೂ ಆಗಿದ್ದರು. ಆ ಕ್ರೂರ ಆಡಳಿತದಲ್ಲಿ ಸಾವಿರಾರು ವಿರೋಧಿಗಳನ್ನು ಬಂಧಿಸಲಾಗಿತ್ತು, ಚಿತ್ರಹಿಂಸೆಗೆ ಗುರಿ ಮಾಡಲಾಗಿತ್ತು. ‘ಮಾಯ’ ಮಾಡಲಾಗಿತ್ತು. ಭಾರೀ ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ಮಾರ್ಕೋಸ್ ಕುಟುಂಬ 10 ಶತಕೋಟಿ ಡಾಲರಿನಷ್ಟು ರಾಷ್ಟ್ರೀಯ ಆಸ್ತಿಯನ್ನು ಲೂಟಿ ಮಾಡಿತ್ತು.

ಪ್ರಜಾಪ್ರಭುತ್ವ ಹಿಸುಕಿದ ರೆಕಾರ್ಡ್ ಉಳ್ಳ ಸರ್ವಾಧಿಕಾರಿಗಳ ಕುರಿತು ಗೊತ್ತಿದ್ದೂ ಅವರನ್ನು ಉನ್ನತ ಚುನಾಯಿತ ಸ್ಥಾನಗಳಿಗೆ ಚುನಾಯಿಸುವ ಇತ್ತೀಚಿನ ಜಾಗತಿಕ ಟ್ರೆಂಡ್ ನ್ನು ಫಿಲಿಪ್ಪೀನ್ಸ್ ಅನುಸರಿಸಿದೆ. ಜನತಾ ಕ್ರಾಂತಿ ನಡೆದು ದೇಶಬಿಟ್ಟು ಓಡಿಸಲಾಗಿದ್ದ ಸರ್ವಾಧಿಕಾರಿ ಮಾರ್ಕೋಸ್ ನ ಮಗ ಜೂನಿಯರ್ ಮಾರ್ಕೋಸ್ ಭಾರೀ ಬಹುಮತದಿಂದ (ಶೇ.59) ಅಧ್ಯಕ್ಷರಾಗಿ ಮುಂದಿನ 6 ವರ್ಷಗಳ ಅವಧಿಗೆ ಆಯ್ಕೆಯಾಗಿದ್ದಾರೆ. ಅವರಿಗೆ ‘ಬೊಂಗ್ ಬೊಂಗ್’ ಎಂಬ ಅಡ್ಡ ಹೆಸರಿದೆ. ಅವರು ಲೆನಿ ರೊಬ್ರೆಡೊ ಅವರನ್ನು ಭಾರೀ ಅಂತರದಿಂದ (ಶೇ.31) ಸೋಲಿಸಿದ್ದಾರೆ. 2016ರ ಉಪಾಧ್ಯಕ್ಷರ ಚುನಾವಣೆಯಲ್ಲಿ ಲೆನಿ ರೊಬ್ರೆಡೊ ಮಾರ್ಕೊಸ್ ಜೂನಿಯರ್ ಅವರನ್ನು ಸೋಲಿಸಿದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಉಪಾಧ್ಯಕ್ಷರಾಗಿ ಹಿಂದಿನ ಅಧ್ಯಕ್ಷ ರೊಡ್ರಿಗೊ ಡೂತೆರ್ತೆ ಮಗಳಾದ ಸಾರಾ ಡೂತೆರ್ತೆ ಸಹ ಭಾರೀ (ಶೇ.61) ಬಹುಮತದಿಂದ ಗೆದ್ದಿದ್ದಾರೆ. ಅವರು ಕಿಕೊ ಪಂಗಿಲಿನಾನ್ ಅವರನ್ನು ಸಹ ಭಾರೀ ಅಂತರದಿಂದ (ಶೇ.43) ಸೋಲಿಸಿದ್ದಾರೆ. ಶೇ.80ರಷ್ಟು ಮತದಾನವಾಗಿತ್ತು.

ಫಿಲಿಪ್ಪಿನ್ಸ್ ನ ಹೊಸ ಅಧ್ಯಕ್ಷ ಫರ್ಡಿನಾಂಡ್ ಮಾರ್ಕೋಸ್ ಜೂನಿಯರ್ 1986 ರಲ್ಲಿ ದಶಕಗಳ ಕ್ರೂರ ಸರ್ವಾಧಿಕಾರಿ ಆಡಳಿತದ ನಂತರ ಓಡಿಸಲಾಗಿದ್ದ ಸೀನಿಯರ್ ಮಾರ್ಕೋಸ್ ಮಗ ಮಾತ್ರವಲ್ಲ, ರಾಜಕೀಯ ಸಹಚರ ಸಹ ಆಗಿದ್ದರು. ಒಂದು ಪ್ರಾಂತದ ಗವರ್ನರ್ ಆಗಿ ಆ ಕ್ರೂರ ಆಡಳಿತದ ಭಾಗವೂ ಆಗಿದ್ದರು. ಆ ಕ್ರೂರ ಆಡಳಿತದಲ್ಲಿ ಸಾವಿರಾರು ವಿರೋಧಿಗಳನ್ನು ಬಂಧಿಸಲಾಗಿತ್ತು, ಚಿತ್ರಹಿಂಸೆಗೆ ಗುರಿ ಮಾಡಲಾಗಿತ್ತು. ‘ಮಾಯ’ ಮಾಡಲಾಗಿತ್ತು. ಭಾರೀ ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ಮಾರ್ಕೋಸ್ ಕುಟುಂಬ 10 ಶತಕೋಟಿ ಡಾಲರಿನಷ್ಟು ರಾಷ್ಟ್ರೀಯ ಆಸ್ತಿಯನ್ನು ಲೂಟಿ ಮಾಡಿತ್ತು. ಹಿಂದಿನ ಅಧ್ಯಕ್ಷ ರೊಡ್ರಿಗೊ ಡೂತೆರ್ತೆ ಸಹ ಭಯೋತ್ಪಾದನೆ, ಮಾದಕ ದ್ರವ್ಯಗಳು ಮತ್ತು ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮಕೈಗೊಳ್ಳುವ ಹೆಸರಲ್ಲಿ ಸಾವಿರಾರು ‘ಎನ್ ಕೌಂಟರ್’ ಕೊಲೆಗಳನ್ನು ಮಾಡಿಸಿ ಸರ್ವಾಧಿಕಾರಿ ವರ್ತನೆಗಳನ್ನು ಪ್ರದರ್ಶಿಸಿದ್ದರು.

ಅಧ್ಯಕ್ಷರಾಗಿ ಮಾರ್ಕೋಸ್ ಜೂನಿಯರ್ ಆಯ್ಕೆ ಫಿಲಿಪ್ಪೀನ್ಸ್ ದೇಶದ ತುಂಬಾ ಅಚ್ಚರಿ, ಆತಂಕ ಮೂಡಿಸಿದೆ. ಕ್ರಾಂತಿಯ ಮೂಲಕ ದೇಶ ಬಿಟ್ಟು ಓಡಿಸಲಾದ ಸರ್ವಾಧಿಕಾರಿ ಮತ್ತು ಭ್ರಷ್ಟ ಆಡಳಿತದ ಭಾಗವಾಗಿದ್ದ ಮಾರ್ಕೋಸ್ ಜೂನಿಯರ್ ನ್ನು ಚುನಾವಣೆಗೆ ಸ್ಪರ್ಧಿಸಲು ಅನರ್ಹವೆಂದು ಘೋಷಿಸಬೇಕೆಂದು ಹಲವು ರಾಜಕೀಯ ಪಕ್ಷಗಳು ಒತ್ತಾಯಿಸಿದ್ದವು. ಮಾರ್ಕೋಸ್ ಜೂನಿಯರ್ ಫಿಲಿಪ್ಪೀನ್ಸ್ ಗೆ ಮರಳಿದ ನಂತರವೂ ಅವನ ವಿರುದ್ಧ ತೆರಿಗೆಗಳ್ಳತನ ಸೇರಿದಂತೆ ಹಲವು ಪ್ರಕರಣಗಳು ಇರುವುದರಿಂದಲೂ ಸ್ಪರ್ಧಿಸಲು ಅನರ್ಹವೆಂದು ಘೋಷಿಸಬೇಕೆಂದು ಒತ್ತಾಯ ಬಂದಿತ್ತು. ಚುನಾವಣಾ ಪ್ರಚಾರದಲ್ಲಿ ಮತ್ತು ಚುನಾವಣೆಯ ದಿನದ ವರೆಗೆ ಸಹ ತೀವ್ರ ಚುನಾವಣಾ ಅಕ್ರಮಗಳ ಆಪಾದನೆಗಳು ಕೇಳಿಬಂದಿದ್ದವು. ಮಾರ್ಕೋಸ್ ಪರ (ವಿಶೇಷವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ನಡೆಸಲಾದ) ಚುನಾವಣಾ ಪ್ರಚಾರ ಹಲವು ಅಕ್ರಮಗಳನ್ನು ಎಸಗಿತ್ತು. ಪೂರ್ಣ ದಾಖಲೆಗಳಿರುವ ಸೀನಿಯರ್ ಮಾರ್ಕೋಸ್ ಆಡಳಿತದ ಕರಾಳ ವಾಸ್ತವವನ್ನು ‘ವೈಟ್ ವಾಶ್’ ಮಾಡಿ ಅದು ‘ಸುವರ್ಣ ಯುಗ’ವೆಂದು ಪ್ರಚಾರದಲ್ಲಿ ಬಿಂಬಿಸಲಾಗಿತ್ತು. ವಿರೋಧಿ ಅಭ್ಯರ್ಥಿಯ ವಿರುದ್ಧ ಸುಳ್ಳುಗಳ ಸರಮಾಲೆಯಿರುವ ತೀವ್ರ ಅಪಪ್ರಚಾರವನ್ನು ಮಾಡಲಾಗಿತ್ತು. ವಿರೋಧಿ ಅಭ್ಯರ್ಥಿ ನಿಷೇಧಿತ ಭೂಗತ ಕಮ್ಯುನಿಸ್ಟ್ ಪಕ್ಷದ ರಹಸ್ಯ ಸದಸ್ಯತ್ವ ಹೊಂದಿದ್ದಾರೆಂದು ಹಸಿ ಸುಳ್ಳು ಹರಡಲಾಗಿತ್ತು. ವಿರೋಧಿ ಕಾರ್ಯಕರ್ತರ ವಿರುದ್ಧ ಹಿಂಸಾಚಾರ ನಡೆಸಲಾಗಿತ್ತು. ಅವರ ವಿರುದ್ಧ ಭಯೋತ್ಪಾದಕ ನಿಗ್ರಹ ಭ್ರಷ್ಟಾಚಾರ ನಿಗ್ರಹ ಪಡೆಗಳು ಕಾರ್ಯಾಚರಣೆಗಳನ್ನು ನಡೆಸಿ ಅವರಿಗೆ ಕಿರುಕುಳ ಕೊಡುತ್ತಿದ್ದರು. ಪೋಲಿಸ್ ಮತ್ತು ಮಿಲಿಟರಿಯ ಹಲವು ಸಿಬ್ಬಂದಿ ಸಾಮಾಜಿಕ ಮಾಧ್ಯಮಗಳಲ್ಲಿ ವಿರೋಧಿ ಅಭ್ಯರ್ಥಿಗಳ ವಿರುದ್ಧ ಸಕ್ರಿಯವಾಗಿ ಪ್ರಚಾರ ಮಾಡಿದ್ದು ಕಂಡು ಬಂದಿದೆ. ಚುನಾವಣಾ ದಿನ ಸಹ ವಿರೋಧಿ ಕಾರ್ಯಕರ್ತರ ವಿರುದ್ಧ ಹಲವು ಬೆದರಿಕೆಗಳ, ಹಿಂಸಾಚಾರದ ಘಟನೆಗಳು ನಡೆದ ವರದಿಯಾಗಿವೆ. 1992ರಲ್ಲಿ ಮತ್ತೆ ರಾಜಕೀಯ ಪ್ರವೇಶಿಸಿದ ಮಾರ್ಕೋಸ್ ಜೂನಿಯರ್ ಕುಟುಂಬದ ಅಪಕೀರ್ತಿ ಅಳಿಸಿ ಹಾಕಲು ಸಾಮಾಜಿಕ ಮಾಧ್ಯಮಗಳಲ್ಲಿ ದೀರ್ಘ ಪ್ರಚಾರ ಕೈಗೊಂಡಿದ್ದರು.



ಅಧ್ಯಕ್ಷರಾಗಿ ಮಾರ್ಕೋಸ್ ಜೂನಿಯರ್ ಆಯ್ಕೆ ವಿರುದ್ಧ ತೀವ್ರ ಪ್ರತಿಭಟನೆಗಳು ನಡೆದಿವೆ. ಹಲವಾರು ಸೀನಿಯರ್ ಮಾರ್ಕೋಸ್ ಆಡಳಿತದ ಸಂತ್ರಸ್ತರು, ವಿರೋಧ ಪಕ್ಷಗಳ ಕಾರ್ಯಕರ್ತರು ದೇಶದ ತುಂಬಾ ವ್ಯಾಪಕ ಮೆರವಣಿಗೆ, ಪ್ರತಿಭಟನೆಗಳನ್ನು ನಡೆಸಿದರು. ಹಲವು ವಿ.ವಿ ವಿದ್ಯಾರ್ಥಿಗಳು, ಶಿಕ್ಷಕರು ‘ಮಾರ್ಕೋಸ್ ಅಧ್ಯಕ್ಷತೆಯಲ್ಲಿ ಕ್ಲಾಸು ಸಾಧ್ಯವಿಲ್ಲ’ ಎಂಬ ಕರೆ ಕೊಟ್ಟಿದ್ದಾರೆ. ಯು.ಎಸ್ ನಲ್ಲಿ ನೆಲೆಸಿರುವ ಫಿಲಿಪ್ಪೀನರು ಸಹ ಈ ಚುನಾವಣೆ ಸಕ್ರಮವಲ್ಲವೆಂದು ಪ್ರತಿಭಟಿಸಿದ್ದಾರೆ. ಪ್ರಜಾಪ್ರಭುತ್ವ ಹಿಸುಕಿದ ರೆಕಾರ್ಡ್ ಉಳ್ಳ ಸರ್ವಾಧಿಕಾರಿಗಳ ಕುರಿತು ಗೊತ್ತಿದ್ದೂ ಅವರನ್ನು ಉನ್ನತ ಚುನಾಯಿತ ಸ್ಥಾನಗಳಿಗೆ ಚುನಾಯಿಸುವ ಜಾಗತಿಕ ಟ್ರೆಂಡ್ ನ್ನು ದಕ್ಷಿಣ–ಪೂರ್ವ ಏಶ್ಯಾಕ್ಕೂ ಹರಡಿರುವುದು ಆತಂಕಕಾರಿ ಬೆಳವಣಿಗೆ.

ಮೇ 25–31: ಬೆಲೆ ಏರಿಕೆ ಮತ್ತು ನಿರುದ್ಯೋಗದ ವಿರುದ್ಧ ಅಖಿಲ ಭಾರತ ಪ್ರತಿಭಟನೆ – ಎಡಪಕ್ಷಗಳ ಕರೆ

ಅವ್ಯಾಹತವಾಗಿ ನೆಗೆಯುತ್ತಿರುವ ಬೆಲೆ ಏರಿಕೆಯು ಜನರ ಮೇಲೆ ಹಿಂದೆಂದೂ ಕಾಣದ ಹೊರೆಯನ್ನು ಹೇರುತ್ತಿದೆ. ಕೋಟಿಗಟ್ಟಲೆ ಜನರು ನರಳುತ್ತಿದ್ದಾರೆ ಮತ್ತು ಹಸಿವಿನ ಸಂಕಟದಿಂದ ಕಡು ಬಡತನಕ್ಕೆ ತಳ್ಳಲ್ಪಟ್ಟಿದ್ದಾರೆ. ಅಭೂತಪೂರ್ವ ಮತ್ತು ಹೆಚ್ಚುತ್ತಿರುವ ನಿರುದ್ಯೋಗದ ಮೇಲೆ ಬರುತ್ತಿರುವ ಇದು ಜನರ ಸಂಕಟಗಳನ್ನು ಮತ್ತಷ್ಟು ಹೆಚ್ಚಿಸುತ್ತಿದೆ.

ಕಳೆದ ವರ್ಷ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಶೇ.70, ತರಕಾರಿಗಳ ಶೇ.20, ಅಡುಗೆ ಎಣ್ಣೆ ಶೇ.23 ಮತ್ತು ಬೇಳೆಕಾಳುಗಳ ಬೆಲೆ ಶೇ.8 ರಷ್ಟು ಹೆಚ್ಚಾಗಿದೆ. ಕೋಟಿಗಟ್ಟಲೆ ಭಾರತೀಯರ ಪ್ರಧಾನ ಆಹಾರವಾಗಿರುವ ಗೋಧಿ ಶೇ.14ಕ್ಕೂ ಹೆಚ್ಚು ಬೆಲೆ ಏರಿಕೆ ಕಾಣುತ್ತಿದ್ದು, ಅದು ಕೈಗೆಟುಕದಂತಾಗುತ್ತಿದೆ. ಗೋಧಿ ಸಂಗ್ರಹಣೆ ಕುಸಿದಿದೆ. ಕೇಂದ್ರ ಸರ್ಕಾರ ಗೋದಿ ಖರೀದಿಯನ್ನು ಕಳೆದ ವರ್ಷಕ್ಕಿಂತ ಅರ್ಧಕ್ಕಿಂತ ಕಡಿಮೆ ಮಾಡಿದೆ. ಈ ವರ್ಷ ಸಂಗ್ರಹಣೆಯು 44.4 ಮೆಟ್ರಿಕ್ ಟನ್‌ಗಳ ಗುರಿಗೆ ವಿರುದ್ಧವಾಗಿ 20 ಮೆಟ್ರಿಕ್ ಟನ್‌ಗಳನ್ನು ದಾಟುವುದಿಲ್ಲ.

ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಅಡುಗೆ ಅನಿಲ ಸಿಲಿಂಡರ್‌ಗಳ ಬೆಲೆಗಳ ನಿರಂತರ ಏರಿಕೆ ಮತ್ತು ಗೋಧಿಯ ತೀವ್ರ ಕೊರತೆಯು ಈ ಒಟ್ಟಾರೆ ಹಣದುಬ್ಬರವನ್ನು ಇನ್ನೂ ಮೇಲಕ್ಕೇರಿಸುತ್ತಿವೆ. ಕಲ್ಲಿದ್ದಲು ಕೊರತೆ ಎಂಬ ವರದಿಯಿದ್ದು, ಇದು ವಿದ್ಯುತ್ ವೆಚ್ಚವನ್ನು ಹೆಚ್ಚಿಸುತ್ತದೆ.

ಈ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರವು ಎಲ್ಲಾ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಎಲ್ಲಾ ಸೆಸ್/ಸರ್‌ಚಾರ್ಜ್‌ಗಳನ್ನು ತಕ್ಷಣವೇ ಹಿಂಪಡೆಯಬೇಕು ಮತ್ತು ವಿಶೇಷವಾಗಿ ಅಡುಗೆ ಅನಿಲ ಸಿಲಿಂಡರ್‌ಗಳ ಬೆಲೆ ಏರಿಕೆಗಳನ್ನು ಹಿಂಪಡೆಯಬೇಕು ಎಂದು ಎಡ ಪಕ್ಷಗಳು ಒತ್ತಾಯಿಸಿವೆ. ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಮೂಲಕ ಗೋಧಿ ಪೂರೈಕೆಯನ್ನು ಪುನಃಸ್ಥಾಪಿಸಬೇಕು. ಈ ಬೆಲೆ ಏರಿಕೆಯನ್ನು ತಡೆಯಲು ಪಡಿತರ ವ್ಯವಸ್ಥೆಯನ್ನು ಬಲಪಡಿಸಬೇಕು ಎಂದು ಆಗ್ರಹಿಸಿರುವ ಎಡಪಕ್ಷಗಳು 25–31 ಮೇ ನಡುವೆ ಬೆಲೆ ಏರಿಕೆ ಮತ್ತು ನಿರುದ್ಯೋಗದ ವಿರುದ್ಧ ಐಕ್ಯ ಮತ್ತು ಎಡೆಬಿಡದ ರಾಷ್ಟ್ರವ್ಯಾಪಿ ಹೋರಾಟವನ್ನು ದೇಶಾದ್ಯಂತ ಸಂಯೋಜಿಸಬೇಕು ಎಂದು ತಮ್ಮ ಎಲ್ಲಾ ಘಟಕಗಳಿಗೆ ನಿರ್ದೇಶನ ನೀಡಿವೆ.

ಈ ಹೋರಾಟದ ಬೇಡಿಕೆಗಳು ಹೀಗಿವೆ:

- ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಎಲ್ಲಾ ಹೆಚ್ಚುವರಿ ಶುಲ್ಕಗಳು/ಸೆಸ್‌ಗಳನ್ನು ಹಿಂಪಡೆಯಬೇಕು.
- ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಡಿತರ) ಮೂಲಕ ಗೋಧಿ ಸರಬರಾಜುಗಳನ್ನು ಮತ್ತೆ ಆರಂಭಿಸಬೇಕು.
- ಎಲ್ಲಾ ಅಗತ್ಯ ಸರಕುಗಳನ್ನು ವಿಶೇಷವಾಗಿ ಬೇಳೆಕಾಳುಗಳು ಮತ್ತು ಖಾದ್ಯ ತೈಲವನ್ನು ವಿತರಿಸುವ ಮೂಲಕ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು.
- ನೇರ ನಗದು ವರ್ಗಾವಣೆಯನ್ನು ಎಲ್ಲಾ ಆದಾಯ ತೆರಿಗೆ ವ್ಯಾಪ್ತಿಗೆ ಬರದ ಕುಟುಂಬಗಳಿಗೆ ತಿಂಗಳಿಗೆ 7,500 ರೂ.ಗೆ ಹೆಚ್ಚಿಸಬೇಕು
- ಮನರೇಗಕ್ಕೆ. (MGNREGSಗೆ) ಬಜೆಟ್ ಹಂಚಿಕೆಯನ್ನು ಹೆಚ್ಚಿಸಬೇಕು. ನಿರುದ್ಯೋಗ ಭತ್ಯೆಗಾಗಿ ಕೇಂದ್ರ ಯೋಜನೆಯ ಶಾಸನವನ್ನು ತರಬೇಕು.
- ನಗರ ಪ್ರದೇಶಗಳಿಗೆ ಉದ್ಯೋಗ ಖಾತ್ರಿ ಯೋಜನೆಯ ಕಾನೂನು ತರಬೇಕು.
- ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು.

NEW No. MAG(3)/NPP/205/2021-2022
JANASHAKTHI KANNADA VARA PATRIKE MAY 16-22, 2022 Price: Rs. 10/- Date of Publication: 13 MAY 2022 RNI No. KARKAN /2006/17926 Posted on 16-05-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

ಸಹಯಾನ ಸಾಹಿತ್ಯೋತ್ಸವ-2022
ಉತ್ತರ ಕನ್ನಡ ಸಾಹಿತ್ಯ: ಹೊಸ ತಲೆಮಾರು

ಸುಧಾ ಆಡುಕಳ

ಕೆರೆಕೋಣದ ಸಹಯಾನದ ಅಂಗಳದಲ್ಲಿ ಹನ್ನೊಂದನೆಯ ಸಹಯಾನ ಸಾಹಿತ್ಯೋತ್ಸವ ಉತ್ತರ ಕನ್ನಡ ಸಾಹಿತ್ಯ: ಹೊಸ ತಲೆಮಾರು ಎಂಬ ಪರಿಕಲ್ಪನೆಯಡಿಯಲ್ಲಿ ಜರುಗಿತು. ಹೊಸತಲೆಮಾರಿನ ಬಗ್ಗೆ ಅಪಾರವಾದ ಕಾಳಜಿ ಮತ್ತು ಭರವಸೆಗಳನ್ನು ಹೊಂದಿದ್ದ ಸಾಹಿತಿ, ಚಿಂತಕ ಆರ್.ವಿ. ಭಂಡಾರಿಯವರ ನೆನಪಿನಲ್ಲಿ ಪ್ರತಿವರ್ಷವೂ ಸಾಹಿತ್ಯೋತ್ಸವವನ್ನು ಸಂಘಟಿಸಲಾಗುತ್ತದೆ. ಕಾರ್ಯಕ್ರಮದ ಸರ್ವಾಧ್ಯಕ್ಷತೆಯನ್ನು ವಹಿಸಿದ್ದ ಪ್ರೊ। ಎಂ.ಜಿ. ಹೆಗಡೆಯವರು ರಾಜಕೀಯ ಕಾರಣಗಳಿಗಾಗಿ ತನ್ನ ಗಡಿರೇಖೆಗಳನ್ನು ಬದಲಾಯಿಸಿಕೊಳ್ಳುತ್ತಲೇ ಸಾಗಿರುವ ಉತ್ತರಕನ್ನಡಕ್ಕೆ ನಿರ್ದಿಷ್ಟವಾದ ಗಡಿಗಳನ್ನು ಗುರುತಿಸುವುದು ಹಾಗೂ ಯಾವುದು ಹೊಸ ತಲೆಮಾರು ಎಂಬುದನ್ನು ನಿರ್ಣಯಿಸುವುದು ಎರಡೂ ಅತ್ಯಂತ ಕ್ಲಿಷ್ಟವಾದ ಪ್ರಕ್ರಿಯೆಗಳು ಎಂದರು. ಇದರಿಂದಾಗಿಯೇ ಇಲ್ಲಿಯ ಸಾಹಿತ್ಯವೂ ಗಡಿರೇಖೆಗಳ ಗೋಡೆಯನ್ನು ದಾಟಿ ದೇಶ, ವಿದೇಶಗಳವರೆಗೂ ತನ್ನ ಚಹರೆಗಳನ್ನು ವಿಸ್ತರಿಸಿಕೊಂಡಿದೆ ಎಂದು ಅಭಿಪ್ರಾಯಪಟ್ಟರು.

ಸಾಹಿತ್ಯೋತ್ಸವವನ್ನು ಉದ್ಘಾಟಿಸಿದ ಖ್ಯಾತ ಸಾಹಿತಿ ಚಿಂತಾಮಣಿ ಕೊಡ್ಲೆಕೆರೆಯವರು ಸಾಹಿತ್ಯವೆಂಬುದು ಜನರನ್ನು ಬೆಸೆಯುವ ತಂತು, ಹಾಗಾಗಿಯೇ ಸಾಹಿತಿಗಳೆಲ್ಲರನ್ನು ನುಡಿಸೋದರರು ಎನ್ನಲಾಗುತ್ತದೆ ಎಂದರು. ಹೊಸತಲೆಮಾರಿನ ಸಾಹಿತಿಗಳ ವಿಶಿಷ್ಟವಾದ ಗುಣಲಕ್ಷಣಗಳು ಮತ್ತು ಅವರ ಸಾಹಿತ್ಯಾವಲೋಕನದಿಂದ ಕಂಡುಕೊಂಡ ಅನೇಕ ಹೊಳಹುಗಳನ್ನು ವಿವರಿಸುತ್ತಾ ಇದು ಹಲವು ಒಂಟಿದನಿಗಳ ಕಾಲವೆಂದು ಬಣ್ಣಿಸಿದರು. ಡಾ। ಶ್ರೀಪಾದ ಭಟ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮಾಧವಿ ಭಂಡಾರಿ ಕಾರ್ಯಕ್ರಮವನ್ನು ನಿರೂಪಿಸಿದರು. ಪದ್ಮಶ್ರೀ ಪ್ರಶಸ್ತಿ ವಿಜೇತ ತುಳಸಿ ಗೌಡ ಅವರನ್ನು ಸನ್ಮಾನಿಸಲಾಯಿತು. ಹಾಲಕ್ಕಿ ಹಾಡುಗಳು ಕಾರ್ಯಕ್ರಮವನ್ನು ಕಳೆಗಟ್ಟಿಸಿದವು.

ನಂತರ ನಡೆದ ಸಾಹಿತ್ಯ ಗೋಷ್ಠಿಯಲ್ಲಿ ರಾಜೀವ ನಾಯ್ಕ ಕೋನಳ್ಳಿಯವರು 'ಉತ್ತರ ಕನ್ನಡ ಕಾವ್ಯ : ಹೊಸ ತಲೆಮಾರು', ಸುಧಾ ಆಡುಕಳ ಅವರು 'ಉತ್ತರ ಕನ್ನಡ ಕಥನ ಸಾಹಿತ್ಯ : ಹೊಸ ತಲೆಮಾರು' ಹಾಗೂ ಸುಬ್ರಾಯ ಮತ್ತಿಹಳ್ಳಿಯವರು 'ಉತ್ತರ ಕನ್ನಡ ವೈಚಾರಿಕ ಸಾಹಿತ್ಯ ; ಹೊಸ ತಲೆಮಾರು' ವಿಷಯಗಳ ಬಗ್ಗೆ ಪ್ರಬಂಧಗಳನ್ನು ಮಂಡಿಸಿದರು. ಕಿರಣ ಭಟ್ ಕಾರ್ಯಕ್ರಮವನ್ನು ನಿರ್ವಹಿಸಿದರು. ಸರ್ವಾಧ್ಯಕ್ಷರಾದ ಡಾ। ಎಂ.ಜಿ. ಹೆಗಡೆಯವರು ಸಮನ್ವಯದ ನುಡಿಗಳನ್ನಾಡಿದರು.

ಸಂಜೆ ನಡೆದ ಕವಿಗೋಷ್ಠಿಯಲ್ಲಿ ಉತ್ತರ ಕನ್ನಡದ ಹೊಸ ತಲೆಮಾರಿನ ಕವಿಗಳಾದ ಫಾಲ್ಗುಣ ಗೌಡ, ನಾಗರಾಜ ಹೆಗಡೆ ಅಪಗಾಲ, ಗಿರಿಜಾ ಹೆಗಡೆ, ಉಮೇಶ ನಾಯ್ಕ, ಗಣೇಶ ಹೊಸ್ಮನೆ, ಸಿಂಧು ಚಂದ್ರ, ರೇಣುಕಾ ರಮಾನಂದ, ಜಯಶೀಲ ಅಗೇರ, ಸಚಿನ್ ಅಂಕೋಲಾ, ನಾಗರೇಖಾ ಗಾಂವಕಾರ, ವಿದ್ಯಾಧರ ಕಡತೋಕಾ, ನಿವೇದಿತಾ ಕೋಳಂಬಕರ್, ಪ್ರಮೋದ ಕಡತೋಕಾ, ಸಂಧ್ಯಾ ನಾಯ್ಕ ತಮ್ಮ ಕವನಗಳನ್ನು ವಾಚಿಸಿದರು. ಡಾ। ಎಚ್.ಎಸ್. ಅನುಪಮಾ ಅವರು ಆಶಯ ನುಡಿಗಳನ್ನಾಡಿದರು. ಕಾವ್ಯಶ್ರೀ ಮನಮನೆ ಕಾರ್ಯಕ್ರಮವನ್ನು ನಿರೂಪಿಸಿದರು.





ಸಮಾರೋಪ ನುಡಿಗಳನ್ನಾಡಿದ ಸುಮುಖಾನಂದ ಜಲವಳ್ಳಿಯವರು ಹೊಸಕಾಲಘಟ್ಟ ಸಾಹಿತ್ಯಕ್ಕೆ ತಂದಿರುವ ಕುತ್ತುಗಳ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿದರು. ವಿಮಲಾ ಕೆ.ಎಸ್. ಅತಿಥಿಗಳಾಗಿ ಭಾಗವಹಿಸಿದ ಕಾರ್ಯಕ್ರಮವನ್ನು ಛಾಯಾ ಐ.ಕೆ. ನಿರೂಪಿಸಿದರು. ಸಹಯಾನದಲ್ಲಿ ಜತೆಯಾದ ಎಲ್ಲರನ್ನು ಯಮುನ ಗಾಂವಕರ ಅವರು ವಂದಿಸಿದರು.

ನಂತರ ಚಿಂತನ ರಂಗ ಅಧ್ಯಯನ ಕೇಂದ್ರದ ಕಲಾವಿದರಿಂದ ಡಾ।ಶ್ರೀಪಾದ ಭಟ್ ಮತ್ತು ಕಿರಣ್ ಭಟ್ ಅವರ ನಿರ್ದೇಶನದಲ್ಲಿ ಅಂಧೇರ್ ನಗರಿ ಚೌಪಟ್ ರಾಜ ಎಂಬ ನಾಟಕವು ಪ್ರದರ್ಶನಗೊಂಡಿತು. ಚಿಂತನ ಉತ್ತರಕನ್ನಡ, ಸಮುದಾಯ ಕರ್ನಾಟಕ, ಯಕ್ಷಕಿರೀಟ, ಚಿಗುರುಗಳು ಮತ್ತು ಸಹಯಾನ ಕೆರೆಕೋಣ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕಾರ್ಯಕ್ರಮವು ಆಯೋಜನೆಗೊಂಡಿತ್ತು. ವಿದ್ವಾನ್ ವಿಶ್ವನಾಥ ಹಿರೇಮಠ ಮತ್ತು ಸಮುದಾಯದ ಸಂಗಾತಿಗಳು ಕಾರ್ಯಕ್ರಮದ ನಡುನಡುವೆ ಸುಶ್ರಾವ್ಯವಾದ ಗಾನಸುಧೆಯನ್ನು ಹರಿಸಿದರು.

ವಿಶಾಲ ಹರವಿನ ವಿದ್ವಾಂಸ
ಡಾ. ಜಿ. ಭಾಸ್ಕರ ಮಯ್ಯ ರ ನೆನಪು



ಅವರು ವಿಚಾರವಾದಿಯಾಗಿದ್ದರು, ಬರಹ ಗಾರರಾಗಿದ್ದರು, ಉತ್ತಮ ಅನುವಾದಕರಾಗಿದ್ದರು, ಮಾನವೀಯತೆ ಉಳ್ಳವರಾಗಿದ್ದರು, ಬಾವುಕ ಗುಣದವರೂ ಆಗಿದ್ದರು, ಡಾ. ಜಿ. ಮಯ್ಯರವರು ಚೌಕಟ್ಟನ್ನು ಮೀರಿದ ವ್ಯಕ್ತಿತ್ವದವರಾಗಿದ್ದರು ಎಂಬುದಾಗಿ ಖ್ಯಾತ ಶಿಕ್ಷಣ ತಜ್ಞ ಡಾ.ಮಹಬಲೇಶ್ವರ ರಾವ್ ಹೇಳಿದರು. ಖ್ಯಾತ ವಿಚಾರವಾದಿ ಬರಹಗಾರ ಡಾ. ಜಿ. ಭಾಸ್ಕರ ಮಯ್ಯ ಅವರು 1 ವರ್ಷದ ಹಿಂದೆ ಕೋವಿಡ್‌ಗೆ ಬಲಿಯಾಗಿದ್ದು, ಮೇ 8 ರಂದು ಕುಂದಾಪುರದಲ್ಲಿ ನಡೆದ ವಾರ್ಷಿಕ ಸಂಸ್ಮರಣ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಉಡುಪಿಯ ಡೇವಿಡ್ ಕರ್ಕಡ ಸ್ಮಾರಕ ಟ್ರಸ್ಟ್ ಮತ್ತು ಕುಂದಾಪುರ ಸಮುದಾಯ ಜಂಟಿಯಾಗಿ ಜಿ. ಭಾಸ್ಕರ ಮಯ್ಯರ ಸಂಸ್ಮರಣ ಕಾರ್ಯಕ್ರಮ ಹಾಗೂ ಅವರು ಅನುವಾದಿಸಿದ "ಹರಿಶಂಕರ ಪರಸಾಯಿಯವರ ಕಥೆಗಳು ಭಾಗ 3" ರ ಲೋಕಾರ್ಪಣ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಡಾ. ಮಹಾಬಲೇಶ್ವರ ರಾವ್ ಅವರು ಪುಸ್ತಕದ ಲೋಕಾರ್ಪಣೆ ನಡೆಸಿ ಮಾತನಾಡುತ್ತಿದ್ದರು.

ಕಾಲೇಜು ವ್ಯಾಸಂಗದ ದಿನಗಳಲ್ಲಿ ಸಹಪಾಟಿಯಾದಂದಿನಿಂದ ಕೊನೆಯವರೆಗೂ ಅವಿಚ್ಛಿನ್ನವಾದ ಸ್ನೇಹ ತಮ್ಮದಾಗಿತ್ತು. ಪ್ರಸಿದ್ಧ ಖಾಸಗಿ ಶಿಕ್ಷಣ ಸಂಸ್ಥೆಯೊಂದರ ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವಾಗಲೇ, ಜಿ.ಭಾಸ್ಕರ ಮಯ್ಯರು ದಲಿತರನ್ನು ಸಂಘಟಿಸಿ ಹೋರಾಟ ಮಾಡಿದ್ದು, ಮೂಢನಂಬಿಕೆಗಳ ವಿರುದ್ಧವಾಗಿ ಚಟುವಟಿಕೆ ನಡೆಸಿದ್ದು ನಿಜವಾಗಿಯೂ ಸಾಹಸವೇ. ಪ್ರತಿಭೆ, ವಿದ್ವತ್ತಿಗೆ ಮಾನ್ಯತೆ ನೀಡುತ್ತಿದ್ದ ಸಂಸ್ಥೆಯ ಪ್ರಧಾನರು ಇದ್ದುದರಿಂದ ಅವರಂಥವರನ್ನು ಕಾಲೇಜು ಉಳಿಸಿಕೊಂಡಿತೆಂದು ತಾವು ತಿಳಿದುಕೊಂಡಿದ್ದೇನೆ ಎಂದರು.

ಹತ್ತಾರು ಸ್ವಂತ ಪುಸ್ತಕಗಳನ್ನು ತನ್ನದೇ ಪ್ರಕಾಶನದಲ್ಲಿ ಪ್ರಕಟ ಮಾಡಿದ್ದಲ್ಲದೆ, ಶಿಕ್ಷಣ ಕ್ಷೇತ್ರದಲ್ಲಿ ತಾನು ಬರೆದ ಮೊದಲ ಮೂರು ಪುಸ್ತಕಗಳನ್ನು ಡಾ.ಜಿ.ಭಾಸ್ಕರ ಮಯ್ಯರೇ ಪ್ರಕಟಿಸಿದ್ದಾರೆ ಎಂದವರು ಹೇಳಿದರು. ಅವರು ಅನುವಾದಿಸಿರುವ ಪರಸಾಯಿಯವರ ಕತೆಗಳು ತೀಕ್ಷ್ಣ ರಾಜಕೀಯ ವಿಡಂಬನೆಗಳಿಂದ ಕೂಡಿದ್ದಾಗಿರುವುದರಿಂದ ಇಂದಿನ ಸಂದರ್ಭದಲ್ಲಾಗಿದ್ದರೆ, ಹರಿಶಂಕರ ಪರಸಾಯಿಯವರು ಸೆರೆಮನೆ ಸೇರುತ್ತಿದ್ದರೆಂದು ಕಳವಳ ವ್ಯಕ್ತಪಡಿಸಿದರು.



ಇತಿಹಾಸ ಪ್ರಾಧ್ಯಾಪಕ ಹಾಗೂ ಚಲನಚಿತ್ರ ವಿಮರ್ಶಕರಾದ ಡಾ. ಪ್ರದೀಪ್ ಕೆಂಚನೂರು ಅವರು ಬಿಡುಗಡೆಗೊಂಡ ಕೃತಿಯ ಪರಿಚಯ ಮಾಡುತ್ತಾ ವಿಡಂಬನಾ ಸಾಹಿತ್ಯದಲ್ಲಿ ಹರಿಶಂಕರ ಪರಸಾಯಿಯವರ ಕಥೆಗಳು ಹೇಗೆ ವಿಶಿಷ್ಟವಾಗಿವೆ ಎಂದು ವಿವರಿಸಿದರು. ಶ್ರೀಮತಿ ಕಮಲಾ ಮಯ್ಯ ಅವರೂ ಈ ಸಂದರ್ಭದಲ್ಲಿ ಮಾತನಾಡಿದರು. ಸಮುದಾಯ ಕರ್ನಾಟಕದ ರಾಜ್ಯ ಉಪಾಧ್ಯಕ್ಷರಾದ ವಾಸುದೇವ ಉಚ್ಚಿಲ ಅವರು ಜಿ. ಭಾಸ್ಕರ ಮಯ್ಯರ ಆಕ್ಟಿವಿಸಮ್ ಮತ್ತು ಚಿಂತನೆಯ ರೀತಿಯನ್ನು ವಿವರಿಸಿದರು.

ಡೇವಿಡ್ ಕರ್ಕಡ ಸ್ಮಾರಕ ಟ್ರಸ್ಟ್‌ನ ಬಾಲಕೃಷ್ಣ ಶೆಟ್ಟಿ ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ವಿ. ಚಂದ್ರಶೇಖರ ಸ್ವಾಗತಿಸಿದರು. ಸಮುದಾಯ ಕುಂದಾಪುರದ ಕಾರ್ಯದರ್ಶಿ ಸದಾನಂದ ಬೈಂದೂರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಡೇವಿಡ್ ಕರ್ಕಡ ಸ್ಮಾರಕ ಟ್ರಸ್ಟ್‌ನ ಅಧ್ಯಕ್ಷರಾದ ಕೆ. ಶಂಕರ್ ಧನ್ಯವಾದವಿತ್ತರು.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**